Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 | ಸಂಚಿಕೆ–14 | ಮಾರ್ಚ್ 31–ಏಪ್ರಿಲ್ 6, 2025 | ಪುಟ 16 | ರೂ.10
Volume-19 | Issue-14 | March 31-April 6, 2025 | Pages:16 | Price: 10/-

24 ನೆಯ ಸಿಪಿಐ(ಎಂ) ಮಹಾಧಿವೇಶನ: ಮುಂದಿನ ಹಾದಿ





ಸ್ಮಾರ್ಟ್ ಮೀಟರ್ ಹಗರಣ: ಮುಚ್ಚಿಟ್ಟ ಗ್ರಾಹಕರ ಸುಲಿಗೆ



ಅಮೇರಿಕಾ ಸಾಮ್ರಾಜ್ಯ ಉಳಿಸಲು ಟ್ರಂಪ್-ಟೆಕ್ ದೈತ್ಯರ ಹೊಸ ಫಾರ್ಮುಲಾ

- ಕರ್ನಾಟಕ: ಸೊರಗುತ್ತಿರುವ ಆರೋಗ್ಯ ವ್ಯವಸ್ಥೆ
- 'ಅರ್ಬನ್' ಕಂಪನಿ ಕೆಲಸಗಾರರಿಗೆ ಕನಿಷ್ಟ ಸಂಬಳ, ಸಾಮಾಜಿಕ ಭದ್ರತೆಗೆ ಆಗ್ರಹ

ಲಾಭ, ಅತಿಲಾಭ, ಆಕ್ರಮಣ, ಯುದ್ಧ, ತೆರಿಗೆ
ಬ್ರಿಟಿಷ್ ವಿಶ್ವಾಕ್ರಮಣದ ಸಾಧನವಾಗಿ ಪ್ರಜಾಪ್ರಭುತ್ವದ ಬಜೆಟ್

ಭಾಗ 18

ಜಿ.ಎನ್. ನಾಗರಾಜ್

ಕೆನಡಾ ನಮ್ಮ 51ನೆಯ ರಾಜ್ಯ, ಗ್ರೀನ್ ಲ್ಯಾಂಡ್ ನಮ್ಮ ವಶವಾಗಲೇಬೇಕು, ಪನಾಮಾ ಕಾಲುವೆ ನಮ್ಮದೇ, ಗಾಝಾದಲ್ಲಿ ವಿಶ್ವದ ಪ್ರಸಿದ್ಧ ರೆಸಾರ್ಟ್ ಮಾಡುತ್ತೇವೆ, ಉಕ್ರೇನ್ ನಲ್ಲಿನ ಖನಿಜ, ವಿದ್ಯುತ್ ಸ್ಥಾವರಗಳು, ಮೂಲಭೂತ ಸೌಕರ್ಯಗಳನ್ನು ನಮ್ಮ ವಶಕ್ಕೊಪ್ಪಿಸಿ ಎಂಬಂತಹ ಮಾತುಗಳು ದಿನನಿತ್ಯ ಗಡಚುಕ್ಕುತ್ತಿವೆ. ಯುದ್ಧವಿರಾಮದ ಸಮಯದಲ್ಲಿಯೇ ಪ್ಯಾಲೆಸ್ತೈನ್ ಮೇಲೆ ಇಸ್ರೇಲಿನ, ಯೆಮೆನ್ ಮೇಲೆ ಅಮೆರಿಕದ ಬಾಂಬ್ ಧಾಳಿಗಳು ಹಲವು ನೂರು ಜನರನ್ನು ಕೊಲ್ಲುತ್ತಿವೆ. ಯುದ್ಧ ವಿರಾಮದ ಮಾತುಕತೆಗಳ ನಡುವೆಯೇ ಉಕ್ರೇನಿನ ಜನ ಬಲಿಯಾಗುತ್ತಿದ್ದಾರೆ. ಕಾರ್ಮಿಕ ವರ್ಗದ ಪ್ರಭುತ್ವ ಚೀನಾದ ಹುಟ್ಟಡಗಿಸಲು ಟೈವಾನ್, ಫಿಲಿಪೈನ್ಸ್‌ಗಳಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳ, ಕ್ಷಿಪಣಿಗಳ ಸರಬರಾಜು, ನಾಲ್ಕು ದೇಶಗಳ ಕೂಟ, ಮೂರು ದೇಶಗಳ ಕೂಟಗಳು ಸಂಚು ನಡೆಸುತ್ತಿವೆ.

ಅವುಗಳ ಜೊತೆಗೆ ಕ್ಯೂಬಾ, ವೆನೆಜುವೆಲಾ, ದಕ್ಷಿಣ ಆಫ್ರಿಕಾಗಳ ಮೇಲೆ ಹಲವು ರೂಪದ ದಾಳಿ. ಇನ್ನು ಹಲವು ದೇಶಗಳ ಮೇಲೆ ಅಮೆರಿಕ ಸಾರಿದ ಟ್ಯಾರಿಫ್ ಯುದ್ಧಗಳ ಪರಿಯನ್ನು ವರ್ಣಿಸಳವಲ್ಲ. ಇದು 21ನೇ ಶತಮಾನದ ಕತೆ. ಅಮೇರಿಕದ ದಾರ್ಷ್ಟದ ಕತೆ. ಬಂಡವಾಳಶಾಹಿ ಬೆಳೆದು ಮತ್ತೊಂದು ಉತ್ತುಂಗವನ್ನು ಏರಿರುವ ಕಾಲದ ತಲ್ಲಣಗಳ ಕತೆ. ಈಗ ನಮ್ಮ ಲೇಖನ ಸರಣಿಯ ಕಾಲಕ್ಕೆ 17–18ನೆಯ ಶತಮಾನಗಳತ್ತ, ಸೂರ್ಯ ಮುಳುಗದ ಸಾಮ್ರಾಜ್ಯ ಬ್ರಿಟನ್ನಿನ ರಕ್ತ ಸಿಕ್ತ ಚರಿತ್ರೆಯ ಕಾಲದತ್ತ ಹೋಗೋಣ.

ಜಗತ್ತಿನಲ್ಲಿ ಇಂದು ವಿಶ್ವ ಸಂಸ್ಥೆಯ ಸದಸ್ಯರಾಗಿರುವ 193 ಸದಸ್ಯರಲ್ಲಿ 171 ದೇಶಗಳು, ಪ್ರದೇಶಗಳ ಮೇಲೆ ಬ್ರಿಟನ್ ಆಕ್ರಮಣ ಮಾಡಿದೆ. ವಿಶ್ವದ ಮೇಲೆ ತನ್ನ ದಬ್ಬಾಳಿಕೆ, ಯಜಮಾನಿಕೆ ಹೇರುವಲ್ಲಿ 18ನೇ ಶತಮಾನ ಪ್ರಧಾನವಾದದ್ದು. ಇಡೀ ಶತಮಾನ ಯುದ್ಧಗಳು, ಯುದ್ಧಗಳು ಹಲವು ಯುದ್ಧಗಳು. ವಿಶ್ವದ ಆರು ಖಂಡಗಳಲ್ಲಿ ಯುದ್ಧಗಳ ಮೂಲಕ ಬ್ರಿಟನ್ ತನ್ನ ಹಿಡಿತ ಸ್ಥಾಪಿಸಿತು. 19ನೆಯ ಶತಮಾನ, 20ನೆಯ ಶತಮಾನಗಳಲ್ಲಿಯೂ ಬ್ರಿಟನ್ ಆಕ್ರಮಣಗಳು, ಯುದ್ಧಗಳಲ್ಲಿ ತೊಡಗಿತು. ಆದರೆ ಅವುಗಳಲ್ಲಿಯ ಗೆಲುವುಗಳಿಗೆ 18ನೆಯ ಶತಮಾನದಲ್ಲಿನ ಬ್ರಿಟನ್ನಿನ ಯುದ್ಧಗಳು ಮತ್ತು ಗಳಿಸಿದ ಯಶಸ್ಸು ಅಡಿಪಾಯವಾಗಿವೆ.

ಈ ಯುದ್ಧಗಳ ಒಂದು ಪಟ್ಟಿ ನೋಡಿದರೆ ಯಾರಿಗಾದರೂ ಅಬ್ಬಾ! ಎನಿಸುತ್ತದೆ.

1688–97 ರ ಐರ್ಲೆಂಡ್ ಮತ್ತು ಫ್ರಾನ್ಸ್ ಮೇಲೆ ಯುದ್ಧ. ವೆಚ್ಚ 32 ಮಿಲಿಯನ್ ಪೌಂಡ್, ಸಾಲ 14 ಮಿಲಿಯನ್ ಪೌಂಡ್.

1702–14 ರ ಸ್ಪೇನಿನ ಮೇಲೆ, 50 ಮಿ. ಪೌಂಡ್ ವೆಚ್ಚ, ಸಾಲ 21.5 ಮಿ. ಪೌಂಡ್

1739–48 ರ ಸ್ಪೇನ್, ಆಸ್ಟ್ರಿಯಾ ಮೇಲೆ, ವೆಚ್ಚ 43 ಮಿ. ಪೌಂಡ್, ಸಾಲ 30 ಮಿ. ಪೌಂಡ್

1756–63 ರ ಫ್ರಾನ್ಸ್ ಮೇಲೆ ಏಳು ವರ್ಷಗಳ ಯುದ್ಧ, ವೆಚ್ಚ 82 ಮಿ. ಪೌಂಡ್, ಸಾಲ 62 ಮಿ. ಪೌಂಡ್

1776–85ರ ಅಮೆರಿಕದ ಸ್ವಾತಂತ್ರ್ಯದ ವಿರುದ್ಧ, ವೆಚ್ಚ 97 ಮಿ. ಪೌಂಡ್, ಸಾಲ 117 ಮಿ. ಪೌಂಡ್

1793– 1815 ರ ಫ್ರಾನ್ಸ್ ಕ್ರಾಂತಿ, ನೆಪೊಲಿಯನ್ ವಿರುದ್ಧ, ವೆಚ್ಚ 831 ಮಿ. ಪೌಂಡ್, ಸಾಲ 622 ಮಿ. ಪೌಂಡ್.

1854–56 ರ ರಷ್ಯಾದ ಮೇಲೆ, ಕ್ರಿಮಿಯನ್ ಯುದ್ಧ, ವೆಚ್ಚ 70 ಮಿ. ಪೌಂಡ್ ಸಾಲ 39 ಮಿ. ಪೌಂಡ್

ಈ ಪ್ರಮುಖ ವೆಚ್ಚದ ಯುದ್ಧಗಳಲ್ಲದೇ ಅಮೆರಿಕ, ಇಂಡಿಯಾ, ಚೀನಾ, ಆಫ್ರಿಕಾಗಳಲ್ಲಿ ಹಲವು ಯುದ್ಧಗಳಲ್ಲಿ ಬ್ರಿಟನ್ ತೊಡಗಿತ್ತು.

1715–1726 ರ ಅಮೆರಿಕದ ಕೆರಿಬಿಯನ್ ದ್ವೀಪಗಳಲ್ಲಿ ಕಡಲುಗಳ್ಳತನದ ಯುದ್ಧ, ಬ್ರಿಟನ್ನಿನ ವಿಜಯ.

1715–16 ರ ಹಾಗೂ 1745 –46 ರಲ್ಲಿ ಸ್ಕಾಟ್ಲೆಂಡ್ನಲ್ಲಿ ಜಾಕೋಬೈಟ್ ದಂಗೆ ಅಡಗಿಸುವ ಯುದ್ಧ. ಬ್ರಿಟನ್ನ ವಿಜಯ.

1721–26 ರ ಡ್ರಮ್ಮರ್ಸ್ ಯುದ್ಧ.



1749–55 ರ ನಡುವೆ ಲೆ ಲೌತ್ರೆ ಯುದ್ಧ.

1758–61 ರ ನಡುವೆ ಚಿರೂಕಿ ಯುದ್ಧ.

1863–66 ನಡುವೆ ಪಾಂಟಿಯಾಕ್ ದಂಗೆ.

ನಂತರದ ನೇಪಿಯನ್ ದಂಗೆ.

ಅಮೇರಿಕದ ಮೂಲನಿವಾಸಿ ಸಮುದಾಯಗಳ ವಬಾನಕಿ ಮೊದಲಾದ ವಿವಿಧ ಒಕ್ಕೂಟಗಳ ವಿರುದ್ಧ ಯುದ್ಧ. ಫ್ರೆಂಚ್ ಬೆಂಬಲದಿಂದ ಬ್ರಿಟನ್ನ ವಿಜಯ, ಮೂಲನಿವಾಸಿಗಳ ಪ್ರದೇಶದ ಆಕ್ರಮಣ

ಅಮೇರಿಕಾ ಖಂಡದ ಜಮೈಕಾ, ಗ್ರೆನಡಾ ಮೊದಲಾದ ದ್ವೀಪಗಳ ಮೇಲೆ ಯುದ್ಧಗಳು.

ಭಾರತದಲ್ಲಿ 1740–48, 1748–56, 1756–63ರ ನಡುವೆ ಮೂರು ಕರ್ನಾಟಿಕ್ ಯುದ್ಧಗಳು ಬ್ರಿಟಿಷ್ ವಿಜಯ, ಪಾಂಡಿಚೆರಿ ಒಪ್ಪಂದ.

1763–65 ರಲ್ಲಿ ಬಂಗಾಲ, ಔಧ್, ಬಿಹಾರ ಪ್ರಾಂತ್ಯಗಳ ಮೇಲಿನ ವಿಜಯ, ಮೊಘಲ್ ಸಾಮ್ರಾಜ್ಯದ ಅಂತ್ಯ.

1766–99 ರ ನಡುವೆ ಮೈಸೂರು ಸಂಸ್ಥಾನದ ಮೇಲೆ ಹೈದರಾಲಿ, ಟಿಪ್ಪೂರವರ ವಿರುದ್ಧ ನಾಲ್ಕು ಮೈಸೂರು ಯುದ್ಧಗಳು,

ತಮಿಳುನಾಡಿನ ಪಾಳೆಯಗಾರರ ಮೇಲೆ ಯುದ್ಧ, ಮರಾಠಾ ಯುದ್ಧ, ರೋಹಿಲ್ಲಾ ಯುದ್ಧ ಮೊದಲಾದ ಯುದ್ಧಗಳು.

ಸೌದಿ ಸಾಮ್ರಾಜ್ಯ, ಮಧ್ಯ ಪ್ರಾಚ್ಯದ ಮೇಲೆ ಯುದ್ಧಗಳು, ಶ್ರೀಲಂಕಾದ ಕ್ಯಾಂಡಿ ಸಂಸ್ಥಾನ, ಬರ್ಮಾ ಮೊದಲಾದ ಪ್ರದೇಶಗಳ ಮೇಲೆ ಯುದ್ಧಗಳು.

ಹೀಗೆ ಯುದ್ಧಗಳೋ ಯುದ್ಧಗಳು. ಪ್ರಮುಖ ಯುದ್ಧಗಳು ಅವುಗಳ ನಡುವೆ ಮತ್ತೆ ಹಲವು ಯುದ್ಧಗಳು.

ಯುದ್ಧದ ಫಲ ದಕ್ಕಿದ್ದು ಯಾರಿಗೆ?

ಈ ಯುದ್ಧಗಳಲ್ಲಿ ಪ್ರಮುಖವಾದವುಗಳಿಗೆ ತಗುಲಿದ ಅಪಾರ ವೆಚ್ಚವನ್ನು ಮೇಲೆ ನೀಡಲಾಗಿದೆ. ಈ ಅಪಾರ ಮೊತ್ತದ ಹಣ ಯುದ್ಧಕ್ಕೆ ಅಗತ್ಯವಾದ ಶಸ್ತ್ರಾಸ್ತ್ರಗಳ ತಯಾರಿಕೆ, ಯುದ್ಧದ ಅಗತ್ಯ ರಸ್ತೆ, ಸೇತುವೆ ಮೊದಲಾದ ನಿರ್ಮಾಣಗಳಿಗೆ, ಸೈನ್ಯಕ್ಕೆ ಆಹಾರ ಮೊದಲಾದ ಸರಬರಾಜಿನ ಕಾಂಟ್ರಾಕ್ಟ್ ಗಳಿಗೆ ವೆಚ್ಚ ಮಾಡಲ್ಪಟ್ಟಿತು. ಉಕ್ಕು, ಕಬ್ಬಿಣ, ಫಿರಂಗಿ, ಬಂದೂಕು, ಗುಂಡು ತಯಾರಿಕೆ, ಸಮವಸ್ತ್ರ, ಶೂ ಮೊದಲಾದ ಕೈಗಾರಿಕೆಗಳ ಮಾಲಿಕರು, ಇತರ ಕಂಟ್ರಾಕ್ಟರುಗಳು ಅಪರಿಮಿತ ಲಾಭ, ದುರ್ಲಾಭ ಗಳಿಸಿದರು. ಭಾರತದ ಗವರ್ನರ್ ಜನರಲ್ ಗಳಾದ ಕ್ಲೈವ್, ವಾರನ್ ಹೇಸ್ಟಿಂಗ್ಸ್ ಗಳಂತಹ ಅಧಿಕಾರಿಗಳು, ಸೇನಾಧಿಕಾರಿಗಳು ಒಂದಷ್ಟು ಹಣ ಮಾಡಿಕೊಂಡರು. ಈ ಬಂಡವಾಳಶಾಹಿಗಳ ಮನೆಗೆ ಹಣ ಹೊಳೆಯಾಗಿ ಹರಿದು ಬಂದಿತು.

ಈ ಯುದ್ಧಗಳ ಫಲವಾಗಿ ಭಾರತ, ಶ್ರೀಲಂಕಾ, ಬರ್ಮಾ, ಅಬಿಸಿನಿಯಾದಂತಹ ಏಷ್ಯಾ, ಆಫ್ರಿಕಾಗಳ ಹೊಸ ಪ್ರದೇಶಗಳನ್ನು ಬ್ರಿಟನ್ ವಸಾಹತುಗಳನ್ನಾಗಿ ಮಾಡಿಕೊಂಡಿತು. ಅಷ್ಟೇ ಅಲ್ಲದೆ ಫ್ರಾನ್ಸ್, ಸ್ಪೇನ್, ಪೋರ್ಚುಗೀಸ್, ಡಚ್ ವಶದಲ್ಲಿದ್ದ ವಿಶಾಲ ಭೂ ಪ್ರದೇಶ ಕೆನಡಾ, ಈಗಿನ ಅಮೇರಿಕ ಸಂಯುಕ್ತ ಸಂಸ್ಥಾನಗಳ ಒಳಗೆ ಈ ದೇಶಗಳ ಒಳಗಿದ್ದ ಪ್ರದೇಶಗಳು, ಹಲವು ಕೆರಿಬಿಯನ್ ದ್ವೀಪಗಳು, ಯುರೋಪಿನ ಕಪ್ಪು ಸಮುದ್ರಕ್ಕೆ ಪ್ರವೇಶ ನೀಡುವ ಕ್ರಿಮಿಯಾ ಬಂದರು ಪ್ರದೇಶ, ಭಾರತದಲ್ಲಿನ ಫ್ರೆಂಚ್ ವಶದಲ್ಲಿದ್ದ ಅಥವಾ ಫ್ರೆಂಚ್ ಪ್ರಭಾವದಲ್ಲಿದ್ದ ಸಂಸ್ಥಾನಗಳ ಪ್ರದೇಶಗಳು, ಡಚ್ ವಶದಲ್ಲಿದ್ದ ಆಸ್ತಿಗಳು, ಅವರ ವಶದಲ್ಲಿದ್ದ ಜಾವಾ ದ್ವೀಪ ಹೀಗೆ ಹಲವು ಪ್ರದೇಶಗಳನ್ನು ಪಡೆದರು. ಸೂರ್ಯ ಮುಳುಗದ ಸಾಮ್ರಾಜ್ಯವಾದರು.

ಅಷ್ಟೇ ಅಲ್ಲದೆ ಅಂತರರಾಷ್ಟ್ರೀಯ ವಾಣಿಜ್ಯ ಮತ್ತು ವಸಾಹತು ಆಕ್ರಮಣದಲ್ಲಿ ತಮ್ಮ ತೀವ್ರ ಪೈಪೋಟಿದಾರರಾಗಿದ್ದ ಡಚ್, ಫ್ರೆಂಚ್, ಸ್ಪೇನ್, ಬೆಲ್ಜಿಯಂ ಮೊದಲಾದ ಸ್ಪರ್ಧಿಗಳನ್ನು ಮಣಿಸಿದರು. ತಾನೇ ತಾನಾಗಿ ಮೆರೆದರು. ವಿಶ್ವದ ಎಲ್ಲ ಸಮುದ್ರಗಳ ಮೇಲೆ ಬ್ರಿಟನ್ನಿನದೇ ಅಧಿಪತ್ಯವಾಯಿತು. ಈ ಎಲ್ಲವುಗಳ ಪರಿಣಾಮವಾಗಿ ಬ್ರಿಟಿಷ್ ಕೈಗಾರಿಕೆಗಳಿಗೆ ಬೃಹತ್ ವಿಶ್ವ ಮಾರುಕಟ್ಟೆ ಲಭ್ಯವಾಯಿತು. ವಿಶ್ವದೆಲ್ಲೆಡೆಯಿಂದ ಕೈಗಾರಿಕಾ ಕಚ್ಚಾವಸ್ತುಗಳು ಬ್ರಿಟನ್ನಿನ ಕೈಗಾರಿಕೆಗಳಿಗೆ ಲಭ್ಯವಾಯಿತು. ಈ ಎಲ್ಲ ಕೈಗಾರಿಕಾ ಮಾಲಿಕರು, ವ್ಯಾಪಾರಗಾರರ ಬಳಿ ಅಪಾರ ಬಂಡವಾಳ ಸಂಗ್ರಹವಾಯಿತು. ಮತ್ತಷ್ಟು ಕೈಗಾರಿಕೆಗಳ ವಿಸ್ತರಣೆ ಮತ್ತಿತರ ಕಾರ್ಯಗಳ ಮೇಲೆ ಹೂಡಲ್ಪಟ್ಟಿತು. ಮತ್ತಷ್ಟು ಹೆಚ್ಚಿನ ಲಾಭ ತಂದಿತು.

ಯುದ್ಧಗಳ ವೆಚ್ಚ ತೆತ್ತದ್ದು ಯಾರು?

ಈ ಅಪಾರ ವೆಚ್ಚ ಭರಿಸಿದ್ದು ಹೇಗೆ ಎಂಬುದನ್ನು ಮೇಲೆ ನೀಡಿದ ಪಟ್ಟಿಯಲ್ಲಿ ಹೇಳಲಾಗಿದೆ. ಈ ವೆಚ್ಚದ ಬಹುಭಾಗ ಭರಿಸಿದ್ದು ಸಾಲ ಎತ್ತುವ ಮೂಲಕ. ಹಿಂದಿನ ಎರಡು ಲೇಖನಗಳಲ್ಲಿ ವಿವರಿಸಿದಂತೆ ಸಾರ್ವಜನಿಕ ಸಾಲ ಅಥವಾ ಸರ್ಕಾರವೇ ಸಾಲ ಪಡೆಯುವ ಮೂಲಕ. ಹಣವುಳ್ಳ ಹಲವರಿಂದ ಬಾಂಡ್ಗಳು, ಸೆಕ್ಯುರಿಟಿಗಳ ಮೂಲಕ, ಡೆಪಾಸಿಟ್ ಗಳ ಆಧಾರದ ಮೇಲೆ ಬ್ಯಾಂಕುಗಳಿಂದ, ಕೆಲವು ಕಂಪನಿಗಳಿಂದಲೂ ಸರ್ಕಾರ ಸಾಲ ಪಡೆಯುವ ಮೂಲಕ. ಪೇಪರ್ ಹಣ ಮುದ್ರಿಸುವ ಮೂಲಕ.

ಪ್ರಜಾಪ್ರಭುತ್ವ ಹಾಗೂ ಅದರ ಅಂಗವಾಗಿ ಮೂಡಿದ ಬಜೆಟ್ ಬ್ರಿಟನ್ನಿನ ಸಾರ್ವಜನಿಕ ಸಾಲಗಳಲ್ಲಿ ಹೂಡಲು ಯುರೋಪಿನ ಹಲವು ದೇಶಗಳಿಂದ, ಮುಖ್ಯವಾಗಿ ಬಂಡವಾಳ ಸಂಗ್ರಹಣೆ ಗಣನೀಯವಾಗಿದ್ದು, ಬ್ರಿಟನ್ ನಿಂದ ಸೋತು ಆ ಬಂಡವಾಳ ಹೂಡಲು ಅವಕಾಶ ಕುಗ್ಗಿದ್ದ ಹಾಲಂಡ್ನಿಂದ. ಈ ರೀತಿ ಹಣ ಹೂಡಿದವರಿಗೆ ವಾರ್ಷಿಕ ಶೇ. 3ರಿಂದ ಶೇ. 5ರವರೆಗೆ ಬಡ್ಡಿ ನೀಡುವ ಆಧಾರದ ಮೇಲೆ ಮತ್ತು ಐದು, ಹತ್ತು ವರ್ಷಗಳಲ್ಲಿ ಬಾಂಡ್ ಇತ್ಯಾದಿಗಳನ್ನು ಮುರಿಸಿಕೊಂಡು ಹಣ ವಾಪಸ್ ಮಾಡಬಹುದು ಎಂಬ ಆಧಾರದ ಮೇಲೆ. ಈ ಬಾಂಡ್ ಗಳನ್ನೇ ಮಾರಾಟ ಮಾಡುವ ಜೂಜು ಮಾರುಕಟ್ಟೆ ಕೂಡಾ ಬೆಳೆದ ಬಗ್ಗೆ ಹಿಂದಿನ ಲೇಖನವೊಂದರಲ್ಲಿ ವಿವರಿಸಲಾಗಿದೆ.

ಈ ರೀತಿ 30ರಿಂದ 600 ಮಿಲಿಯನ್ ಪೌಂಡ್ ಗಳವರೆಗೆ ಸಾರ್ವಜನಿಕ ಸಾಲ ಎತ್ತಲಾಯಿತು. ಈ ಪ್ರಕ್ರಿಯೆಯಲ್ಲಿ ಲಂಡನ್ ವಿಶ್ವದ ಹಣಕಾಸು ಬಂಡವಾಳ ವ್ಯವಹಾರದ ಕೇಂದ್ರವಾಯಿತು. ಪ್ರಸಿದ್ಧ ರಾತ್ಸ್ಚೈಲ್ಡ್ ಮೊದಲಾದ ಬ್ರಿಟನ್ನಿನ ಐದು ಖಾಸಗಿ ಬ್ಯಾಂಕರ್ ಗಳು ಹಣಕಾಸು ವ್ಯವಹಾರದ ಜಾಗತಿಕ ಬ್ಯಾಂಕುಗಳಾಗಿ ಬೆಳೆದವು.

ಹೀಗೆ ಯುದ್ಧಗಳಿಂದ, ಹೆಚ್ಚಿದ ಉತ್ಪಾದನೆ, ವ್ಯಾಪಾರಗಳಿಂದ ಲಾಭ ಪಡೆದ ಸಣ್ಣ ಸಣ್ಣ ಬಂಡವಾಳವುಳ್ಳ ಶ್ರೀಮಂತರು ಸರ್ಕಾರಕ್ಕೇ ಸಾಲ ನೀಡಿದರು. ಹೀಗಾಗಿ ಈ ಶ್ರೀಮಂತರು ಯುದ್ಧಕ್ಕೆ ಅಗತ್ಯವಾದ ಸಾಲ ನೀಡಿ ಬ್ರಿಟನ್ನಿನ ಗೆಲುವಿನ ರೂವಾರಿಗಳಾದರು ಎಂದು ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಅಷ್ಟೂ ಹಣ ಸಾಲಗಳು, ಬಡ್ಡಿ ಸಮೇತ ವಾಪಸ್ ಮಾಡಬೇಕಾದ ಸಾಲಗಳು. ಈ ಸಾಲಗಳನ್ನು ಸರ್ಕಾರಗಳು ತೀರಿಸುವುದು ಹೇಗೆ? ಸರ್ಕಾರದ ಆದಾಯದ ಮೂಲವೇನು? ಉತ್ತರವನ್ನು ಬಜೆಟ್ ಗಳು ಬಹಳ ಸ್ಪಷ್ಟವಾಗಿ ನೀಡುತ್ತವೆ: ತೆರಿಗೆಗಳು ಎಂದು ಪ್ರತಿ ಬಜೆಟ್ ನಲ್ಲಿ ಆಯಾ ವರ್ಷ ಸಾರ್ವಜನಿಕ ಸಾಲಗಳ ಬಾಬತ್ತಿಗೆ ಸರ್ಕಾರ ತೆರಬೇಕಾದ ಮೊತ್ತ ಸರ್ಕಾರದ ವೆಚ್ಚದ ಖಾತೆಗೆ ಸೇರಿಸಲಾಗುತ್ತದೆ.

ಜನಬಳಕೆ ವಸ್ತುಗಳ ಮೇಲೆ ತೆರಿಗೆಗಳು

ಬ್ರಿಟನ್ನಿನ ಸರ್ಕಾರದ ಆದಾಯದ ಮೂಲಗಳಲ್ಲಿ ಪ್ರಧಾನವಾದುವು ಹಿಂದಿನ ಲೇಖನದಲ್ಲಿ ವಿವರಿಸಿದಂತೆ ವಸ್ತುಗಳ ಮಾರಾಟದ ಮೇಲೆ ಹಾಕುವ ಎಕ್ಸೈಸ್ ತೆರಿಗೆಗಳು, ಬಂದರು ಶುಲ್ಕಗಳು ಅಥವಾ ಆಮದು– ರಫ್ತು ಸುಂಕಗಳು. ಈ ಎರಡೂ ತೆರಿಗೆಗಳು ಜನಬಳಕೆ ವಸ್ತುಗಳ ಮೇಲೆ ಹಾಕಿದ ತೆರಿಗೆಗಳು. ಈ ಎರಡನ್ನೂ ಅಪ್ರತ್ಯಕ್ಷ ತೆರಿಗೆಗಳು, ಬಳಕೆ ಸುಂಕಗಳು (ಕನ್ಸಂಪ್ಷನ್ ಟ್ಯಾಕ್ಸ್) ಎಂದೂ ಕರೆಯುತ್ತಾರೆ. ಈ ತೆರಿಗೆಗಳು ವಸ್ತುಗಳ ಬೆಲೆಯೊಳಗೆ ಸೇರಿಕೊಂಡು ಜನರಿಗೆ ತಾವು ಕೊಳ್ಳುವ ವಸ್ತುಗಳ ಬೆಲೆಗಳೇ ಅಷ್ಟು ಎಂಬ ಭ್ರಮೆಯನ್ನು ಮೂಡಿಸುತ್ತವೆ. ಒಟ್ಟಿನಲ್ಲಿ ಆಮದು– ರಫ್ತು ಸುಂಕವಾಗಲಿ, ಎಕ್ಸೈಸ್ ತೆರಿಗೆಯಾಗಲಿ ಅಂತಿಮವಾಗಿ ಅದನ್ನು ಪುಟ 10 ಕ್ಕೆ

ಸಂಪಾದಕೀಯ

ಶಾಸಕರು, ಸಚಿವರ ವೇತನ ಹೆಚ್ಚಳ: ಅಸಮರ್ಥನೀಯ, ಅನ್ಯಾಯ

ಕರ್ನಾಟಕ ರಾಜ್ಯದ ಶಾಸಕರು, ಮುಖ್ಯಮಂತ್ರಿ, ಮಂತ್ರಿ ಮಹೋದಯರ ವೇತನ ಏರಿಕೆಯಾಗಿದೆ. ಎಷ್ಟು? ಬಹುತೇಕ ಶೇ.100 ರಷ್ಟು. ಅಂದರೆ ಎರಡು ಪಟ್ಟು. ಒಂದೇ ಬಾರಿಗೆ, ಯಾವ ಚರ್ಚೆಯೂ ಇಲ್ಲ, ಸಣ್ಣ ವಿರೋಧವೂ ಇಲ್ಲ. ಇಲ್ಲಿ ವಿರೋಧ ಪಕ್ಷದವರೂ ಸೊಲ್ಲೆತ್ತಲಿಲ್ಲ, ಯಾವ ಪ್ರಶ್ನೆಯನ್ನೂ ಕೇಳಲಿಲ್ಲ ಎನ್ನುವುದು ಗಮನಾರ್ಹ.

ಇದಕ್ಕಾಗಿಯೇ ರಾಜ್ಯ ವಿಧಾನ ಸಭೆಯ 240 ಸ್ಥಾನಗಳಿಗೆ ರಾಜ್ಯದ ಜನತೆ ಮತ ನೀಡಿ ಗೆಲ್ಲಿಸಿದ್ದಾರೆಯೇ ಎಂಬ ಪ್ರಶ್ನೆ ಏಳುತ್ತದೆ. ಈ ಅಮೋಘ ತೀರ್ಮಾನದಿಂದ ರಾಜ್ಯದ ಖಜಾನೆಗೆ ಪ್ರತಿ ವರ್ಷ 62 ಕೋಟಿ ರೂ. ಹೊರೆ ಆಗಲಿದೆ.

ಜೀವನ ವೆಚ್ಚದಲ್ಲಿ ಗಣನೀಯ ಏರಿಕೆಯಾಗಿದೆ, ವೇತನ ಹೆಚ್ಚಳ ಅಗತ್ಯವಾಗಿತ್ತು ಎಂಬ ವಾದವನ್ನು ಮಂಡಿಸಲಾಗಿದೆ. ನಿಜ. ಜೀವನ ವೆಚ್ಚದಲ್ಲಿ ಏರಿಕೆಯಾಗಿದೆ. ಒಪ್ಪಬೇಕಾದದ್ದೆ. ಆದರೆ ಜೀವನ ವೆಚ್ಚದಲ್ಲಿ ಏರಿಕೆಯಾಗಿರುವುದು ಕೇವಲ ಶಾಸಕರು, ಮಂತ್ರಿಗಳಿಗೆ ಮಾತ್ರವೇ? ಜನ ಸಾಮಾನ್ಯರ ಪಾಡೇನು? ಬಡ ಕೂಲಿಕಾರರು, ದಲಿತರು, ಆದಿವಾಸಿಗಳು, ಅಲೆಮಾರಿಗಳು, ರೈತರು, ಕಾರ್ಮಿಕರ ಬದುಕೇನಾಗಿದೆ? ಅವರಿಗೆಲ್ಲಾ ಜೀವನ ವೆಚ್ಚ ದಿನೇ ದಿನೇ ಕಡಿಮೆಯಾಗುತ್ತಿದೆಯೇ? ಸರಕಾರದ ವಿವಿಧ ಇಲಾಖೆಗಳ ಅಡಿಯಲ್ಲಿ ಕೆಲಸ ಮಾಡುತ್ತಿರುವ ಗುತ್ತಿಗೆ ನೌಕರರು, ಸ್ಕೀಮ್ ನೌಕರರು ಮುಂತಾದವರಿಗೆಲ್ಲಾ ಜೀವನ ವೆಚ್ಚ ಕುಸಿಯುತ್ತಾ ಹೋಗಿದೆಯೇನು? ಸರ್ಕಾರದ ಈ ವಾದ ಒಪ್ಪುವುದಾದರೆ ಎಲ್ಲ ದುಡಿಯುವ ಜನರ ವೇತನವನ್ನು ಡಬಲ್ ಮಾಡಲು ಸರಕಾರ ಕ್ರಮ ವಹಿಸಬೇಕಿತ್ತಲ್ಲವೇ? ವಿರೋಧ ಪಕ್ಷಗಳು ಈ ವಿಷಯದಲ್ಲಿ ಯಾವ ಒತ್ತಾಯ ಮಾಡಿವೆ? ಹೇಗೆ ಚಾಟಿ ಬೀಸಿವೆ? ಶೇ.100 ರಷ್ಟು ವೇತನ ಏರಿಕೆ ಮಾಡಿಕೊಳ್ಳಲು ಏನಾದರೂ ವೈಜ್ಞಾನಿಕ ಆಧಾರವಾದರೂ ಇದೆಯೇ?

ಮುಖ್ಯಮಂತ್ರಿಗಳ ವೇತನ ತಿಂಗಳಿಗೆ 75,000 ರೂಪಾಯಿ ಇದ್ದದ್ದು ರೂ. 1.5 ಲಕ್ಷ ರೂಪಾಯಿಗೆ, ಶಾಸಕರ ವೇತನ 50,000 ರೂಪಾಯಿಯಿಂದ 75,000 ರೂಪಾಯಿಗೆ, ಸಚಿವರ ವೇತನ 60,000 ರೂಪಾಯಿಯಿಂದ 1.25 ಲಕ್ಷ ರೂಪಾಯಿಗೆ ಏರಿದೆ. ಇವಲ್ಲದೇ ಮನೆ ಬಾಡಿಗೆ, ಸಚಿವರು ಮುಂತಾದವರಿಗೆ ಅತಿಥಿ ಭತ್ಯೆ, ಪ್ರಯಾಣ ಭತ್ಯೆ, ದೂರವಾಣಿ ಭತ್ಯೆ, ನಿವೃತ್ತಿಯ ನಂತರ ಪಿಂಚಣಿ ಮುಂತಾದವು ಇದ್ದೇ ಇವೆ.

ಶಾಲೆಗಳಲ್ಲಿ ಮಕ್ಕಳಿಗೆ ಬಿಸಿಯೂಟ ಮಾಡಿ ಬಡಿಸುವ ನೌಕಕರನ್ನು ಸರಕಾರ 'ಚಿಲ್ಲರೆ ಕಾಸಿಗೆ' ದುಡಿಸಿಕೊಳ್ಳುತ್ತಿದೆ. ಅಂಗನವಾಡಿ ನೌಕರರ ವೇತನ ದುಡಿಮೆಗೆ ತಕ್ಕ ಪ್ರತಿಫಲವೇ? ಗ್ರಾಮ ಪಂಚಾಯತಿ ನೌಕರರು, ಆಶಾ ಇನ್ನೂ ಹೀಗೆ ದೀರ್ಘ ಪಟ್ಟಿ ಮಾಡಬಹುದು. ಅಸಂಘಟಿತ ವಲಯದ ಕಾರ್ಮಿಕರಿಗೆ ಸರಕಾರ ಕನಿಷ್ಟ ಗೌರವದ ಕನಿಷ್ಟ ವೇತನವನ್ನೂ ನಿಗದಿ ಮಾಡಿಲ್ಲ. ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಹೆಚ್ಚಳದ ಬೇಡಿಕೆ ಬಗೆಗೆ ಕೇಳುವವರೇ ಇಲ್ಲ. ಕರ್ನಾಟಕದ ಭಾಷೆ, ಸಂಸ್ಕೃತಿಗಳ ಪ್ರಗತಿಯ ದೃಷ್ಟಿಯಿಂದ ಅಮೋಘ ಕೊಡುಗೆ ಕೊಡುತ್ತಾ ಬಂದಿರುವ ಹಂಪಿ ಕನ್ನಡ ವಿಶ್ವ ವಿದ್ಯಾಲಯವು ಅಗತ್ಯ ಅನುದಾನವಿಲ್ಲದೇ ಸೊರಗಿದೆ. ಆರಂಭಿಸಿದ ಅನೇಕ ವಿ.ವಿ.ಗಳನ್ನು ಮುಚ್ಚಲಾಗುತ್ತಿದೆ. ಇವೆಲ್ಲಾ ಕೆಲವು ಉದಾಹರಣೆಗಳಷ್ಟೆ. ಈ ಯಾವುದರ ಬಗೆಗೆ ಇಲ್ಲದ ಸರ್ವಾನುಮತವು ಶಾಸಕ-ಮಂತ್ರಿಗಳ ವೇತನ ದ್ವಿಗುಣಗೊಳಿಸುವ ವಿಷಯದಲ್ಲಿ ಮೂಡಿ ಬಂದಿದೆಯಲ್ಲ, ಅದು ನಮ್ಮ ರಾಜ್ಯದ ರಾಜಕೀಯ ಪರಿಸ್ಥಿತಿಯ ಶೋಚನೀಯ ಸ್ಥಿತಿಯ ದ್ಯೋತಕ. ಅಂದರೆ ರಾಜ್ಯದ ದುಡಿಯುವ ಜನರ ಹಿತವನ್ನು ಪ್ರತಿನಿಧಿಸುವ ಒಬ್ಬರಾದರೂ ಶಾಸಕರೂ ಶಾಸಕ ಸಭೆಯಲ್ಲಿ ಇಲ್ಲ.

ರಾಜ್ಯದ ಶಾಸಕರಲ್ಲಿ ನಿಜಕ್ಕೂ ಸರಕಾರದ ವೇತನವನ್ನು ನಂಬಿ ಬದುಕುವವರು ಎಷ್ಟು ಎಂಬ ಮತ್ತೊಂದು ಗಂಭೀರ ಪ್ರಶ್ನೆ ಇದೆ. ರಾಜ್ಯದ ಅನೇಕ ಶಾಸಕರು ನೂರಾರು, ಸಾವಿರಾರು ಕೋಟಿ ರೂ.ಗಳ ಒಡೆಯರಾಗಿ 'ಮೆರೆಯುತ್ತಿದ್ದಾರೆ'. ಕರ್ನಾಟಕದ 31 ಶಾಸಕರು ಬಿಲಿಯನೇರ್ ಗಳು. ಬಹಳಷ್ಟು ಶಾಸಕರು ತಮ್ಮದೇ ವ್ಯಾಪಾರ-ವಹಿವಾಟು, ಕೈಗಾರಿಕೆ-ಗಣಿಗಾರಿಕೆ, ಶಿಕ್ಷಣೋದ್ಯಮ, ರಿಯಲ್ ಎಸ್ಟೇಟುಗಳು ಸಾಲದೆಂದು, ಬೇನಾಮಿ ಚಟುವಟಿಕೆಗಳಿಂದ ಅಪಾರ ಆದಾಯ ಇರುವವರೂ ವೇತನ ಏರಿಕೆ ಪರವಾಗಿರುವುದು ನೋಡಿದಾಗ ನಮ್ಮ ಜನ ಪ್ರತಿನಿಧಿಗಳ ಧನದಾಹ ಅಘಾತಕಾರಿಯಾಗಿ ಕಾಣುತ್ತದೆ.

ಬಸ್ಸು-ಮೆಟ್ರೋ-ಹಾಲು-ವಿದ್ಯುತ್-ನೀರು ಅಲ್ಲದೇ ಜೀವನಾವಶ್ಯಕ ವಸ್ತುಗಳ ನಿರಂತರ ಬೆಲೆ ಏರಿಕೆಯಿಂದ ತತ್ತರಿಸಿರುವ ಜನರ ಬಗೆಗೆ ಗಮನವೇ ಯಾವ ಪ್ರತಿನಿಧಿಗಳಿಗೂ ಇಲ್ಲದಿರುವುದು ಗಾಢವಾದ ಆಕ್ರೋಶದ ವಿಷಾದವನ್ನು, ಕಡು ವಿರೋಧವನ್ನು ತರುತ್ತದೆ. ಹೀಗಾಗಿ ಇದರ ವಿರುದ್ಧ ಜನ ದನಿ ಎತ್ತಬೇಕಿದೆ.

ಅರ್ಬನ್ ಕಂಪನಿಯು ಮನೆಗೆಲಸದವರಿಗೆ ಕನಿಷ್ಠ ಸಂಬಳ, ಸಾಮಾಜಿಕ ಭದ್ರತೆ ಕೊಡಬೇಕು-ಸಿಐಟಿಯು ಆಗ್ರಹ
"ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಮನೆಗೆಲಸದವರ ಹಕ್ಕುಗಳ ರಕ್ಷಣೆಗೆ ಕಾನೂನು ಚೌಕಟ್ಟು ಒದಗಿಸಬೇಕು"

'ಅರ್ಬನ್ ಕಂಪನಿ' ಎಂಬ ಕಂಪನಿಯು ಮನೆ 'ಸೇವಕಿ'ಯರನ್ನು ಒದಗಿಸುವ ಹೊಸ ಸೇವೆಯನ್ನು ಆರಂಭಿಸಿದೆ. ಇದು 15 ನಿಮಿಷಗಳೊಳಗೆ ಗಂಟೆಗೆ 49ರೂ. ಸಂಭಾವನೆಗೆ ಮನೆಗೆಲಸದವರನ್ನು ಲಭ್ಯಗೊಳಿಸುವುದಾಗಿ 'ಭರವಸೆ' ನೀಡುತ್ತದೆ. ಇದು ನಮ್ಮ ದೇಶದಲ್ಲಿ ಸಂಬಳಕ್ಕೆ ದುಡಿಯುವ ಮನೆಗೆಲಸದವರ ಶೋಷಣೆಯನ್ನು ಮತ್ತು ಅಮಾನವೀಯ ನಡೆಯನ್ನು ಮುಂದುವರೆಸುವ ಮತ್ತೊಂದು ಉದಾಹರಣೆಯಾಗಿದೆ ಎಂದು ಅಖಿಲ ಭಾರತ ಮನೆಕೆಲಸದವರ ಸಮನ್ವಯ ಸಮಿತಿ(ಸಿಐಟಿಯು) ಹೇಳಿದೆ.

ಇಂತಹ 'ಪ್ಲಾಟ್‌ಫಾರಂ"ಗಳು ಕಾರ್ಮಿಕರಿಗೆ ಕಮಿಷನ್ ವಿಧಿಸುತ್ತವೆ, ಇದು ಕಾಲಾನಂತರದಲ್ಲಿ ಹೆಚ್ಚಾಗುತ್ತಲೇ ಹೋಗುತ್ತದೆ ಎಂದು ಎಲ್ಲರಿಗೂ ತಿಳಿದಿದೆ. ಇದು ಅಂತಹ 'ಗಿಗ್' ಕಾರ್ಮಿಕರ ತೀವ್ರ ಶೋಷಣೆಗೆ ಕಾರಣವಾಗುತ್ತದೆ. ಆದ್ದರಿಂದ ಈ ಕೆಲಸಗಾರರು ಗ್ರಾಹಕರು ತೆರಬೇಕಾದ ವೆಚ್ಚ ಎಂದು ಜಾಹೀರಾತು ಮಾಡಲಾದ ಮೊತ್ತವನ್ನು ಸಹ ಪಡೆಯುವ ಸಾಧ್ಯತೆಯಿಲ್ಲ; ಗಂಟೆಗೆ 100 ರೂ. ಕನಿಷ್ಟ ಸಂಬಳ ನೀಡಬೇಕು ಎಂದು ಸಿಐಟಿಯು ಆಗ್ರಹಿಸಿದೆ. ಅರ್ಬನ್ ಕಂಪನಿಯ 'ಭರವಸೆ' ಇದರ ಸಮೀಪಕ್ಕೂ ಬರುವುದಿಲ್ಲ.

ಗ್ರಾಹಕರ ಮನೆಗಳಲ್ಲಿ ಸುರಕ್ಷತೆಯ ವಿಷಯವು ವಿಶೇಷವಾಗಿ ಇಂತಹ ಕೆಲಸಗಳಲ್ಲಿ ನಿರ್ಣಾಯಕವಾಗಿದೆ. ಏಕೆಂದರೆ ವಿಶೇಷವಾಗಿ ಅಂತಹ 'ಪ್ಲಾಟ್‌ಫಾರಂ"ಗಳ ಮೂಲಕ ಸೌಂದರ್ಯ ಮತ್ತು ಇತರ ಸೇವೆಗಳನ್ನು ಒದಗಿಸುವ ಹಲವಾರು ಮಹಿಳೆಯರು ಲೈಂಗಿಕ ಕಿರುಕುಳದ ದೂರುಗಳನ್ನು ನೀಡಿದ್ದಾರೆ. ಇಂತಹ ಕಂಪನಿಗಳು ಉದ್ಯೋಗದಾತರಲ್ಲ, 'ಅಗ್ರಿಗೇಟರ್' (ಒಟ್ಟುಗೂಡಿಸುವವರು) ಎಂದು ಹೇಳುತ್ತ ದೇಶದ ಕಾನೂನನ್ನು ಉಲ್ಲಂಘಿಸುತ್ತಲೇ ಇವೆ ಮತ್ತು ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳವನ್ನು ತಡೆಯುವ ಕಾಯ್ದೆಯನ್ನು ಜಾರಿಗೆ ತರಲು ಕೂಡ ನಿರಾಕರಿಸುತ್ತಿವೆ ಎಂಬುದನ್ನು ಗಮನಿಸಬೇಕು.

ಅರ್ಬನ್ ಕಂಪನಿಯು ಬಳಸುತ್ತಿರುವ "ಸೇವಕಿ" ಎಂಬ ಅವಹೇಳನಕಾರಿ ಪದವನ್ನು ಬಲವಾಗಿ ಖಂಡಿಸುವುದಾಗಿ ಹೇಳುತ್ತ, ಸಿಐಟಿಯು, ಇದು ಈ ಕಂಪನಿಯ ದುರಹಂಕಾರ ಮತ್ತು ಉದ್ದೇಶಪೂರ್ವಕವಾದ ಅಜ್ಞಾನವನ್ನು ಪ್ರದರ್ಶಿಸುತ್ತದೆ ಎಂದು ಹೇಳಿದೆ. ಮನೆಗೆಲಸದವರಿಗೆ ಕಳಂಕ ಹಚ್ಚುವುದನ್ನು ವಿರೋಧಿಸುವ ಮತ್ತು ಕಾರ್ಮಿಕರೆಂಬ ಅವರ ಘನತೆಯನ್ನು ಮತ್ತು ಸ್ಥಾನಮಾನವನ್ನು ಎತ್ತಿ ಹಿಡಿಯುವ ದೇಶೀಯ ಮತ್ತು ಅಂತರ್ರಾಷ್ಟ್ರೀಯ ಹೋರಾಟಗಳು ಬಹಳ ದೀರ್ಘ ಕಾಲ ನಡೆದಿವೆ. ಅಲ್ಲದೆ ಮನೆಗೆಲಸದವರನ್ನು. ಸೋಮಾರಿಗಳು, ವಿಶ್ವಾಸಾರ್ಹವಲ್ಲದವರು ಮತ್ತು ಸೂಚನೆ ಇಲ್ಲದೆ ರಜೆ ತೆಗೆದುಕೊಳ್ಳುವ ರೀತಿಯವರು ಎಂದು ಹೇಳುವುದನ್ನು ಖಂಡಿಸುತ್ತ, ಇದು ಅವರ ಶೋಚನೀಯ ಕೆಲಸ ಮತ್ತು ಜೀವನ ಪರಿಸ್ಥಿತಿಗಳ ವಾಸ್ತವತೆಯನ್ನು ನಿರ್ಲಕ್ಷಿಸುತ್ತದೆ ಎಂದು ಈ ಸಮನ್ವಯ ಸಂಘಟನೆಯ ಸಂಯೋಜಕರಾದ ಕಿರಣ್ ಮೋಘೆ ಹೇಳುತ್ತಾರೆ.

ಪ್ಲಾಟ್‌ಫಾರ್ಮ್ ಆಧಾರಿತ ಆಂತರಿಕ ಸೇವೆಗಳು ನಮ್ಮ ದೇಶದಲ್ಲಿ ಹೊಸ ಪರಿಕಲ್ಪನೆಯಲ್ಲ. ಆದಾಗ್ಯೂ, ಅರ್ಬನ್ ಕಂಪನಿಯ ಪ್ರವೇಶವು ಕಾರ್ಪೊರೇಟ್ ಘಟಕದ ಶಕ್ತಿ ಮತ್ತು ಪ್ರಭಾವವನ್ನು ತನ್ನೊಂದಿಗೇ ತರುತ್ತಿದೆ, ಅದು ಕಾರ್ಮಿಕರನ್ನು ಶೋಷಿಸುವುದು ಮಾತ್ರವಲ್ಲದೆ, ಗ್ರಾಹಕರ ಆದ್ಯತೆಗಳ ಬಗ್ಗೆ ಮಾಹಿತಿಗಳನ್ನು ಅಗೆದು ತೆಗೆದು ಲಾಭ ಮಾಡಿಕೊಳ್ಳುತ್ತದೆ ಮತ್ತು ಈ ಪ್ರಕ್ರಿಯೆಯಲ್ಲಿ ಅದು ಜಾಹೀರಾತು ಆದಾಯಗಳನ್ನೂ ಗಳಿಸುತ್ತದೆ.

ಮನೆಗೆಲಸದವರನ್ನು "ಗಿಗ್ ವರ್ಕರ್ಸ್" ಆಗಿ ಪರಿವರ್ತಿಸುವುದರಿಂದ ಈ ವಲಯ ಔಪಚಾರಿಕಗೊಳ್ಳುತ್ತದೆ ಮತ್ತು ಗೋಚರಗೊಳ್ಳುತ್ತದೆ



ಯಾದ್ದರಿಂದ ನೋಂದಣಿ ಮತ್ತು ನಿಯಂತ್ರಣಕ್ಕೆ ಅನುವಾಗುತ್ತದೆ ಎಂದು ವಾದಿಸಲಾಗುತ್ತದೆ. ಆದರೆ, ವಾಸ್ತವವಾಗಿ, ಇದು ಈಗಾಗಲೇ ಅಮಾನವೀಯ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿರುವ ಒಂದು ವಿಭಾಗದ ದುಡಿಮೆಗಾರರನ್ನು ಮತ್ತಷ್ಟು ಶೋಷಣೆಗೆ ಗುರಿಪಡಿಸುತ್ತದೆ ಎಂದು ತಾನು ನಂಬಿರುವುದಾಗಿ ಸಿಐಟಿಯು ಹೇಳಿದೆ. ನಿಜವಾಗಿಯೂ ಇದನ್ನು ಔಪಚಾರಿಕ ವಲಯಕ್ಕೆ ಸೇರಿಸಬೇಕೆಂದಿದ್ದರೆ, ನೋಂದಾಯಿಸಬೇಕೆಂದಿದ್ದರೆ, ಮನೆಕೆಲಸದವರನ್ನು ರಕ್ಷಿಸುವ, ಸೂಚ್ಯಂಕಕ್ಕೆ ಲಗತ್ತಿಸಿದ ಕನಿಷ್ಠ ವೇತನ ಮತ್ತು ವಾರದ ರಜೆಯನ್ನು ಖಚಿತಪಡಿಸುವ, ಕೆಲಸದ ಸಮಯವನ್ನು ನಿಯಂತ್ರಿಸುವ ಮತ್ತು ಗಳಿಕೆಯ ರಜೆ, ಬೋನಸ್ ಮತ್ತು ಪಿಂಚಣಿ, ಆರೋಗ್ಯ ಮತ್ತು ಜೀವ ವಿಮೆಯಂತಹ ಸಾಮಾಜಿಕ ಭದ್ರತಾ ಪ್ರಯೋಜನಗಳನ್ನು ಒದಗಿಸುವ ಒಂದು ಸಮಗ್ರ ಕಾನೂನಿನ ಮೂಲಕ ಮಾಡಲು ಸಾಧ್ಯವಿದೆ. ಇಂತಹ ಕಾನೂನು ಈ ದೇಶದಲ್ಲಿ ಹೇಗೋ ಬದುಕು ಸಾಗಿಸಬೇಕಾದ ('ಅರೆಕಾಲಿಕ' ಎಂದು ಕರೆಯಲ್ಪಡುವ) ಕೇವಲ ಅಕ್ಷರಜ್ಞಾನವಷ್ಟೇ ಹೊಂದಿರುವ ಮತ್ತು ಸ್ಮಾರ್ಟ್ ಫೋನ್ ಹೊಂದಿಲ್ಲದ ಬಹುದೊಡ್ಡ ಸಂಖ್ಯೆಯ ಮಹಿಳಾ ಕೆಲಸಗಾರರಿಗೆ ರಕ್ಷಣೆ ನೀಡುವಂತದ್ದಾಗಿರಬೇಕು; ಏಕೆಂದರೆ ಅವರು ದಯನೀಯ ಕೂಲಿ ಕೆಲಸ ಮಾಡುತ್ತ ಶೋಷಣೆಗೊಳಗಾಗಿದ್ದಾರೆ, ಜಾತಿ ಮತ್ತು ಮತೀಯ ತಾರತಮ್ಯ ಮತ್ತು ದೈಹಿಕ ಹಾಗೂ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಾರೆ.

ವಿಪರ್ಯಾಸದ ಸಂಗತಿಯೆಂದರೆ, ಸುಪ್ರೀಂ ಕೋರ್ಟ್ ಇತ್ತೀಚೆಗೆ ಲಕ್ಷಾಂತರ ಕಾರ್ಮಿಕರನ್ನು, ಮುಖ್ಯವಾಗಿ ಮಹಿಳೆಯರನ್ನು ದುಡಿಸಿಕೊಳ್ಳುವ ಈ ಮಹತ್ವದ ವಲಯವನ್ನು ನಿಯಂತ್ರಿಸದಿರುವ ಬಗ್ಗೆ ಮತ್ತು ಈ ದುಡಿಮೆಗಾರರ ದುಸ್ಥಿತಿಯ ಬಗ್ಗೆ ಸ್ವಯಂಪ್ರೇರಿತವಾಗಿ ಟಿಪ್ಪಣಿ ಮಾಡಿರುವ ಸಮಯದಲ್ಲೇ ಈ ಸೇವೆಯನ್ನು ಪ್ರಾರಂಭಿಸಲಾಗಿದೆ ಎಂದು ಟಿಪ್ಪಣಿ ಮಾಡಿರುವ ಅಖಿಲ ಭಾರತ ಮನೆಕೆಲಸದವರ ಸಮನ್ವಯ ಸಮಿತಿ (ಎಐಸಿಸಿಡಿಡಬ್ಲ್ಯು-ಸಿಐಟಿಯು) ಸರ್ಕಾರವು ಈ ಆದೇಶವನ್ನು ಗಮನದಲ್ಲಿಟ್ಟುಕೊಂಡು, ಮನೆಕೆಲಸದವರ ಕೆಲಸದ ಪರಿಸ್ಥಿತಿಗಳನ್ನು ನಿಯಂತ್ರಿಸುವ ಮತ್ತು ಕಾರ್ಮಿಕರಾಗಿ ಅವರಿಗೆ ಕಾನೂನುಬದ್ಧ ಹಕ್ಕುಗಳನ್ನು ನೀಡುವ ಸಮಗ್ರ ಕಾನೂನನ್ನು ಜಾರಿಗೆ ತರಲು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿದೆ. ಅರ್ಬನ್ ಕಂಪನಿಯು 'ಸೇವಕಿ' ಎಂಬ ಪದವನ್ನು ಹಿಂತೆಗೆದುಕೊಳ್ಳಬೇಕು ಮತ್ತು ತಮ್ಮ ಕೆಲಸಗಾರರಿಗೆ ಕನಿಷ್ಠ ವೇತನ, ಸಾಮಾಜಿಕ ಭದ್ರತೆ ಮತ್ತು ಕೆಲಸದ ಸ್ಥಳದಲ್ಲಿ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದೂ ಸಮಿತಿ ಆಗ್ರಹಿಸಿದೆ.

ಒಂದು ಘನತೆಯ ಜೀವನಕ್ಕಾಗಿ ಮನೆಕೆಲಸದವರು ದೀರ್ಘಕಾಲದಿಂದ ಎತ್ತುತ್ತಿರುವ ಬೇಡಿಕೆಗಳ ಮೇಲೆ ಹೋರಾಟವನ್ನು (ಎಐಸಿಸಿಡಿಡಬ್ಲ್ಯು-ಸಿಐಟಿಯು) ತೀವ್ರಗೊಳಿಸುತ್ತದೆ, ದೇಶಾದ್ಯಂತ ಮನೆಗೆಲಸದಲ್ಲಿ ತೊಡಗಿರುವ ದುಡಿಮೆಗಾರರು ಸಂಘಟಿತರಾಗಬೇಕು ಮತ್ತು ತಾವು ಪ್ರತಿದಿನ ಎದುರಿಸುತ್ತಿರುವ ಶೋಷಣೆ ಮತ್ತು ತಾರತಮ್ಯದ ವಿರುದ್ಧ ಹೋರಾಡಬೇಕು ಎಂದು (ಎಐಸಿಸಿಡಿಡಬ್ಲ್ಯು-ಸಿಐಟಿಯು) ಪರವಾಗಿ ಅದರ ಸಂಯೋಜಕರಾದ ಕಿರಣ್ ಮೋಘೆ ಪ್ರಕಟಿಸಿರುವ ಹೇಳಿಕೆಯಲ್ಲಿ ಕರೆ ನೀಡಲಾಗಿದೆ.

ಔರಂಗಜೇಬನ ಸಮಾಧಿ: ಅವಾಸ್ತವ ವಿವಾದ–ಧರ್ಮ ರಾಜಕೀಯ

‘ಚಾವಾ’ ಸಿನಿಮಾ ಭಾವೋದ್ವೇಗಗಳನ್ನು ಕೆರಳಿಸಿದ್ದರಿಂದ ಜನರು ಔರಂಗಜೇಬ್ ಮೇಲೆ ಆಕ್ರೋಶಗೊಂಡಿದ್ದಾರೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವಿಧಾನಸಭೆಯಲ್ಲಿ ಹೇಳಿದ್ದಾರೆ. ಮತ್ತೊಂದೆಡೆ, ಇಡೀ ಸಚಿವ ಸಂಪುಟ ಭದ್ರತೆಯಲ್ಲಿ ಹೋಗಿ ‘ಚಾವಾ’ ಸಿನಿಮಾ ನೋಡಿ ಭಾರೀ ಪ್ರಚಾರವಾಗುವಂತೆ ನೋಡಿಕೊಂಡರು. ಶಿವಾಜಿಯ ಮಗನಾದ ಸಂಭಾಜಿ ರಾಜೇ ವಂಶಸ್ಥರೆಂದು ಹೇಳಿಕೊಂಡು ಬಿಜೆಪಿ ಸಂಸದ ಉದಯನ್ ರಾಜೇ ಭೋಂಸ್ಲೆ ಈಗ ಸಮಾಧಿಯನ್ನು ಧ್ವಂಸ ಮಾಡಬೇಕೆನ್ನುತ್ತಾರೆ. ಆದರೆ, ನಿಖರವಾಗಿ ಏನಿದೆ ಎಂದು ಧ್ವಂಸ ಮಾಡುತ್ತಿದ್ದಾರೆ? ಸಂಘಪರಿವಾರಕ್ಕೆ ದ್ವೇಷ ರಾಜಕಾರಣ ಮಾಡಲು ಒಂದು ಆಟಿಕೆ ಬೇಕು. ಒಂದು ಕಥೆ ಬೇಕು. ಟಿಪ್ಪು ಸುಲ್ತಾನನಿಂದ, ಬಾಬರ್ ಮತ್ತು ಔರಂಗಜೇಬನವರೆಗೆ ಎಲ್ಲರನ್ನೂ ಬದ್ಧವೈರಿಗಳೆಂದು ಚಿತ್ರಿಸುವುದು ಹಿಂದುತ್ವದ ರಾಜಕೀಯ ಅಸ್ತ್ರ ಮಾತ್ರ. ಅದಕ್ಕೆ ಚರಿತ್ರೆಯಲ್ಲಿ ಖಚಿತವಾದ ಯಾವುದೇ ಪುರಾವೆಗಳಿಲ್ಲ.



ಛತ್ರಪತಿ ಶಂಭಾಜಿ ನಗರ ಜಿಲ್ಲೆ ಎಂದು ಮರುನಾಮಕರಣಗೊಂಡಿರುವ ಔರಂಗಾಬಾದ್‌ನಿಂದ ಪ್ರಸಿದ್ಧವಾದ ಎಲ್ಲೋರಾ ಗುಹೆಗಳಿಗೆ ಹೋಗುವ ಹಾದಿಯ ಮಧ್ಯದಲ್ಲಿ ಖುಲ್ದಾಬಾದ್ ಅನ್ನು ನೋಡಬಹುದು. ಮಕ್ಕಳ ಆಟಿಕೆ ಅಂಗಡಿಗಳನ್ನು ದಾಟಿ ನಡೆದರೆ ಸೂಫಿ ಸಂತ ಸೈಯದ್ ಜಿಯಾನುದ್ದೀನ್ ಶೇರ್ಜಿಯವರ ದರ್ಗಾ. ಆ ದರ್ಗಾದಲ್ಲಿ ಇರುವುದು 17ನೇ ಶತಮಾನದಲ್ಲಿ ಭಾರತೀಯರನ್ನು ಆಳಿದ ಚಕ್ರವರ್ತಿ ಔರಂಗಜೇಬನ ಸಮಾಧಿ. ಅದು ಪ್ರಶಾಂತವಾದ ಪ್ರದೇಶ. ತನ್ನ ತಂದೆ ಷಹಜಹಾನ್ ತನ್ನ ಸುಂದರ ಪ್ರೇಮಿಯ ಜ್ಞಾಪಕಾರ್ಥವಾಗಿ ಭವ್ಯವಾದ ತಾಜ್ ಮಹಲ್ ಕಟ್ಟಿದರೂ, ಔರಂಗಜೇಬನು ತನ್ನ ಸಮಾಧಿ ತುಂಬಾ ಸರಳವಾಗಿರಬೇಕೆಂದು, ಅದನ್ನು ಆಕಾಶಕ್ಕೆ ತೆರೆದುಕೊಳ್ಳುವಂತೆ ನಿರ್ಮಿಸಬೇಕೆಂದು ಕೇಳಿಕೊಂಡನು. ಅಲ್ಲಿ ಸ್ವಲ್ಪ ಮಣ್ಣನ್ನು ತೇವಗೊಳಿಸಿ ಒಂದು ಗಿಡ ನೆಡಲು ಹೇಳಿದನು. ಆ ನಂತರದ ಕಾಲದಲ್ಲಿ, ಲಾರ್ಡ್ ಕರ್ಜನ್ ಅಲ್ಲಿ ಅಮೃತಶಿಲೆಯನ್ನು ಮಾಡಿ ಅದರ ಮೇಲೆ ಜಾಲರಿ ಹಾಕಿದ. ಈಗ ಅಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ಯಾತ್ರಿಕರು ಬಂದು ಭೇಟಿ ನೀಡಿ ಹೂವುಗಳನ್ನು ಇಡುವುದು ನಡೆಯುತ್ತಲೇ ಇದೆ. ಶಿವಾಜಿಯ ಮಗನಾದ ಸಂಭಾಜಿ ರಾಜೇ ವಂಶಸ್ಥರೆಂದು ಹೇಳಿಕೊಂಡು ಬಿಜೆಪಿ ಸಂಸದ ಉದಯನ್ ರಾಜೇ ಭೋಂಸ್ಲೆ ಈಗ ಸಮಾಧಿಯನ್ನು ಧ್ವಂಸ ಮಾಡಬೇಕೆನ್ನುತ್ತಾರೆ. ಆದರೆ, ನಿಖರವಾಗಿ ಏನಿದೆ ಎಂದು ಧ್ವಂಸ ಮಾಡುತ್ತಿದ್ದಾರೆ ಎಂದು ಚಾರ್ಮಿ ಹರಿಕಿಶನ್ ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಶ್ನಿಸಿದ್ದಾರೆ.

ಮೋದಿಯವರ ಮೂರನೇ ಅವಧಿಯ ಆಡಳಿತದಲ್ಲಿ ನಾಗ್ಪುರದಲ್ಲಿನ ಹಿಂಸಾಚಾರವು ಈ ದೇಶದ ಪ್ರಜೆಗಳಿಗೆ ಆಶ್ಚರ್ಯ ಅನಿಸದಿರಬಹುದು. ಇಂತಹ ವಿಷಯಗಳನ್ನು ಚರ್ಚೆ ಮಾಡುವುದು ಬಿಜೆಪಿಗೆ ಲಾಭವಾಗುತ್ತದೆ ಎಂದು ವಿವಿಧ ರಾಜಕೀಯ ನಾಯಕರು ಹೇಳಬಹುದು. ಗಾಂಧಿ ಹತ್ಯೆಯ ಕುರಿತಾದ ಪಾಠ ಇಂದಿಗೂ ಅಗತ್ಯವೇನಿದೆ? ಎಂದು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇತ್ತೀಚೆಗೆ ಲೋಕಸಭೆಯಲ್ಲಿ ಹೇಳಿದರು. ಆದರೆ, 400 ವರ್ಷಗಳ ಹಿಂದಿನ ಔರಂಗಜೇಬನ ಬಗ್ಗೆ ಮಾತ್ರ ಆಶಕ್ತಿಗಳನ್ನು ಹೆಚ್ಚಿಸುತ್ತಾರೆಂದರೆ, ಇದರ ಮರ್ಮವೇನು ಎಂಬುದನ್ನು ನೋಡಬೇಕಿದೆ.

ನಾಗ್ಪುರದ ಮಧ್ಯದಲ್ಲೇ!

ಕರ್ಫ್ಯೂ ಹೇರಲಾಗಿದ್ದ ನಾಗ್ಪುರದಲ್ಲಿ ಮತ್ತೆ ಪರಿಸ್ಥಿತಿ ಸಹಜ ಸ್ಥಿತಿ ಮರಳಿದೆ. ಔರಂಗಜೇಬ್‌ಗೆ ಈಗ ಪ್ರಾಮುಖ್ಯತೆ ಇಲ್ಲ ಎಂದು ಆರ್‌ಎಸ್‌ಎಸ್ ನಾಯಕರೊಬ್ಬರು ಬೆಂಗಳೂರಿನಲ್ಲಿ ನೀಡಿದ ಹೇಳಿಕೆಯನ್ನು ಮಾಧ್ಯಮಗಳು ಪ್ರಮುಖವಾಗಿ ಪ್ರಕಟಿಸಿದವು. ಅಂದರೆ, ಸೂಕ್ತ ಸಮಯದಲ್ಲಿ ಈ ವಿಷಯವನ್ನು ತೆಗೆದುಕೊಂಡಿದ್ದೇವೆ ಎಂಬುದು ಅವರ ಮಾತುಗಳ ಸಂಕೇತವಾಗಿದೆ. ’ಚಾವಾ’ ಸಿನಿಮಾ ಭಾವೋದ್ವೇಗಗಳನ್ನು ಕೆರಳಿಸಿದ್ದರಿಂದ ಜನರು ಔರಂಗಜೇಬ್ ಮೇಲೆ ಆಕ್ರೋಶಗೊಂಡಿದ್ದಾರೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವಿಧಾನಸಭೆಯಲ್ಲಿ ನೇರವಾಗಿಯೇ ಹೇಳಿದ್ದಾರೆ. ಫಡ್ನವೀಸ್ ನಾಗ್ಪುರ ಪಶ್ಚಿಮ ಕ್ಷೇತ್ರವನ್ನು ಪ್ರತಿನಿಧಿಸುತ್ತಾರೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ನಾಗ್ಪುರ ಲೋಕಸಭಾ ಕ್ಷೇತ್ರದವರು. ಗಲಭೆಗಳು ನಡೆಯುತ್ತಿರುವ ಪ್ರಸ್ತುತ ಸ್ಥಳವು ಆರ್‌ಎಸ್‌ಎಸ್‌ನ ರಾಷ್ಟ್ರೀಯ ಪ್ರಧಾನ ಕಚೇರಿಯಾದ ಹೆಗ್ಡೇವರ್ ಭವನಕ್ಕೆ ಹತ್ತಿರದಲ್ಲಿಯೇ ಇದೆ.

‘ಚಾವಾ’ ಸಿನಿಮಾ ನೋಡಲು ಇಡೀ ಸಚಿವ ಸಂಪುಟ!!

"ಶಂಭಾಜಿ ಮಹಾರಾಜರಿಗೆ ಔರಂಗಜೇಬ್ ಹಿಂಸೆ ಮಾಡಿದ ರೀತಿಯನ್ನು ‘ಚಾವಾ’ ಸಿನಿಮಾದಲ್ಲಿನ ಅತ್ಯಂತ ವಿವರವಾದ ದೃಶ್ಯೀಕರಣವು ಸಾರ್ವಜನಿಕ ಆಕ್ರೋಶವನ್ನು ಹುಟ್ಟುಹಾಕಿತು" ಎಂದು ಹೇಳಿದ ಮುಖ್ಯಮಂತ್ರಿ "ಜನರು ಕಾನೂನು ಸುವ್ಯವಸ್ಥೆಯನ್ನು ತಮ್ಮ ಕೈಗೆ ತೆಗೆದುಕೊಳ್ಳಬಾರದು" ಎಂದು ಪ್ರಕಟಣೆ ಹೊರಡಿಸುತ್ತಾರೆ. ಸಂಘಪರಿವಾರದ ನಾಯಕರ ಇಂತಹ ಹೇಳಿಕೆಗಳನ್ನು ಗಮನಿಸಿದರೆ, ಇದರ ಹಿಂದೆ ಆಳವಾದ ಯೋಜನೆ ಇರುವಂತೆ ಕಾಣುತ್ತಿದೆ. ಒಂದು ಸಮುದಾಯವನ್ನು ಪ್ರಚೋದಿಸುವ ಉದ್ದೇಶದಿಂದ ಕಾಶ್ಮೀರ ಫೈಲ್ಸ್, ಕೇರಳ ಫೈಲ್ಸ್, ರಜಾಕರ್ ನಂತಹ ಸಿನೆಮಾಗಳನ್ನು ನಿರ್ಮಿಸಲು ಪ್ರೋತ್ಸಾಹ ನೀಡಿದವರು ಮತ್ತು ಆ ಸಿನೆಮಾಗಳು ಭಾರೀ ಪ್ರಚಾರವಾಗುವಂತೆ ನೋಡಿಕೊಂಡಿದ್ದು ಯಾರು ಎಂಬುದು ಗೊತ್ತೇ ಇದೆ.

ಇಡೀ ಸಚಿವ ಸಂಪುಟ ಭದ್ರತೆಯಲ್ಲಿ ಹೋಗಿ ‘ಚಾವಾ’ ಸಿನಿಮಾ ನೋಡಿ ಭಾರೀ ಪ್ರಚಾರವಾಗುವಂತೆ ನೋಡಿಕೊಂಡರು. 500 ಕೋಟಿ ರೂ. ಗಳಿಸಿದ ಈ ಸಿನಿಮಾ ಎಷ್ಟರಮಟ್ಟಿಗೆ ಜನರನ್ನು ಕೆರಳಿಸಿತೆಂದರೆ, ಕುದುರೆಯ ಮೇಲೆ ಒಬ್ಬ ವ್ಯಕ್ತಿ "ಹರ ಹರ ಮಹಾದೇವ್" ಎಂದು ಕೂಗುತ್ತಾ ಥಿಯೇಟರ್ ಒಳಗೆ ಜನರನ್ನು ತಳ್ಳಿಕೊಂಡು ಹೋಗುವ ವಿಡಿಯೋ ವೈರಲ್ ಆಯಿತು. ಅನೇಕ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರು ವಿವಿಧ ರೀತಿಯ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿರುವ ಸುದ್ದಿ ಮಹಾರಾಷ್ಟ್ರ ಮಾಧ್ಯಮಗಳಲ್ಲಿ ಪ್ರಸಾರವಾಯಿತು. ‘ಪ್ರತಿ ಮರಾಠಿ ವ್ಯಕ್ತಿಯೂ ಈ ಕಥೆಯನ್ನು ತಿಳಿದುಕೊಳ್ಳಬೇಕು ಎಂಬ ಉದ್ದೇಶದಿಂದ ತನ್ನ ಹತ್ತು ವರ್ಷದ ಮಗನನ್ನು ಕರೆತಂದಿದ್ದೇನೆ’ ಎಂದು ಆ ಜಿಲ್ಲೆಯ ವಾಹನ ಚಾಲಕನೊಬ್ಬ ಮಾಧ್ಯಮಗಳಿಗೆ ತಿಳಿಸಿದ.

ಆಳುವ ವರ್ಗಗಳ ಹಿತಾಸಕ್ತಿಗಳ ಮೇಲೆ

ಈ ಚಾಲಕ ಹೇಳಿದ್ದು ಸರಿ, ಆದರೆ ಯಾವುದು ಇತಿಹಾಸ? ಯಾವುದು ಪ್ರಸ್ತುತ? ಪ್ರಖ್ಯಾತ ಇತಿಹಾಸಕಾರ ರೋಮಿಲಾ ಥಾಪರ್ ತಾನು ಬರೆದ 750 ಪುಟಗಳ ಪುಸ್ತಕಕ್ಕೆ ‘ನಮ್ಮ ಮುಂದಿರುವ ಭೂತಕಾಲ’ (The past before us) ಎಂದು ಶೀರ್ಷಿಕೆ ನೀಡಿದ್ದಾರೆ. ‘ಮುಂದಿರುವ’ ಎಂಬ ಪದಕ್ಕೆ ಇಲ್ಲಿ ಎರಡು ಅರ್ಥಗಳನ್ನು ತೆಗೆದುಕೊಳ್ಳಬೇಕು. ಗತಿಸಿಹೋದ ಎಂದು, ಇನ್ನು ಮುಂದೆ ಎಂದು. ಭೂತಕಾಲವನ್ನು ಹೇಗೆ ನೋಡುತ್ತೇವೆ, ಅದರಿಂದ ಯಾವುದನ್ನು ತೆಗೆದುಕೊಂಡು ಹೇಗೆ ಹೇಳುತ್ತೇವೆ ಎಂಬುದು ಪ್ರಸ್ತುತ ಆಳುವ ವರ್ಗಗಳ ಹಿತಾಸಕ್ತಿಗಳ ಮೇಲೆ ಅವಲಂಬಿತವಾಗಿದೆ.

ಔರಂಗಜೇಬನು ಕ್ರೂರ ಆಡಳಿತಗಾರನಷ್ಟೇ ಅಲ್ಲದೆ, ದೇವಾಲಯಗಳಿಗೆ ನಿಧಿಗಳನ್ನು ಕೊಟ್ಟ ಬಗ್ಗೆ ಕೂಡಾ ಐತಿಹಾಸಿಕ ಪುರಾವೆಗಳು ಹೇಳುತ್ತವೆ, ಈ ಸಿನಿಮಾದಲ್ಲಿ ಔರಂಗಜೇಬನನ್ನು ಭಾಗಶಃ ಚಿತ್ರಿಸಿದ್ದಾರೆ ಎಂದು ಟೀಕಿಸಿದ್ದಕ್ಕೆ ಸಮಾಜವಾದಿ ಪಕ್ಷದ ಶಾಸಕ ಅಬು ಅಜ್ಮಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ, ಔರಂಗಜೇಬನ ಪರವಾಗಿ ಮಾತನಾಡಿದ ಯಾರನ್ನೂ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಮತ್ತು ಇತರ ಸಚಿವರು ಸದನದಲ್ಲಿ ಘೋಷಿಸಿದರು.

ಸಮಾಧಿಯನ್ನು ತೆಗೆದುಹಾಕಬೇಕೆಂಬ ಭೋಂಸ್ಲೆ ಮಾಡುತ್ತಿರುವ ವಾದದಲ್ಲಿನ ಭಾವನೆಯನ್ನು ತಾನೂ ಕೂಡ ಒಪ್ಪುವುದಾಗಿ ಫಡ್ನವೀಸ್ ಹೇಳಿದರು. ಆ ಸಮಾಧಿಯು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (**ASI**) ನಿಯಂತ್ರಣದಲ್ಲಿ ಇರುವುದರಿಂದ, ಕಾನೂನಿನ ಪ್ರಕಾರವೇ ವ್ಯವಹರಿಸಬೇಕಾಗುತ್ತದೆ ಎಂದು ಸನ್ನೆಯ ಗುಂಡಿಗಳನ್ನು ಒತ್ತಿದರು.

ಕಳೆದುಕೊಳ್ಳುವವರು ಯಾರು?

ಈ ಗಲಭೆಗಳ ಸಮಯದಲ್ಲಿ ಪವಿತ್ರ ಚಾದರ್‌ಗಳನ್ನು ಸುಡುವುದಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ವಿಎಚ್‌ಪಿ ನಿರಾಕರಿಸುತ್ತದೆ. ಆದರೆ ಪೊಲೀಸರು ತಮ್ಮ ಬಳಿ ವಿಡಿಯೋ ದೃಶ್ಯಾವಳಿಗಳಿವೆ ಎಂದು ಹೇಳುತ್ತಾರೆ. ಚಾದರ್‌ಗಳು ಸುಡುವುದನ್ನು ತಾವು ನೋಡಿದ್ದೇವೆಂದು ಸ್ಥಳೀಯರು ಹೇಳುತ್ತಾರೆ. ಆದರೆ ಮುಖ್ಯಮಂತ್ರಿಗಳು ಕುರಾನ್ ಸೂಕ್ತಗಳಿರುವ ಚಾದರ್ ಅನ್ನು ಸುಟ್ಟುಹಾಕಲಾಗಿದೆ ಎಂಬುದು ನಿಜವಲ್ಲ ಎಂದು ಪ್ರಕಟಿಸಿದರು. ಔರಂಗಜೇಬನ ಪ್ರತಿಕೃತಿಗಳನ್ನು ಸುಡುವುದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಕುರಾನ್ ಸೂಕ್ತಗಳಿಂದ ಕೂಡಿರುವ ಚಾದರ್ ಅನ್ನು ಗುರಿಯಾಗಿಸಿಕೊಂಡಿರುವುದು ಸರಿಯಲ್ಲ ಎಂದು ಸ್ಥಳೀಯ ಮುಸ್ಲಿಂ ನಾಯಕರು ಖಂಡಿಸುತ್ತಿದ್ದಾರೆ. ವಾಸ್ತವವಾಗಿ, ಆ ಸಮುದಾಯಗಳಲ್ಲಿಯೂ ಅಸಮಾಧಾನ ಬೆಳೆಯಲು ಅದೇ ಕಾರಣವಾಯಿತು.

ಖುಲ್ದಾಬಾದ್‌ನಲ್ಲಿ ಮೊದಲಿನಿಂದಲೂ ಎಲ್ಲಾ ಧರ್ಮದ ಜನರು ಧಾರ್ಮಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ನಡುವೆಯೂ ಸಾಮರಸ್ಯದಿಂದ ಇದ್ದಾರೆ ಎಂದು ಚಕ್ರವರ್ತಿಯ ಸಮಾಧಿ ಸಂರಕ್ಷಣೆ ನೋಡಿಕೊಳ್ಳುತ್ತಿರುವ ನಿಸ್ಸಾರ್ ಅಹ್ಮದ್ ಮಾಧ್ಯಮಗಳಿಗೆ ತಿಳಿಸಿದರು. ಕೆಲವು ಕಿಡಿಗೇಡಿಗಳು ಧಾರ್ಮಿಕ ಕಲಹವನ್ನು ಪ್ರಚೋದಿಸಲು ಪ್ರಯತ್ನಿಸುತ್ತಿರುವುದರಿಂದ ಇದೆಲ್ಲವೂ ನಡೆಯುತ್ತಿದೆ. ಈ ಗಲಭೆಗಳಲ್ಲಿ ಯಾವಾಗಲೂ ಬಡವರು ಮತ್ತು ನಿರುದ್ಯೋಗಿ ಯುವಕರನ್ನು ಮುಂದಕ್ಕೆ ತಳ್ಳುತ್ತಾರೆ. ದ್ವೇಷ ಹುಟ್ಟುಹಾಕುವವರು ಒಬ್ಬರಾದರೆ, ನೋವು ಅನುಭವಿಸುವವರು, ನಷ್ಟಕ್ಕೆ ಒಳಗಾಗುವವರು ಈ ಯುವಕರೇ. ಪವಿತ್ರ ರಂಜಾನ್ ಮಾಸದಲ್ಲಿ ಇಂತಹ ಘಟನೆ ನಡೆದಿರುವುದು ತುಂಬಾ ದುಃಖಕರವಾಗಿದೆ. ಮೊಘಲರ ಇತಿಹಾಸವನ್ನು ಸಂಪೂರ್ಣವಾಗಿ ಅಳಿಸಿಹಾಕಬಹುದು ಎಂದು ಯಾರಾದರೂ ಅಂದುಕೊಂಡರೆ, ಅವರು ಭಾರತ ದೇಶದ ಇತಿಹಾಸವನ್ನೇ ಪುನಃ ಬರೆಯಬೇಕಾಗುತ್ತದೆ. ಅದು ತುಂಬಾ ಅಪಾಯಕಾರಿ ಕೆಲಸ ಎಂದು ಅವರು ಪ್ರತಿಕ್ರಿಯಿಸಿದ್ದಾರೆ. ಈ ಸಾಮಾನ್ಯ ಮನುಷ್ಯನ ಮಾತುಗಳನ್ನು ಕೇಳಿಸಿಕೊಂಡ ಯಾರೇ ಆದರೂ, ಇತಿಹಾಸದ ಬಗ್ಗೆ ಆಧಾರರಹಿತ ದ್ವೇಷದಿಂದ ಜನರಲ್ಲಿ ಧಾರ್ಮಿಕ ಬೆಂಕಿ ಹಚ್ಚುವುದು ಸರಿಯಲ್ಲ ಎನ್ನುತ್ತಾರೆ.

ಚರಿತ್ರೆಯಲ್ಲಿ ಇರುವುದಾದರೂ ಏನು?

ಸಂಘಪರಿವಾರವು ಮೊದಲಿನಿಂದಲೂ ಔರಂಗಜೇಬನನ್ನು ತಮ್ಮ ಧಾರ್ಮಿಕ ರಾಜಕೀಯಕ್ಕೆ ಇಂಧನವಾಗಿ ಬಳಸುತ್ತಿದೆ. ಈ ದೇಶ ರಾಮನದೇ ಹೊರತು ಔರಂಗಜೇಬನದಲ್ಲ ಎಂದು ಮಾಜಿ ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಅವರಂತವರು ಹೇಳಿದ್ದಾರೆ. ನಿಜವಾದ ಜಾತ್ಯತೀತರೆಲ್ಲರೂ "ಔರಂಗಜೇಬನ ಸಂತತಿ" (ಔರಂಗಜೇಬ್ ಕೆ ಔಲಾದ್) ಎಂಬುದು ಅವರಿಗೆ ತುಂಬಾ ಚಿರಪರಿಚಿತ ವಾಕ್ಯ. ದ್ವೇಷ ರಾಜಕಾರಣಕ್ಕೆ ಯಾವಾಗಲೂ ಒಂದು ಬೊಂಬೆ ಬೇಕು. ಒಂದು ಕಥೆ ಬೇಕು. ಟಿಪ್ಪು ಸುಲ್ತಾನನಿಂದ, ಬಾಬರ್ ಮತ್ತು ಔರಂಗಜೇಬನವರೆಗೆ ಎಲ್ಲರನ್ನೂ ಬದ್ಧವೈರಿಗಳೆಂದು ಚಿತ್ರಿಸುವುದು ಹಿಂದುತ್ವದ ರಾಜಕೀಯ ಅಸ್ತ್ರ ಮಾತ್ರ. ಅದಕ್ಕೆ ಚರಿತ್ರೆಯಲ್ಲಿ ಖಚಿತವಾದ ಯಾವುದೇ ಪುರಾವೆಗಳಿಲ್ಲ. ಧಾರ್ಮಿಕ ಮೂಲಭೂತವಾದಿಗಳು ಹೇಳುವಂತೆ ಭಾರತದಲ್ಲಿ ಮುಸ್ಲಿಮರು ಅಥವಾ ಇಸ್ಲಾಂ ಚರಿತ್ರೆ ಎಲ್ಲವೂ ಒಂದೇ ಅಲ್ಲ. ಅಫಘಾನ್, ಟರ್ಕಿ ಮತ್ತು ಪರ್ಷಿಯನ್ ತಳಹದಿಗಳಿವೆ. ಇಸ್ಲಾಮಿಕ್ ಇತಿಹಾಸ ಎಂಬ ಏಕ ಖಂಡವಾಗಿಯೇನೂ ಇರುವುದಿಲ್ಲ. ಇರುವುದರಲ್ಲಿಯೂ ಭಾರತೀಯ ಸಾಂಪ್ರದಾಯಿಕ ಪದ್ಧತಿಯು ಸಂಯೋಜಿಸಲ್ಪಟ್ಟಿಯೇ ಇರುತ್ತದೆ.

13ನೇ ಶತಮಾನದಲ್ಲಿ ಘಿಯಾಜುದ್ದೀನ್ ಬಾಲ್ಬನ್ (1255–65) ಕಾಲಕ್ಕೆ ಸಂಭಂದಿಸಿ ದೆಹಲಿಯಲ್ಲಿ ದೊರೆತ ಒಬ್ಬ ಹಿಂದೂ ಭಕ್ತನ ಶಾಸನವನ್ನು ನೋಡಿದರೆ, ಸುಲ್ತಾನ್ ಬಾಲ್ಬನ್ ಆಳ್ವಿಕೆಯಲ್ಲಿ ವಿಷ್ಣುಮೂರ್ತಿ ಸುರಕ್ಷಿತವಾಗಿತ್ತು

ಪುಟ 6 ಕ್ಕೆ

ಸ್ಮಾರ್ಟ್ ಮೀಟರ್ ಹಗರಣದ ಚರ್ಚೆಯೂ, ಮುಚ್ಚಿಟ್ಟ ಗ್ರಾಹಕರ ಸುಲಿಗೆಯ ನೀತಿಯೂ

ಸಿ.ಸಿದ್ದಯ್ಯ

ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಗುತ್ತಿಗೆ ಹಗರಣ ದೊಡ್ಡ ಸುದ್ದಿಯಾಗಿದೆ. ರಾಜಕೀಯ ಪಕ್ಷಗಳು ಈ ಹಗರಣಗದ ಬಗ್ಗೆಯಷ್ಟೇ ಮಾತನಾಡುತ್ತಿವೆ. ರಾಜ್ಯ ಬಜೆಟ್ ಅಧಿವೇಶನದಲ್ಲಿ ಬಿಜೆಪಿ ನಾಯಕರೊಬ್ಬರು ಸ್ಮಾರ್ಟ್ ಮೀಟರ್ ಕುರಿತೇ 45 ನಿಮಷಗಳ ಕಾಲ ಮಾತನಾಡಿದರೂ, ಸ್ಮಾರ್ಟ್ ಮೀಟರ್ ಅಳವಡಿಕೆಯ ಉದ್ದೇಶವೇನು? ಆ ನಂತರ, ಗ್ರಾಹಕರು ಅನುಭವಿಸುವ ನೋವೇನು? ಕೃಷಿ ಪಂಪ್ ಸೆಟ್ ಹೊಂದಿರುವ ರೈತರ ಮತ್ತು ಕೃಷಿಯ ಮೇಲಾಗುವ ಪರಿಣಾಮಗಳೇನು? ಈ ಅಂಶಗಳ ಬಗ್ಗೆ ಏನೂ ಮಾತನಾಡಲಿಲ್ಲ. ಸಮವರ್ತಿ ಪಟ್ಟಿಯಲ್ಲಿರುವ ವಿದ್ಯುತ್ ಕ್ಷೇತ್ರದ ರಾಜ್ಯಗಳ ಹಕ್ಕನ್ನು ಒಕ್ಕೂಟ ಸರ್ಕಾರ ಕಸಿದುಕೊಳ್ಳುವ ಬಗ್ಗೆ ಇವರಿಗೆ ಚಿಂತೆಯಿಲ್ಲ. ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರಿಗೆ ಒಪ್ಪಿಸುವ ಎಲ್‌ಪಿಜಿ ನೀತಿಗಳನ್ನು ಜನರಿಂದ ಮುಚ್ಚಿಡಲು ರಾಜ್ಯವನ್ನು ಆಳುವ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ಪ್ರಯತ್ನಿಸುತ್ತಿವೆ.

ಕರ್ನಾಟಕದಲ್ಲಿ ಸ್ಮಾರ್ಟ್ ಮೀಟರ್ ಗುತ್ತಿಗೆ ಹಗರಣ ದೊಡ್ಡ ಸುದ್ದಿಯಾಗಿದೆ. ಸ್ಮಾರ್ಟ್ ಮೀಟರ್ ಖರೀದಿ ಪ್ರಕ್ರಿಯೆಯಲ್ಲಿ 15,568 ಕೋಟಿ ರೂಪಾಯಿಗಳ ಬೃಹತ್ ಹಗರಣ ನಡೆದಿದೆ ಎಂದು ಬಿಜೆಪಿ ಆರೋಪಿಸಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಟೆಂಡರ್ ಪ್ರಕ್ರಿಯೆಯಲ್ಲಿ ಪಕ್ಷಪಾತ ಮತ್ತು ಅಕ್ರಮಗಳನ್ನು ಮಾಡಿದೆ ಎಂದು ಅದು ಆರೋಪಿಸಿದೆ. ಬಿಜೆಪಿ ಮತ್ತು ಜೆಡಿಎಸ್ ಎರಡೂ ಪಕ್ಷಗಳ ನಾಯಕರು ಈಗ ಮರು ಟೆಂಡರ್‌ಗೆ ಒತ್ತಾಯಿಸುತ್ತಿದ್ದಾರೆ. ವಿಧಾನಸಭೆಯಲ್ಲಿ ನಡೆಯುತ್ತಿರುವ ಬಜೆಟ್ ಅಧಿವೇಶನದಲ್ಲಿ ಬಿಜೆಪಿ ನಾಯಕರೊಬ್ಬರು ಸ್ಮಾರ್ಟ್ ಮೀಟರ್ ಕುರಿತೇ 45 ನಿಮಷಗಳ ಕಾಲ ಮಾತನಾಡಿದ್ದಾರೆ. ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯುವವರು ಸ್ಮಾರ್ಟ್ ಮೀಟರ್‌ಗಳನ್ನು ಖಡ್ಡಾಯವಾಗಿ ಅಳವಡಿಸಬೇಕು ಎಂಬುದರ ಬಗ್ಗೆ ವಿರೋಧ ವ್ಯಕ್ತಪಡಿಸುತ್ತಾರಾದರೂ, ಕೇಂದ್ರ ಸರ್ಕಾರ ಸೂಚಿಸಿರುವಂತೆ, ಎಲ್ಲಾ ಮೀಟರ್‌ಗಳೂ ಸ್ಮಾರ್ಟ್ ಮೀಟರ್‌ಗೆ ಬದಲಾಯಿಸಿಕೊಂಡ ನಂತರ ಕಡ್ಡಾಯ ಮಾಡಬೇಕು ಎಂಬುದು ಅವರ ವಾದ! ಅಂದರೆ, ಎಲ್ಲರೂ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳಬೇಕು ಎಂಬುದನ್ನು ಬಿಜೆಪಿಯ ಆ ನಾಯಕರು ಒಪ್ಪುತ್ತಾರೆ ಎಂದಾಯಿತು.

ಸ್ಮಾರ್ಟ್ ಮೀಟರ್ ಅಳವಡಿಕೆಯ ಉದ್ದೇಶ, ಸ್ಮಾರ್ಟ್ ಮೀಟರ್/ಪ್ರಿಪೇಯ್ಡ್ ಮೀಟರ್ ಅಳವಡಿಕೆಯ ನಂತರ ಗ್ರಾಹಕರು ಅನುಭವಿಸುವ ನಷ್ಟ, ಅವರ ಮೇಲಾಗುವ ಅಧಿಕ ದರದ ಹೊರೆ, ಇದರಿಂದ ಕೃಷಿ ಪಂಪ್‌ಸೆಟ್ ಹೊಂದಿರುವ ರೈತರ ಮತ್ತು ಕೃಷಿಯ ಮೇಲಾಗುವ ಪರಿಣಾಮ... ಇವುಗಳ ಬಗ್ಗೆಯೂ ವಿರೋಧ ಪಕ್ಷಗಳು ಬೆಳಕು ಚೆಲ್ಲಿದ್ದರೆ, ಈ ಹೋರಾಟದಲ್ಲಿ ಅವುಗಳ ಪ್ರಾಮಾಣಿಕತೆಯನ್ನು ಮೆಚ್ಚಬಹುದಿತ್ತು.

ವಿದ್ಯುತ್ ಕ್ಷೇತ್ರವು ಸಮವರ್ತಿ ಪಟ್ಟಿಯಲ್ಲಿ ಸೇರುತ್ತದೆ. ಈ ವಿಚಾರದಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳ ಜೊತೆ ಚರ್ಚಿಸಿ ಸಮ್ಮತಿ ಪಡೆಯಬೇಕು. ಇನ್ನು ಮುಂದೆ ಇದಕ್ಕೆ ಅವಕಾಶಗಳಿರುವುದಿಲ್ಲ. ವಿದ್ಯುತ್ ದರ ನಿಗದಿ ಮಾಡುವ ರಾಜ್ಯ ಸರ್ಕಾರ ತನ್ನ ಈ ಹಕ್ಕನ್ನು ಕಳೆದುಕೊಳ್ಳಲಿದೆ. ರಾಜ್ಯದ ಹಕ್ಕುಗಳನ್ನು ಉಳಿಸಿಕೊಳ್ಳಬೇಕೆಂಬ ಕಿಂಚಿತ್ತಾದಾರೂ ಕಾಳಜಿ ರಾಜ್ಯದ ಜನಪ್ರತಿನಿಧಿಗಳಿಗಿಲ್ಲ. ಸ್ಮಾರ್ಟ್ ಮೀಟರ್ ಕುರಿತು ಚರ್ಚೆ ನಡೆಯುವ ಸಮಯದಲ್ಲಿಯೂ ವಿಧಾನಸಭೆಯ ಬಹುತೇಕ ಆಸನಗಳು ಖಾಲಿ ಇದ್ದವು.

ವಿದ್ಯುತ್ ಕ್ಷೇತ್ರದ ಬಗ್ಗೆಯಾಗಲೀ, ರಾಜ್ಯದ ಜನತೆಯ ಮೇಲಿನ ವಿದ್ಯುತ್ ದರದ ಹೊರೆ ತಪ್ಪಿಸುವುದರ ಬಗ್ಗೆಯಾಗಲೀ, ರಾಜ್ಯದ ಸಾಂವಿಧಾನಿಕ ಹಕ್ಕುಗಳನ್ನು ಉಳಿಸಿಕೊಳ್ಳಬೇಕೆಂಬ ಬಗ್ಗೆಯಾಗಲೀ ನಮ್ಮ ಶಾಸಕರಿಗೆ ಛಲ ಇಲ್ಲದಿರುವುದು ದುರದೃಷ್ಟಕರವಾಗಿದೆ. ನಮ್ಮ ಜನಪ್ರತಿನಿಧಿಗಳಿಗೆ ನವ ಉದಾರೀಕರಣದ ಭಾಗವಾಗಿ ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರಿಗೆ ಒಪ್ಪಿಸುವ ಕೇಂದ್ರ ಮತ್ತು ಸರ್ಕಾರದ ನೀತಿಗಳನ್ನು ಜನರಿಂದ ಮುಚ್ಚಿಡಲು ರಾಜ್ಯವನ್ನು ಆಳುವ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ಪ್ರಯತ್ನಿಸುತ್ತಿವೆ. ಭವಿಷ್ಯದಲ್ಲಿ ವಿದ್ಯುತ್ ಕ್ಷೇತ್ರವು ಸಂಪೂರ್ಣವಾಗಿ ಕಾರ್ಪೊರೇಟ್‌ಗಳ ನಿಯಂತ್ರಣಕ್ಕೆ ಒಳಪಡಲಿದ್ದು, ಇದು ವಿದ್ಯುತ್ ಬಿಲ್ ಏರಿಕೆಗೆ ಕಾರಣವಾಗಿಲಿದೆ. ವಿದ್ಯುತ್ ಕ್ಷೇತ್ರದ ಖಾಸಗೀಕರಣದ ಲಾಭ ಪಡೆಯಲೆಂದೇ, ಈ ಪಕ್ಷಗಳ ಹಲವು ರಾಜಕಾರಣಿಗಳು ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿಕೊಂಡಿರುವುದನ್ನು ನೋಡಿದರೆ, ಇವರ ಇಂತಹ ನಡೆ ಆಶ್ಚರ್ಯ ತರುವುದಿಲ್ಲ. ಜನರನ್ನು ಸುಲಿಗೆ ಮಾಡಲು ಇವರೆಲ್ಲರೂ ಕಾದು ಕುಳಿತಿದ್ದಾರೆ.

ನವ–ಉದಾರೀಕರಣದ ಪರಿಣಾಮ:

1991ರಲ್ಲಿ ಪಿ.ವಿ. ನರಸಿಂಹರಾವ್ ಸರ್ಕಾರವು ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ (ಎಲ್‌ಪಿಜಿ) ನೀತಿಗಳನ್ನು ಒಪ್ಪಿಕೊಂಡಿತು. ಅಂದು ಎಡ ಮತ್ತು ಪ್ರಗತಿಪರ ಸಂಘಟನೆಗಳು, ರೈತ ಮತ್ತು ಕಾರ್ಮಿಕ ಸಂಘಟನೆಗಳು ಕೇಂದ್ರ ಸರ್ಕಾರದ ಈ ನೀತಿಗಳನ್ನು ವಿರೋಧಿಸಿ ದೇಶಾದ್ಯಂತ ದೊಡ್ಡ ಮಟ್ಟದ ಹೋರಾಟ ನಡೆಸಿದರು. ಜನತೆಯ ಇಂತಹ ಪ್ರತಿರೋಧದಿಂದಾಗಿ ಎಲ್‌ಪಿಜಿ ನೀತಿಗಳ ಜಾರಿಯ ವೇಗಕ್ಕೆ ತಡೆವೊಡ್ಡಲು ಸಾಧ್ಯವಾಗಿದೆಯಾದರೂ, ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗಲಿಲ್ಲ. ನಂತರ ಬಂದ ಸರ್ಕಾರಗಳು ಈ ನೀತಿಗಳನ್ನು ಅನುಸರಿಸುತ್ತಾ ಬಂದಿವೆ. ಹಲವು ಸಾರ್ವಜನಿಕ ಕ್ಷೇತ್ರಗಳನ್ನು ಖಾಸಗಿ ಬಂಡವಾಳಗಾರರ ತೆಕ್ಕೆಗೆ ಹಾಕುತ್ತಿವೆ.

ವಾಜಪೇಯಿ ಸರ್ಕಾರದಿಂದ 'ವಿದ್ಯುತ್ ಕಾಯ್ದೆ 2003'

ವಾಜಪೇಯಿ ಪ್ರಧಾನಿಯಾಗಿದ್ದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು, ವಿದ್ಯುತ್ ವಲಯವನ್ನು ಖಾಸಗೀಕರಣದ ಭಾಗವಾಗಿ 'ವಿದ್ಯುತ್ ಕಾಯ್ದೆ 2003' ಅನ್ನು ಅಸ್ತಿತ್ವಕ್ಕೆ ತಂದಿತು. ಇದರ ಮೂಲಕ ವಿದ್ಯುತ್ ಉತ್ಪಾದನೆ ಮಾಡಲು ಖಾಸಗಿ ಬಂಡವಾಳಗಾರರಿಗೆ ಅವಕಾಶ ಕೊಟ್ಟಿತು. ಖಾಸಗಿ ಕಂಪನಿಗಳು ಉತ್ಪಾದನೆ ಮಾಡುವ ವಿದ್ಯುತ್ ಅನ್ನು ಸಾರ್ವಜನಿಕ ಕ್ಷೇತ್ರದ ವಿತರಣಾ ಕಂಪನಿಗಳು ಖರೀದಿ ಮಾಡಿ ವಿತರಣೆ ಮಾಡುತ್ತಿವೆ. ಈ ಖರೀದಿ ವ್ಯವಹಾರದಲ್ಲೂ ಖಾಸಗಿ ವಿದ್ಯುತ್ ಉತ್ಪಾದನಾ ಕಂಪನಿಗಳು ಸರ್ಕಾರದ ಮೇಲೆ ಪ್ರಭಾವ ಬೀರುವ ಮೂಲಕ ದುಬಾರಿ ದರಕ್ಕೆ ವಿದ್ಯತ್ ಖರೀದಿ ಮಾಡುವಂತೆ ನೋಡಿಕೊಂಡಿವೆ. ಇಂದು ಎಲ್ಲಾ ರೀತಿಯ ಗ್ರಾಹಕರಿಗೆ ವಿದ್ಯುಚ್ಛಕ್ತಿ ದುಬಾರಿಯಾಗಲು ಖಾಸಗಿ ಕಂಪನಿಗಳ ಒಲವುಳ್ಳ ಸರ್ಕಾರದ ನೀತಿಗಳೇ ಕಾರಣ.

ಮೋದಿ ಸರ್ಕಾರದಿಂದ ವಿದ್ಯುತ್ (ತಿದ್ದುಪಡಿ) ಮಸೂದೆ–2022

ದೇಶದಲ್ಲಿ ವಿದ್ಯುತ್ ವಲಯವನ್ನು ಸಂಪೂರ್ಣ ಖಾಸಗೀಕರಣ ಮಾಡುವ ಗುರಿಯೊಂದಿಗೆ, ವಿದ್ಯುತ್ (ತಿದ್ದುಪಡಿ) ಮಸೂದೆ–2022 ನ್ನು ಸಂಸತ್ತಿನಲ್ಲಿ ಮಂಡಿಸಿತು. ವಿದ್ಯುತ್ ಉತ್ಪಾದನೆ, ಸಾಗಣೆ ಮತ್ತು ವಿತರಣೆ ಈ ಮೂರು ವಿಭಾಗಗಳನ್ನು ಖಾಸಗಿ ಬಂಡವಾಳಗಾರರಿಗೆ ಒಪ್ಪಿಸಲು ಈ ಮಸೂದೆ ಅವಕಾಶ ನೀಡುತ್ತದೆ.



ವಿದ್ಯುತ್ (ಗ್ರಾಹಕರ ಹಕ್ಕುಗಳು) ನಿಯಮಗಳು, 2020 ನ್ನು ವಿದ್ಯುತ್ (ಗ್ರಾಹಕರ ನಿಯಮಗಳು) ತಿದ್ದುಪಡಿ ನಿಯಮಗಳು, 2023 ಗೆ ಬದಲಾಯಿಸಲಾಗಿದೆ. ಕೇಂದ್ರ ವಿದ್ಯುತ್ ಸಚಿವಾಲಯವು ಜೂನ್ 14ರಂದು ಸರ್ಕಾರಿ ಗೆಜೆಟ್‌ನಲ್ಲಿ ಇದನ್ನು ಸದ್ದಿಲ್ಲದೆ ಪ್ರಕಟಿಸಿದೆ. ಇದರ ಪ್ರಕಾರ ಗೃಹ ಬಳಕೆ ಸೇರಿದಂತೆ ಎಲ್ಲ ವಿದ್ಯುತ್ ಸಂಪರ್ಕಗಳಿಗೂ ಸ್ಮಾರ್ಟ್ ಮೀಟರ್ ಅಳವಡಿಸಬೇಕು. ಅಲ್ಲದೆ, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ 19 ಕಿಲೋವ್ಯಾಟ್‌ಗಿಂತ ಹೆಚ್ಚು ವಿದ್ಯುತ್ ಬಳಸುವ ಗ್ರಾಹಕರಿಗೆ (ಕೃಷಿ ಗ್ರಾಹಕರನ್ನು ಹೊರತುಪಡಿಸಿ) ಏಪ್ರಿಲ್ 1, 2024ರ ಮೊದಲು TOD (Time of Day–ದಿನದ ಸಮಯ) ಮೀಟರ್‌ಗಳನ್ನು ಅಳವಡಿಸಬೇಕು.

ಪ್ರಿಪೇಯ್ಡ್ ವಿದ್ಯುತ್ ಮೀಟರ್

ಪ್ರಿಪೇಯ್ಡ್ ವಿದ್ಯುತ್ ಮೀಟರ್ ಅಳವಡಿಕೆಗೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಆಗಸ್ಟ್ 16, 2023ರಂದು ಕರಡು ಪ್ರಕಟಣೆ ಹೊರಡಿಸಿತು. ಪ್ರಿಪೇಯ್ಡ್ ವಿದ್ಯುತ್ ಮೀಟರ್ ಅಳವಡಿಕೆ ಕಡ್ಡಾಯವಲ್ಲ, ಇಷ್ಟ ಪಡುವವರು ಅಳವಡಿಕೊಳ್ಳಬಹುದು ಎಂದು ಆಯೋಗ ಹೇಳಿತ್ತು. "ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪೂರ್ವ–ಪಾವತಿಸಿದ ಸ್ಮಾರ್ಟ್ ಮೀಟರಿಂಗ್) ನಿಯಮಗಳು, 2023" ಎಂಬ ಈ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದರೆ ಸಾರ್ವಜನಿಕರು ಗೆಜೆಟ್ ಪ್ರಕಟಣೆಯ 30 ದಿನಗಳ ಒಳಗಾಗಿ ಸಲ್ಲಿಸಬಹುದು ಎಂದು ಅದು ಹೇಳಿತ್ತು. ಈಗ ತಾತ್ಕಾಲಿಕ ಸಂಪರ್ಕ ಮತ್ತು ಹೊಸ ಸಂಪರ್ಕ ಪಡೆಯುವವರು ಕಡ್ಡಾಯವಾಗಿ ಪೂರ್ವ–ಪಾವತಿಸಿದ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳಬೇಕು ಎಂದು ಆದೇಶ ಹೊರಡಿಸಿದೆ. ದಿನಗಳು ಕಳೆದಂತೆ ಇದು ಎಲ್ಲರೂ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಮಾಡುತ್ತಾರೆ.

ಸ್ಮಾರ್ಟ್ ಮೀಟರ್ ಅಳವಡಿಕೆಯ ಪರಿಣಾಮ

ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸುವುದು ಖಾಸಗೀಕರಣದ ಭಾಗವಾಗಿದೆ. ಖಾಸಗಿ ಯುಟಿಲಿಟಿ ಕಂಪನಿಗಳು ಒಪ್ಪಂದದ ಮೂಲಕ ಸ್ಮಾರ್ಟ್ ಮೀಟರ್ಗಳನ್ನು ಅಳವಡಿಸುತ್ತವೆ. ಖಾಸಗಿ ಹೂಡಿಕೆದಾರರು ಕೆಲವು ವರ್ಷಗಳವರೆಗೆ ನಿರ್ವಹಣೆ ಕೆಲಸವನ್ನು ಮಾಡುತ್ತಾರೆ. ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ಪ್ರತಿ ಮೀಟರ್‌ಗೆ ಮಾಸಿಕ ಬಾಡಿಗೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ಮೊತ್ತವನ್ನು ನಿಗದಿತ ಸಮಯದಲ್ಲಿ ಗ್ರಾಹಕರಿಗೆ ವಿಧಿಸಬಹುದು. ಭವಿಷ್ಯದಲ್ಲಿ ಈ ಎಲ್ಲಾ ಸ್ಮಾರ್ಟ್ ಮೀಟರ್ ಅನ್ನು ಪ್ರಿಪೇಯ್ಡ್ ಮೀಟರ್ ಆಗಿ ಪರಿವರ್ತಿಸಲಾಗುತ್ತದೆ. ಆ ಸಂದರ್ಭದಲ್ಲಿ, ಗ್ರಾಹಕರು ಮೊದಲೇ ಹಣ ಪಾವತಿ ಮಾಡಿ ವಿದ್ಯುತ್ ಖರೀದಿಸಬೇಕು (ಮೊಬೈಲ್ ಫೋನ್ ರೀಚಾರ್ಜ್ ಮಾಡುವಂತೆ).

ಸಮಯಕ್ಕೆ ಅನುಗುಣವಾಗಿ ಶುಲ್ಕಗಳು

ಸ್ಮಾರ್ಟ್ ಮೀಟರ್‌ಗಳು ಪೀಕ್ ಅವರ್‌ನಲ್ಲಿ (ಹೆಚ್ಚಿನ ಬೇಡಿಕೆ ಇರುವ ಸಮಯದಲ್ಲಿ) ವಿದ್ಯುಚ್ಛಕ್ತಿ ಬಳಕೆದಾರರಿಗೆ ಶೇ. 10ರಿಂದ 20ರವರೆಗೆ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ಲೆಕ್ಕ ಹಾಕುತ್ತವೆ. ಅಂದರೆ, ಸಮಯ ಆಧಾರಿತ ವಿದ್ಯುತ್ ಶುಲ್ಕಗಳು. ವಿದ್ಯುತ್ ಬಳಕೆಯ ಸಮಯವನ್ನು ಮೂರು ವಿತರಣಾ ಸಮಯಗಳಾಗಿ ವಿಂಗಡಿಸಲಾಗಿದೆ. ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ಬೆಳಿಗ್ಗೆ 6 ರಿಂದ ಬೆಳಿಗ್ಗೆ 10 ರವರೆಗೆ ಮತ್ತು ಸಂಜೆ 5 ರಿಂದ ರಾತ್ರಿ 10 ರವರೆಗೆ ವಿದ್ಯುತ್ ಬಳಕೆಗಾಗಿ ಗರಿಷ್ಠ ಬೇಡಿಕೆ ಸಮಯ ಎಂದು ಕರೆಯುವ ಮೂಲಕ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ವಿಧಿಸುವುದು; ಎಲ್ಲಾ ವಿದ್ಯುತ್ ಗ್ರಾಹಕರಿಗೆ ಗರಿಷ್ಠ ಬೇಡಿಕೆ ಸಮಯದಲ್ಲಿ ಹೆಚ್ಚುವರಿ ವಿದ್ಯುತ್ ಶುಲ್ಕವನ್ನು ನಿರ್ಧರಿಸುತ್ತದೆ. ಏಕೆಂದರೆ ಮಕ್ಕಳು ಓದುವುದು, ಅಡುಗೆ ಮಾಡುವುದು, ದೂರದರ್ಶನ ವೀಕ್ಷಣೆ ಮಾಡುವಂತಹ ಈ ಸಮಯದಲ್ಲಿ ಜನರು ಹೆಚ್ಚು ವಿದ್ಯುತ್ ಬಳಸುತ್ತಾರೆ. ಅದೇ ರೀತಿ ರಾತ್ರಿ 10 ರಿಂದ ಬೆಳಗಿನ ಜಾವ 5 ರವರೆಗೆ ಹೆಚ್ಚು ಬಳಕೆ ಇಲ್ಲ. ಈ ಸಮಯದಲ್ಲಿ ಸಾಮಾನ್ಯ ದರವನ್ನು ವಿಧಿಸಲಾಗುತ್ತದೆ ಮತ್ತು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ 3ನೇ ಅವಧಿಯನ್ನು ಅರ್ಧ ಪೀಕ್ ಅವರ್ ಎಂದು ಲೆಕ್ಕಹಾಕಲಾಗುತ್ತದೆ.

ಕಣ್ಮರೆಯಾಗುತ್ತಿರುವ ಉದ್ಯೋಗಾವಕಾಶಗಳು

ಸ್ಮಾರ್ಟ್ ಮೀಟರ್ ಬಂದ ನಂತರ ನೌಕರರು ಎಷ್ಟು ಪ್ರಮಾಣದ ವಿದ್ಯುತ್ ಬಳಕೆ ಮಾಡಲಾಗಿದೆ ಎಂದು ನೋಡಲು, ಮತ್ತು ಬಿಲ್ ಕೊಡಲು ಮನೆ ಮನೆಗೆ ಬರುವ ಅಗತ್ಯ ಇರುವುದಿಲ್ಲ. ಈಗಾಗಲೇ ಆ ಕೆಲಸ ಮಾಡುತ್ತಿರುವ ಅಂತಹ ಸಿಬ್ಬಂದಿಯನ್ನು ಬೇರೆ ಕೆಲಸಕ್ಕೆ ವರ್ಗಾಯಿಸಲಾಗುತ್ತಿದೆ. ಕ್ಷೇತ್ರ ಸಿಬ್ಬಂದಿ ಸಂಖ್ಯೆ ಕಡಿಮೆಯಾಗಲಿದೆ. ರೀಚಾರ್ಜ್ ಮಾಡದಿದ್ದರೆ, ಕಂಪ್ಯೂಟರ್ ಮೂಲಕ ಸಂಪರ್ಕ ಕಡಿತಗೊಳಿಸಲಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಉದ್ಯೋಗಾವಕಾಶಗಳು ಕೈತಪ್ಪಿ, ವಿದ್ಯಾವಂತ ಯುವಕರ ಸರ್ಕಾರಿ ಉದ್ಯೋಗದ ಕನಸು ಕಮರಿ ಹೋಗಲಿದೆ. ಖಾಸಗೀಕರಣವು ಸಾಮಾಜಿಕ ಭದ್ರತೆ ಮತ್ತು ಮೀಸಲಾತಿಯೊಂದಿಗೆ ಸರ್ಕಾರಿ ಉದ್ಯೋಗವನ್ನು, ಸಾಮಾಜಿಕ ನ್ಯಾಯವನ್ನು ಹಳಸುವಂತೆ ಮಾಡಿದೆ ಮತ್ತು ವಿದ್ಯಾವಂತ ಯುವಕರ ಭವಿಷ್ಯದ ಮೇಲೆ ಪುಟ 6 ಕ್ಕೆ

ಸರಕಾರಿ ಪಿಂಚಣಿದಾರರಲ್ಲಿ ತಾರತಮ್ಯಕ್ಕೆ ಅನುವು ಮಾಡಿಕೊಡುವ ಮಸೂದೆಗೆ ಅಂಗೀಕಾರ–ಮೋದಿ ಸರಕಾರದ ಮತ್ತೊಂದು ವಂಚಕ ನಡೆ: ಸಿಐಟಿಯು ಖಂಡನೆ

ವೇತನ ಆಯೋಗದ ಶಿಫಾರಸುಗಳಿಗೆ ಸಂಬಂಧಪಟ್ಟಂತೆ ನಿವೃತ್ತಿದಾರರಲ್ಲಿ ತಾರತಮ್ಯ ಮಾಡಲು ಸರಕಾರಕ್ಕೆ ಅನುವು ಮಾಡಿಕೊಡುವ ಮಸೂದೆಯನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ. ಇದು ಪ್ರಾರಂಭದಿಂದಲೂ ಅನುಸರಿಸಿಕೊಂಡು ಬಂದಿರುವ ದೀರ್ಘಕಾಲೀನ ಆಚರಣೆಗಳ ಸಂಪೂರ್ಣ ಉಲ್ಲಂಘನೆಯಾಗಿದೆ ಮತ್ತು ಸರ್ಕಾರಿ ಸೇವೆಗಳ ನಿವೃತ್ತಿದಾರರನ್ನು ವಂಚಿಸುವ ಸರ್ಕಾರದ ಹತಾಶ ಮತ್ತು ಲಂಗುಲಗಾಮಿಲ್ಲದ ಕ್ರಮವಾಗಿದೆ ಎಂದು ಸಿಐಟಿಯು ಖಂಡಿಸಿದೆ.

2025ರ ಮಾರ್ಚ್ 25ರಂದು ಲೋಕಸಭೆಯಲ್ಲಿ ಹಣಕಾಸು ಮಸೂದೆ 2025ರ ಭಾಗವಾಗಿ ಅಂಗೀಕರಿಸಲಾದ “ಭಾರತದ ಕ್ರೋಢೀಕೃತ ನಿಧಿಯಿಂದ ಪೆನ್ಶನ್ ಬಾಧ್ಯತೆಗಳ ಮೇಲಿನ ವೆಚ್ಚಕ್ಕಾಗಿ ಸಿಸಿಎಸ್ (ಪೆನ್ಶನ್) ನಿಯಮಗಳು ಮತ್ತು ತತ್ವಗಳ ದೃಢೀಕರಣ” ಕುರಿತಾದ ವಿಧೇಯಕವು, ನವ ಉದಾರವಾದಿ ಶಕ್ತಿಗಳು ಹೇರುವ ತಥಾಕಥಿತ “ಮಿತವ್ಯಯ ಕ್ರಮ”ಗಳ ಭಾಗವಾಗಿರುವ ಸರ್ಕಾರದ ವಂಚಕ, ತಾರತಮ್ಯದ ಮತ್ತು ಅನ್ಯಾಯದ ಕಸರತ್ತು ಎಂದು ಸಿಐಟಿಯು ವರ್ಣಿಸಿದೆ.

ನಿವೃತ್ತಿ ದಿನಾಂಕದ ಆಧಾರದ ಮೇಲೆ ವೇತನ ಆಯೋಗಗಳ ಶಿಫಾರಸುಗಳ ಅನ್ವಯಕ್ಕೆ ಸಂಬಂಧಿಸಿದಂತೆ ನಿವೃತ್ತಿದಾರರಲ್ಲಿ ಭಿನ್ನತೆಯ ನೆಪದಲ್ಲಿ ತಾರತಮ್ಯ ಮಾಡಲು ಈ ಶಾಸನವು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. ಅಲ್ಲದೆ ಈ ಶಾಸನವು ಜೂನ್ 1, 1972ರಿಂದಲೇ ಪೂರ್ವಾನ್ವಯವಾಗುತ್ತದೆ. ಆದ್ದರಿಂದ ಶಾಸನವು ಖಾತರಿಪಡಿಸಿದ ಹಳೆಯ ನಿವೃತ್ತಿ ಯೋಜನೆ (ಒಪಿಎಸ್), ಹೊಸ ನಿವೃತ್ತಿ ಯೋಜನೆ (ಎನ್‌ಪಿಎಸ್) ಮತ್ತು ಸರ್ಕಾರವು ಮಾಧ್ಯಮಗಳಲ್ಲಿ ಬಹಳಷ್ಟು ಪ್ರಚಾರ ಮಾಡಿದ ಇತ್ತೀಚಿನ ಏಕೀಕೃತ ನಿವೃತ್ತಿ ಯೋಜನೆ(ಯುಪಿಎಸ್)ಯ ಅಡಿಯಲ್ಲಿ ಎಲ್ಲ ನಿವೃತ್ತಿದಾರರನ್ನೂ ಮೋಸದಿಂದ ಸುಲಿಗೆ ಮಾಡಿದೆ ಎಂದಿರುವ ಸಿಐಟಿಯು, ಈ ಶಾಸನ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಕಾರ್ಮಿಕರು ಮತ್ತು ನೌಕರರ ವಿರುದ್ಧ ಎಸಗಿರುವ ಅನ್ಯಾಯಗಳಿಗೆ ಮತ್ತೊಂದು ಉದಾಹರಣೆಯಾಗಿದೆ ಎಂದು ಹೇಳಿದೆ.

ನೌಕರರು ಮತ್ತು ನಿವೃತ್ತಿದಾದಾರರು ಪೆನ್ಶನ್‌ಗಳನ್ನು ಮೊಟಕುಗೊಳಿಸುವ ಎಲ್ಲ ನೀತಿಗಳನ್ನು ಸಂಪೂರ್ಣವಾಗಿ ವಿರೋಧಿಸಿಕೊಂಡು ಬಂದಿದ್ದಾರೆ ಮತ್ತು ದೇಣಿಗೆ–ರಹಿತ ಮತ್ತು ಖಾತರಿಪಡಿಸಿದ ನಿವೃತ್ತಿ ವೇತನ ಯೋಜನೆ, ಅಂದರೆ ಒಪಿಎಸ್ ಬಿಟ್ಟು ಬೇರೇನನ್ನೂ ಒಪ್ಪಲು ಸಾಧ್ಯವೇ ಇಲ್ಲ ಎಂದು ಆಗ್ರಹ ಪಡಿಸುತ್ತ ಬಂದಿದ್ದಾರೆ. ಇದಕ್ಕಾಗಿ ನಿರಂತರ ಚಳುವಳಿಯನ್ನು ನಡೆಸಿದ್ದಾರೆ ಮತ್ತು ಈಗಲೂ ನಡೆಸುತ್ತಿದ್ದಾರೆ. ಆದ್ದರಿಂದ ಲೋಕಸಭೆಯಲ್ಲಿ ಅಂಗೀಕರಿಸಲಾದ ಕುರಿತ ಮಸೂದೆಯನ್ನು ರದ್ದುಗೊಳಿಸಬೇಕು ಎಂದು ಸಿಐಟಿಯು ಕೇಂದ್ರ ಸರಕಾರವನ್ನು ಆಗ್ರಹಿಸಿದೆ. ಈ ವಿಧೇಯಕವನ್ನು ವಿರೋಧಿಸುವಲ್ಲಿ ಮತ್ತು ಧಿಕ್ಕರಿಸುವಲ್ಲಿ ಮತ್ತು ಶಾಸನಬದ್ಧ ಖಾತರಿ – ದೇಣಿಗೆ ರಹಿತ ಪೆನ್ಶನ್ ಯೋಜನೆಯಾದ ಹಳೆಯ ಪೆನ್ಶನ್ ಯೋಜನೆ (ಒಪಿಎಸ್) ಬೇಕೆಂದು ಆಗ್ರಹಿಸುವಲ್ಲಿ ನೌಕರರು ಮತ್ತು ಪಿಂಚಣಿದಾರರ ಜೊತೆ ನಿಲ್ಲುವುದಾಗಿಯೂ ಘೋಷಿಸಿರುವ ಸಿಐಟಿಯು, ವೇತನ ಆಯೋಗಗಳ ಶಿಫಾರಸುಗಳ ಅನ್ವಯದಲ್ಲಿ ಯಾವುದೇ ತಾರತಮ್ಯದ ನಡೆ ಅಥವ ಕಸರತ್ತನ್ನು ವಿರೋಧಿಸುವುದಾಗಿ ಹೇಳಿದೆ.

ಔರಂಗಜೇಬನ ಸಮಾಧಿ: ಅವಾಸ್ತವ ವಿವಾದ–ಧರ್ಮ ರಾಜಕೀಯ...... ಪುಟ 4 ರಿಂದ

ಎಂದು ಹೇಳುತ್ತದೆ. ಹರಿಯಾಣದಲ್ಲಿ ಪತ್ತೆಯಾದ ನಾರಾಯಣ ಶಿಲಾ ಶಾಸನವು ಮುಹಮ್ಮದ್ ಬಿನ್ ತುಘಲಕ್ ಅವರನ್ನು ಭೂಮಂಡಲದ ಮೇಲಿನ ಆಡಳಿತಗಾರರಲ್ಲಿನ ರತ್ನ ಎಂದು ಹೊಗಳುತ್ತದೆ. 1369ರ ಕಾಶ್ಮೀರ ಶಾಸನವು ರಾಜ ಶಹಾಬುದ್ದೀನ್ ನನ್ನು ಕ್ಷತ್ರಿಯ ವಂಶಸ್ಥನಂತೆ ಪಾಂಡವ ಮನೆತನದವನಂತೆ ಪ್ರಶಂಸಿಸುತ್ತದೆ.

ನಿಜವೇನೆಂದರೆ, ರಾಜರು ಯಾರಾದರೂ ದೈವ ನಿರ್ಣಯದ ಪ್ರಕಾರವೇ ಆಳ್ವಿಕೆ ನಡೆಸುತ್ತಿದ್ದರು ಎನ್ನುವಂತೆ ಆ ಕಾಲದ ಅನೇಕ ಗ್ರಂಥಗಳು ಮತ್ತು ಶಾಸನಗಳು ಹೇಳುತ್ತವೆ. ರಾಜರುಗಳ ನಡುವೆ, ರಾಜ್ಯಗಳ ನಡುವೆ ಯುದ್ಧಗಳು, ರಾಜ್ಯದ ದಬ್ಬಾಳಿಕೆಗಳು ಇದ್ದಂತೆ ಮುಸ್ಲಿಂ ಆಳ್ವಿಕೆಯಲ್ಲಿಯೂ ಯುದ್ಧಗಳು ನಡೆದಿವೆ. ಕೆಲವರಲ್ಲಿ ಅದು ಹೆಚ್ಚು ಇರಬಹುದೇ ವಿನಃ ಬ್ರಿಟಿಷರು ಹಿಂದೂ ಯುಗ, ಮುಸ್ಲಿಂ ಯುಗ ಎಂದು ವಿಂಗಡಿಸಿದ ನಂತರವೇ ಎರಡೂ ಧರ್ಮಗಳ ನಡುವೆ ಪ್ರತ್ಯೇಕವಾಗಿ ನೋಡುವ ಪ್ರವೃತ್ತಿ ಹೆಚ್ಚಾಯಿತು. 1808ರಲ್ಲಿ ಮೃತ್ಯುಂಜಯ ವಿದ್ಯಾಲಂಕಾರ ಬರೆದ ‘ರಾಜವಳಿ’ ಅಕ್ಬರ್ ಅವರನ್ನು ಹೊಗಳುತ್ತ, ಔರಂಗಜೇಬನು ದೇವಾಲಯಗಳನ್ನು ನಾಶಮಾಡಿದ್ದಲ್ಲದೆ, ಆತನಿಂದ ದೇವಾಲಯಗಳ ಪೋಷಣೆಯೂ ನಡೆದಿದೆ ಎಂದು ಹೇಳುತ್ತದೆ.

ಆದರೆ 1878ರಲ್ಲಿ ಬಂದ ಭೋಲನಾಥ ಚಕ್ರವರ್ತಿಯ ಭಾರತೇಶ್ವರ ಇತಿಹಾಸದಲ್ಲಿ ದೀರ್ಘಕಾಲದ ಮುಸ್ಲಿಂ ಆಳ್ವಿಕೆಯಿಂದಾಗಿ ಹಿಂದೂ ಸಮಾಜ ಪತನಗೊಂಡಿತು ಮತ್ತು ಮೌಲ್ಯಗಳು ಕ್ಷೀಣಿಸಿಹೋದವು ಎಂದು, ಆ ನಂತರ ಯವನರ (ಇಂಗ್ಲಿಷರ) ಆಗಮನದೊಂದಿಗೆ ಅವನತಿ ಇನ್ನಷ್ಟು ತೀವ್ರವಾಯಿತು ಎಂದು ಅವರು ಬರೆಯುತ್ತಾರೆ. ಇದನ್ನು ಅನುಸರಿಸಿಯೇ ನೂರು ವರ್ಷಗಳ ಹಿಂದೆ ಆರ್‌ಎಸ್‌ಎಸ್ ಹುಟ್ಟಿಕೊಂಡಾಗ, ತಮ್ಮ ಧಾರ್ಮಿಕ ರಾಜಕೀಯಕ್ಕಾಗಿ ಔರಂಗಜೇಬ್ ನನ್ನು ವಿಶೇಷವಾಗಿ ಆಯ್ಕೆ ಮಾಡಿಕೊಂಡರು.

ಅವರು ಹಿಂದುಗಳ ಮೇಲೆ ಜಿಜ್ಯಾ ತೆರಿಗೆ ವಿಧಿಸುವ ಬಗ್ಗೆ ಮಾತನಾಡುತ್ತಾರೆ. ಇದಕ್ಕೆ ಧಾರ್ಮಿಕ ದ್ವೇಷವೇ ಕಾರಣವಾಗಿದ್ದರೆ, ಅಧಿಕಾರ ವಹಿಸಿಕೊಂಡು ಇಪ್ಪತ್ತು ವರ್ಷಗಳ ನಂತರ ಈ ತೆರಿಗೆಯನ್ನು ಜಾರಿಗೆ ತರಲು ಅವರು ಎರಡು ದಶಕಗಳ ಕಾಲ ಏಕೆ ಕಾಯುತ್ತಿದ್ದರು ಎಂದು ಇತಿಹಾಸಕಾರರು ಪ್ರಶ್ನಿಸುತ್ತಾರೆ. ಕೆಲವು ವಿಷಯಗಳಲ್ಲಿ ಔರಂಗಜೇಬ್ ಇತರರಿಗಿಂತ ಉತ್ತಮನಾಗಿದ್ದನೆಂದು ಕೆಲವರು ಹೇಳುತ್ತಾರೆ, ಆದರೆ ಅದು ಅನಾವಶ್ಯಕ ವಾದ, ಏನೇ ಆದರೂ ಇತಿಹಾಸ ಇತಿಹಾಸವೇ.

ಚುನಾವಣಾ ದಾಳಗಳು

ವಾಸ್ತವವಾಗಿ, ಬಿಜೆಪಿ ಮಹಾರಾಷ್ಟ್ರ ಚುನಾವಣಾ ಪ್ರಚಾರದಲ್ಲಿ ಔರಂಗಜೇಬ್ ನನ್ನು ರಂಗಕ್ಕೆ ತಂದಿತು. ಆದರೆ ಗೆಲುವು ಸಾಧಿಸಿದ ನಂತರ ಸಮಸ್ಯೆಗಳನ್ನು ಮತ್ತಷ್ಟು ತೀವ್ರವಾಗಿ ಎದುರಿಸುತ್ತಿದೆ. ಮಹಾರಾಷ್ಟ್ರದಲ್ಲಿ, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ರೈತರ ಆತ್ಮಹತ್ಯೆಗಳು, ಗಂಭೀರ ಆರ್ಥಿಕ ಸಮಸ್ಯೆಗಳು ಉಂಟಾಗಿವೆ. ಇವುಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಆಳುವ ಕೂಟವು ಬೇಕೆಂತಲೇ ಶತಮಾನಗಳಷ್ಟು ಹಳೆಯದಾದ ಈ ಸಮಾಧಿ ವಿವಾದವನ್ನು ಪ್ರೋತ್ಸಾಹಿಸಿದೆ ಎಂದು ದಿ ಹಿಂದೂ ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಸ್ಪಷ್ಟವಾಗಿ ಟೀಕಿಸಿದೆ.

ವಿಧಾನಸಭಾ ಚುನಾವಣೆಯಲ್ಲಿಯೇ ಬಿಜೆಪಿ ನಾಯಕರು ಔರಂಗಾಬಾದ್ ಅನ್ನು ಚುನಾವಣಾ ವಿಷಯವನ್ನಾಗಿ ಮಾಡಿ ಮತಗಳನ್ನು ಗಳಿಸಿತು. ಗುಡಿ ಪಾಡ್ವ (ವರ್ಷದ) ಮೊದಲ ದಿನದ ಉತ್ಸವಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮಾರ್ಚ್ 30 ರಂದು ನಾಗ್ಪುರಕ್ಕೆ ಬರುತ್ತಿದ್ದಾರೆ. ಮೊದಲ ಬಾರಿಗೆ ಪ್ರಧಾನಿಯೊಬ್ಬರು ಹೆಗ್ಡೇವರ್ ಮತ್ತು ಗೋಲ್ವಾಲ್ಕರ್ ಸ್ಮೃತಿ ಮಂದಿರಕ್ಕೆ ಭೇಟಿ ನೀಡಲಿದ್ದಾರೆ. ಈ ಘರ್ಷಣೆಗಳು ಮೋದಿ ಆಗಮನದ ಹಿನ್ನೆಲೆಯಲ್ಲಿ ನಡೆದಿವೆಯೇ ಎಂಬ ಅನುಮಾನವಿದೆ. ಮುಂದಿನ ಎರಡು ವರ್ಷಗಳಲ್ಲಿ ಬಿಹಾರ, ಉತ್ತರ ಪ್ರದೇಶ ಮತ್ತು ಗುಜರಾತ್ ಸೇರಿದಂತೆ ಪ್ರಮುಖ ರಾಜ್ಯಗಳಲ್ಲಿ ಚುನಾವಣೆಗಳು ನಡೆಯಲಿವೆ. ಔರಂಗಜೇಬನ ವಂಶಸ್ಥರು ಈಗ ರಿಕ್ಷಾ ಎಳೆಯುತ್ತಾ ಬದುಕುತಿದ್ದಾರೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಗೇಲಿ ಮಾಡಿದರು. ತಮ್ಮದೇ ರಾಜ್ಯದ ವಿಧಾನಸಭಾ ಚುನಾವಣೆ ಬಂದಾಗ ಅವರಂತವರು ಮತ್ತೆಷ್ಟು ವಿವಾದಗಳನ್ನು ಮುಂದೆ ತರುತ್ತಾರೋ? ಬಹಳಷ್ಟು ಜನರು ಇದನ್ನು ಮತ್ತೊಂದು ಅಯೋಧ್ಯ ವಿವಾದಂತೆ ನೋಡುತ್ತಿದ್ದಾರೆಂದರೆ ಕಾರಣ ಇದೇ ಆಗಿದೆ. ಸದ್ಯದಲ್ಲೇ ಬರಲಿರುವ ಆಂಧ್ರಪ್ರದೇಶ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರ ‘ಹರಿಹರ ವೀರಮಲ್ಲು’ ಸಿನೆಮಾ ಕೂಡ ಔರಂಗಜೇಬನ ವಿರುದ್ಧ ಕೇಸರಿ ಶೈಲಿಯ ಹೋರಾಟವಾಗಿದೆ!

–ಸಿಚಿ (ಕೃಪೆ: ಪ್ರಜಾಶಕ್ತಿ)

ಸ್ಮಾರ್ಟ್ ಮೀಟರ್ ಹಗರಣ: ಮುಚ್ಚಿಟ್ಟ ಗ್ರಾಹಕರ ಸುಲಿಗೆಯ ನೀತಿಯೂ....... ಪುಟ 5 ರಿಂದ

ಪರಿಣಾಮ ಬೀರುತ್ತದೆ.

ಗ್ರಾಹಕರನ್ನು ಆಯ್ಕೆ ಮಾಡುವ ಹಕ್ಕು;

ವಿದ್ಯುಚ್ಛಕ್ತಿ ಕಾಯ್ದೆಯ ತಿದ್ದುಪಡಿಯ ಆಧಾರದ ಮೇಲೆ ವಿದ್ಯುತ್ ವಿತರಣೆಯಲ್ಲಿ ಬಹು ಪರವಾನಗಿದಾರರನ್ನು ತೊಡಗಿಸಿಕೊಳ್ಳಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಗ್ರಿಡ್ ರಚನೆಯಲ್ಲಿ ಅಸ್ತಿತ್ವದಲ್ಲಿರುವ ಪ್ರಸರಣ ಮಾರ್ಗಗಳ ಮೇಲೆ ಖಾಸಗಿ ಉದ್ಯಮಿಗಳು ವಿದ್ಯುತ್ ವಿತರಣೆ ಮಾಡುತ್ತಾರೆ. ಗ್ರಾಹಕರನ್ನು ಆಯ್ಕೆ ಮಾಡುವ ಹಕ್ಕನ್ನು ಸಹ ಅವರಿಗೆ ನೀಡಲಾಗಿದೆ. ಹಾಗಿದ್ದಲ್ಲಿ, ಖಾಸಗಿ ವಿದ್ಯುತ್ ವಿತರಕರು ಹೆಚ್ಚು ವಿದ್ಯುತ್ ಬಳಸುವವರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಹೀಗಾಗಿ ವಿದ್ಯುತ್ ಸಹ, ಮುಕ್ತ ಮಾರುಕಟ್ಟೆಯ ಸರಕಾಗುತ್ತದೆ. ಅನುಕೂಲಸ್ಥರಿಗೆ ಮಾತ್ರ ವಿದ್ಯುತ್ ಇರುತ್ತದೆ. ಖಾಸಗಿ ವ್ಯಕ್ತಿಗಳು ವಿದ್ಯುತ್ ದರ ನಿಗದಿಯ ಹಕ್ಕುಗಳನ್ನು ಪಡೆಯುವುದರಿಂದ ವಿದ್ಯುತ್ ಬಿಲ್ ಗಗನಕ್ಕೇರುತ್ತದೆ.

ಹಲವು ವರ್ಷಗಳಿಂದ ಬಡ ಕುಟುಂಬಗಳು ಉಚಿತವಾಗಿ ಬಳಕೆ ಮಾಡುತ್ತಿದ್ದ ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಎಂಬ ವ್ಯವಸ್ಥೆಯನ್ನು ‘ಉಚಿತ ಗೃಹ ಬಳಕೆಯ ವಿದ್ಯುತ್ ಯೋಜನೆ’ಯಾದ ‘ಗೃಹ ಜ್ಯೋತಿ’ಯು ತನ್ನೊಳಗೆ ಸೇರಿಸಿಕೊಂಡಿದೆ. ವಿದ್ಯುತ್ ಕ್ಷೇತ್ರ ಸಂಪೂರ್ಣವಾಗಿ ಖಾಸಗಿಯವರ ತೆಕ್ಕೆಗೆ ಹೋದರೆ, ಬಡ ಗ್ರಾಹಕರನ್ನು ಅವರು ಆಯ್ಕೆಮಾಡಿಕೊಳ್ಳುತ್ತಾರೆಯೇ? ಅಥವಾ, ಖಾಸಗಿ ಕಂಪನಿಗಳು ವಿಧಿಸುವ ದುಬಾರಿ ದರ ಕೊಟ್ಟು ಬಡವರು ವಿದ್ಯುತ್ ಬಳಕೆ ಮಾಡಲಾದೀತೆ? ಇದರೊಂದಿಗೆ ರಾಜ್ಯ ಸರ್ಕಾರದ ‘ಗೃಹಬಳಕೆಗೆ 200 ಯೂನಿಟ್ ವರೆಗಿನ ವಿದ್ಯುತ್ ಉಚಿತ’ ಎಂಬ ಯೋಜನೆ ಉಳಿಯಲಿದೆಯೇ?

ಪಂಪ್‌ಸೆಟ್‌ಗಳಿಗೂ ಮೀಟರ್:

ಕೃಷಿಗಾಗಿ ಜಮೀನಿನಲ್ಲಿ ಅಳವಡಿಸಿರುವ ಪಂಪ್‌ಸೆಟ್‌ಗಳಿಗೆ ಈಗ ಉಚಿತವಾಗಿ ವಿದ್ಯುತ್ ಬಳಕೆ ಸೌಲಭ್ಯವಿದೆ. ಒಬ್ಬ ರೈತ ತಿಂಗಳಿಗೆ 10,000 ರೂ. ವೆಚ್ಚದ ವಿದ್ಯುತ್ ಬಳಕೆ ಮಾಡುತ್ತಿದ್ದಾರೆ ಎಂದಿಟ್ಟುಕೊಳ್ಳಿ. ಈಗ ಅದನ್ನು ಅವರು ಕಟ್ಟಬೇಕಿಲ್ಲ. ಬಿಲ್ ಕಟ್ಟಲಿಲ್ಲ ಎಂದು ವಿದ್ಯುತ್ ಕಂಪನಿಯ ನೌಕರ ಬಂದು ವಿದ್ಯುತ್ ಸಂಪರ್ಕ ಕಡಿತ ಮಾಡುವುದಿಲ್ಲ. ಏಕೆಂದರೆ ಸರ್ಕಾರ ಈ ಹಣವನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಭರ್ತಿ ಮಾಡಿಕೊಡುತ್ತದೆ. ಆದರೆ, ವಿದ್ಯುತ್ (ತಿದ್ದುಪಡಿ) ಮಸೂದೆ–2022 ಖಾಯ್ದೆಯಾದರೆ ಪಂಪ್‌ಸೆಟ್‌ಗಳಿಗೂ ಮೀಟರ್ ಅಳವಡಿಸಬೇಕು. ವಿದ್ಯುತ್ ಬಳಕೆ ಮಾಡುವ ಪ್ರತಿಯೊಬ್ಬರಿಗೂ ಮೀಟರ್ ಅಳವಡಿಸಲು ವಿದ್ಯುತ್ ವಿತರಣಾ ಕಂಪನಿಗಳಿಗೆ ಈ ತಿದ್ದುಪಡಿ ಖಾಯ್ದೆ ಅಧಿಕಾರ ಕೊಡುತ್ತದೆ. ರೈತರೂ ಸಹಾ ಪ್ರಿಪೇಯ್ಡ್ ಮೀಟರ್‌ಗಳನ್ನೇ ಅಳವಡಿಸಿಕೊಳ್ಳಬೇಕು. ರೈತರಿಗೆ ವಿದ್ಯುತ್ ಸಂಪರ್ಕ ಬೇಕು ಎನಿಸಿದರೆ ಮೊದಲೇ 10,000 ರೂ ಹಣ ಕೊಟ್ಟು ರೀಚಾರ್ಜ್ ಮಾಡಿಸಬೇಕು. ತುಂಬಿರುವ ಹಣ ಖಾಲಿಯಾಗುತ್ತಿದ್ದಂತೆ ವಿದ್ಯುತ್ ಸಂಪರ್ಕ ಕಡಿತವಾಗುತ್ತದೆ. ಇಂದು ಬಹಳಷ್ಟು ಬಡ ರೈತರು ಬಿತ್ತನೆ ಮಾಡುವುದರಿಂದ ಹಿಡಿದು, ಬೆಳೆ ಕಟಾವು ಮಾಡುವವರೆಗೂ ಸಾಲ ಮಾಡಿಯೇ ವ್ಯವಸಾಯ ಮಾಡುವ ಸ್ಥಿತಿಯಲ್ಲಿದ್ದಾರೆ. ಇನ್ನು ವಿದ್ಯುತ್ ಮೀಟರ್ ರೀಚಾರ್ಜ್ ಮಾಡಿಸಲೂ ಹತ್ತಾರು ಸಾವಿರ ಸಾಲ ಮಾಡಬೇಕಾಗುತ್ತದೆ.

ನೇರ ನಗದು ಯೋಜನೆ ಎಂಬ ವಂಚನೆ:

ರೈತರು ಮತ್ತು ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ ಯೋಜನೆಯ ಫಲಾನುಭವಿಗಳು ಮೊದಲೇ ಹಣ ಕೊಟ್ಟು ವಿದ್ಯುತ್ ಮೀಟರ್‌ಗೆ ರೀಚಾರ್ಜ್ ಮಾಡಿಸಿಕೊಳ್ಳಬೇಕು. ಆ ಹಣವನ್ನು ನೇರನಗದು ಯೋಜನೆ ಮೂಲಕ ಫಲಾನುಭವಿಗಳ ಖಾತೆಗೆ ಹಾಕಲಾಗುವುದು ಎಂಬ ಅಂಶವನ್ನು ಈ ಮಸೂದೆಯಲ್ಲಿ ಸೇರಿಸಲಾಗಿದೆ. ವಿದ್ಯುತ್ (ತಿದ್ದುಪಡಿ) ಮಸೂದೆಗೆ ಬಡ ಜನತೆಯ, ರೈತರ ವಿರೋಧ ಬಾರದಿರುವಂತೆ ನೋಡಿಕೊಳ್ಳಲು ಸರ್ಕಾರ ಪ್ರಾರಂಭದಲ್ಲಿ ಇಂತಹ ಹಲವು ‘ಅಮಿಷ’ಗಳನ್ನು ಒಳಗೊಂಡ ಯೋಜನೆಗಳನ್ನು ಘೋಷಣೆ ಮಾಡಬಹುದು. ಅವುಗಳಲ್ಲಿ ‘ನೇರ ನಗದು ಯೋಜನೆ’ ಒಂದು ತಂತ್ರವಷ್ಟೆ. ‘ರೈತರು ಮತ್ತು ಬಡವರ ಹೆಸರಿನಲ್ಲಿ ಉಳ್ಳವರು ಉಚಿತ ವಿದ್ಯುತ್ ಪಡೆಯುತ್ತಿದ್ದಾರೆ. ಜನರ ತೆರಿಗೆಯ ಹಣ ಹೀಗೆ ವ್ಯರ್ಥವಾಗುತ್ತಿದೆ. ಇದನ್ನು ತಪ್ಪಿಸಬೇಕಾಗಿದೆ. ಎಲ್ಲರೂ ಮೀಟರ್ ಅಳವಡಿಕೊಳ್ಳಿ. ಮೊದಲೇ ವಿದ್ಯುತ್ ಬಿಲ್ ಕಟ್ಟಿ. ನಿಮ್ಮ ಹಣವನ್ನು ನೇರ ನಗದು ಯೋಜನೆ ಮೂಲಕ ನಿಮ್ಮ ಖಾತೆಗೆ ತುಂಬಿಕೊಡುತ್ತೇವೆ, ನಮ್ಮ ಸರ್ಕಾರ ರೈತರು ಮತ್ತು ಕಡು ಬಡವರ ಪರವಾಗಿದೆ’ ಎಂದು ನಮ್ಮನ್ನು ನಂಬಿಸಲು ಸರ್ಕಾರ ಮುಂದಾಗುತ್ತದೆ. ಇದೇ ರೀತಿಯ ತಂತ್ರ ಅನುಸರಿಸುವ ಮೂಲಕ ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಸಂಪೂರ್ಣವಾಗಿ ಹಿಂಪಡೆದದ್ದನ್ನು ಮರೆಯಲಾದೀದೆ? ಇದನ್ನೇ ಉಚಿತ ವಿದ್ಯುತ್ ಬಳಕೆದಾರರಿಗೂ ಅನ್ವಹಿಸಲು ಕೇಂದ್ರ ಸರ್ಕಾರ ಹೊರಟಿದೆ. ವಿವಿಧ ಬಗೆಯಲ್ಲಿ ವಿದ್ಯುತ್‌ಗೆ ನೀಡುತ್ತಿರುವ ಸಬ್ಸಿಡಿ ಹಿಂಪಡೆಯುವುದು ಕೇಂದ್ರ ಸರ್ಕಾರದ ಉದ್ದೇಶವಾಗಿದೆ. ಇದರಲ್ಲಿ ಇಂತಹ ಅಪಾಯಗಳೂ ಅಡಗಿವೆ ಎಂಬುದನ್ನು ವಿದ್ಯುತ್ ಗ್ರಾಹಕರು ಅರ್ಥಮಾಡಿಕೊಳ್ಳಬೇಕು.

ಕೆನಡಾದಂತಹ ಅಮೆರಿಕದ ನಿಕಟ ಮಿತ್ರರಾಷ್ಟ್ರಗಳು ಸಹ ಅಮೆರಿಕಕ್ಕೆ ಎದುರಾಗಿ ನಿಂತಿರುವಾಗ, ತನ್ನದೇ ಆದ ಪ್ರತಿ–ಸುಂಕಗಳೊಂದಿಗೆ ಪ್ರತೀಕಾರ ಮಾಡುತ್ತಿರುವಾಗ, ಮೆಕ್ಸಿಕೊ, ಯುರೋಪಿಯನ್ ಒಕ್ಕೂಟ ಮತ್ತು ಚೀನಾ ಎಲ್ಲವೂ ಅಮೆರಿಕದ ಬೆದರಿಕೆಗಳನ್ನು ಎದ್ದು ನಿಂತು ಪ್ರತಿ–ಸುಂಕಗಳಿಂದ ಉಂಟಾಗುವ ಸವಾಲುಗಳನ್ನು ಎದುರಿಸಲು ತಮ್ಮ ಅರ್ಥವ್ಯವಸ್ಥೆಗಳನ್ನು ಸಿದ್ಧಗೊಳಿಸುತ್ತಿರುವಾಗ, ಬಿಜೆಪಿ ಸರ್ಕಾರ ಯುಎಸ್‌ಗೆ ಸವಾಲು ಹಾಕುವುದಂತೂ ದೂರ, ಅದನ್ನು ಪ್ರಶ್ನಿಸಲು ಸಹ ಸಿದ್ಧವಾಗಿಲ್ಲ. ಅಮೆರಿಕವು ಮಹಾ ತಂಟೆಕೋರನಂತೆ ವರ್ತಿಸುವುದನ್ನು ಮುಂದುವರಿಸಿದ್ದರೂ, ಬಿಜೆಪಿ ಸರ್ಕಾರವು ದೈನ್ಯತೆ ಪ್ರದರ್ಶಿಸುತ್ತ ಶರಣಾಗುತ್ತಿದೆ. ನಮ್ಮ ಕೃಷಿ ವಲಯವನ್ನು ಅಮೆರಿಕದ ಶೋಷಣೆಗೆ ಮುಕ್ತಗೊಳಿಸುವ ಅಮೆರಿಕದ ಆಗ್ರಹಗಳಿಗೆ ಭಾರತ ಸರ್ಕಾರ ಸಮ್ಮತಿಸುತ್ತಿದೆ ಎಂದು ವರದಿಗಳು ಸೂಚಿಸುತ್ತಿವೆ.

ಮೋದಿ ಸರಕಾರ ಕೈಕಟ್ಟಿಕೊಂಡು ಶರಣಾಗಬಾರದು

ಪ್ರಕಾಶ್ ಕಾರತ್

ಅಮೆರಿಕದ ಪ್ರತಿ–ಸುಂಕಗಳ ತೂಗುಕತ್ತಿ ತಲೆಯ ಮೇಲೆ ನೇತಾಡುತ್ತಿದೆ. ಮೋದಿ ಸರ್ಕಾರ ಅದನ್ನು ಪ್ರತಿರೋಧಿಸುವ ಬದಲು ಶರಣಾಗುತ್ತಿದೆ. ಏಪ್ರಿಲ್ 2 ರಿಂದ ಭಾರತವು ಅಮೆರಿಕದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರೂ ಸಹ, ಪ್ರತಿ–ಸುಂಕಗಳಿಗೆ ಒಳಪಡುವ ದೇಶಗಳ ಪಟ್ಟಿಯಲ್ಲಿರುತ್ತದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟವಾಗಿ ಹೇಳಿದ್ದಾರೆ. ಮೋದಿ ಸರ್ಕಾರ ಈ ಸವಾಲನ್ನು ಎದುರಿಸುವ ಬದಲು, ಅಮೆರಿಕದ ಸುಮಾರು ಶೇ. 55ರಷ್ಟು ಸರಕುಗಳ ಮೇಲಿನ ಸುಂಕಗಳನ್ನು ಕಡಿತ ಮಾಡಲು ಮತ್ತು ಈ ಪ್ರಕ್ರಿಯೆಯಲ್ಲಿ ಭಾರತೀಯ ಹಿತಾಸಕ್ತಿಗಳನ್ನು ತ್ಯಾಗ ಮಾಡಲು ಸಿದ್ಧವಾಗಿದೆ.

ಸರ್ಕಾರ ಟ್ರಂಪ್‌ರನ್ನು ವಿರೋಧಿಸಲು ಎಷ್ಟೊಂದು ಹೆದರುತ್ತಿದೆ ಎಂದರೆ, ಒಕ್ಕೂಟ ಬಜೆಟ್‌ನಲ್ಲಿಯೇ, ಬೌರ್ಬನ್ ವಿಸ್ಕಿ, ಈಥರ್ನೆಟ್ ಸ್ವಿಚ್‌ಗಳು ಮತ್ತು ಹಾರ್ಲೆ–ಡೇವಿಡ್ಸನ್ ಮೋಟಾರ್ ಸೈಕಲ್‌ಗಳಂತಹ ಕೆಲವು ಯುಎಸ್ ಉತ್ಪನ್ನಗಳ ಮೇಲಿನ ಸುಂಕಗಳನ್ನು ಕಡಿತಗೊಳಿಸುವುದಾಗಿ ಘೋಷಿಸಿತು. ಮಾರ್ಚ್ 25ರಂದು ಹಣಕಾಸು ಮಂತ್ರಿಗಳು ಸಂಸತ್ತಿನಲ್ಲಿ ಹಣಕಾಸು ಮಸೂದೆಗೆ ಶೇ. 6ರಷ್ಟು ಡಿಜಿಟಲ್ ತೆರಿಗೆಯನ್ನು ರದ್ದು ಮಾಡಲು ಅನುಮತಿ ಕೇಳುವ ತಿದ್ದುಪಡಿಯನ್ನು ಮಂಡಿಸಿದರು. ಇದು ಪ್ರಥಮತಃ ಗೂಗಲ್‌ನಂತಹ ಯುಎಸ್ ಸಾಫ್ಟ್‌ವೇರ್ ಕಂಪನಿಗಳಿಗೆ ಪ್ರಯೋಜನವನ್ನು ನೀಡುವಂತದ್ದು. ವಿವಿಧ ಸರಕುಗಳ ಮೇಲಿನ ಸುಂಕ ಕಡಿತಗಳನ್ನು ಸಹ "ತರ್ಕಬದ್ಧಗೊಳಿಸಿರುವುದು" ಎಂದು ಮಂತ್ರಿಗಳು ಸಮರ್ಥಿಸಿಕೊಂಡರು. ಆದರೆ, ಸುಂಕಗಳಲ್ಲಿನ ಇಂತಹ ಕಡಿತಗಳು ದೇಶೀಯ ಉತ್ಪಾದಕರ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಕುರಿತು ಮೌನವಾಗಿರುವುದೇ ಕ್ಷೇಮವೆಂದು ಅವರು ಬಗೆದಂತಿದೆ.

ಭಾರತಕ್ಕೆ ಅಮೆರಿಕದ ಕೆಲವು ಪ್ರಮುಖ ರಫ್ತುಗಳಿಗೆ ಬಹಳ ಕಡಿಮೆ ಸುಂಕ ವಿಧಿಸಲಾಗುತ್ತದೆ ಎಂಬುದನ್ನು ಗಮನಿಸುವುದು ಮುಖ್ಯವಾಗುತ್ತದೆ. ಉದಾಹರಣೆಗೆ, ಅಮೆರಿಕದ ಕಚ್ಚಾ ಪೆಟ್ರೋಲಿಯಂಗೆ ಪ್ರತಿ ಟನ್‌ಗೆ ಕೇವಲ ಒಂದು ರೂಪಾಯಿ ಮಾತ್ರ ವಿಧಿಸಲಾಗುತ್ತಿತ್ತು. ಈ ಆಮದಿನ ಮೌಲ್ಯ ಬಹಳ ಹೆಚ್ಚಿದ್ದೂ, ಇದು ಅತ್ಯಂತ ಕಡಿಮೆ ತೆರಿಗೆ ವಿಧಿಸಲಾದ ಆಮದುಗಳಲ್ಲಿ ಒಂದಾಗಿದೆ. ಅದೇ ರೀತಿ, ಕಲ್ಲಿದ್ದಲು, ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಮತ್ತು ವಿಮಾನಗಳಂತಹ ಅಮೆರಿಕದ ಇತರ ಪ್ರಮುಖ ರಫ್ತುಗಳಿಗೆ ಕೇವಲ ಶೇ. 2.5 ರಷ್ಟು ತೆರಿಗೆ ವಿಧಿಸಲಾಗುತ್ತದೆ. ಆದ್ದರಿಂದ ಅಮೆರಿಕ ಬಯಸುವುದು ಕೃಷಿ ಉತ್ಪನ್ನಗಳು, ಡೈರಿ ಉತ್ಪನ್ನಗಳು ಮತ್ತು ಕೆಲವು ಪ್ರಮುಖ ಉತ್ಪಾದಿತ ಸರಕುಗಳ ಮೇಲಿನ ಸುಂಕವನ್ನು ಕಡಿಮೆ ಮಾಡಬೇಕು ಮತ್ತು ಈ ವಲಯಗಳನ್ನು ಅಮೆರಿಕದ ಬಂಡವಾಳದ ಶೋಷಣೆಗೆ ಮುಕ್ತಗೊಳಿಸಬೇಕು ಎಂದೇ.

ಯುಎಸ್ ವ್ಯಾಪಾರ ನಿಯೋಗದ ಪ್ರಸ್ತುತ ನಾಲ್ಕು ದಿನಗಳ ಭಾರತ ಭೇಟಿಯ ಪ್ರಧಾನ ಉದ್ದೇಶವೆಂದರೆ ಎರಡೂ ದೇಶಗಳ ನಡುವೆ 'ಸಮತೋಲಿತ' ವ್ಯಾಪಾರ ಇರಬೇಕು ಎಂದು ಖಚಿತಪಡಿಸುವುದು. ಅಮೆರಿಕಾದ ಪ್ರಕಾರ ಸಮತೋಲಿತ ವ್ಯಾಪಾರ ಎಂದರೆ ಭಾರತೀಯ ಮಾರುಕಟ್ಟೆಗಳಿಗೆ ಅನಿಯಂತ್ರಿತ ಪ್ರವೇಶವನ್ನು ನೀಡಲು ಅಮೆರಿಕದ ಸರಕುಗಳ ಮೇಲಿನ ಸುಂಕಗಳನ್ನು ಕಡಿಮೆ ಮಾಡುವುದು ಎಂದು ಟ್ರಂಪ್ ಸ್ಪಷ್ಟಪಡಿಸಿದ್ದಾರೆ.

ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ದೈನ್ಯ ಮನೋಭಾವವು ಅಮೆರಿಕಾಕ್ಕೆ ಭಾರತದಿಂದ ಹೆಚ್ಚು ಹೆಚ್ಚು ರಿಯಾಯಿತಿಗಳನ್ನು ಆಗ್ರಹಿಸುವ ಧೈರ್ಯ ತೋರುವಂತೆ ಮಾಡಿದೆ. "ನಾನು ಪ್ರಧಾನಿ ಮೋದಿಗೆ ಹೇಳಿದೆ, ನಿಮ್ಮಲ್ಲಿ 1.4 ಬಿಲಿಯನ್ ಜನರಿದ್ದಾರೆ ಮತ್ತು ನಿಮ್ಮ ಅರ್ಥವ್ಯವಸ್ಥೆ ಎಷ್ಟು ಅದ್ಭುತವಾಗಿದೆ ಎಂದು ನಮ್ಮ ಮುಂದೆ ಬಡಾಯಿ ಕೊಚ್ಚಿಕೊಳ್ಳುತ್ತೀರಿ... ನೀವು ನಮ್ಮ ಒಂದಷ್ಟು ಧಾನ್ಯವನ್ನು ಏಕೆ ಖರೀದಿಸುವುದಿಲ್ಲ? ಹಾಗಾದರೆ (ಯುಎಸ್) ರೈತರು (ಭಾರತಕ್ಕೆ) ಹೋಗದೆ, ಬದಲಿಗೆ (ಭಾರತದ ರೈತರು) ನಮ್ಮತ್ತ ಬರಬಹುದು... ಇದೇಕೆ ಸರಿ?" ಎಂದು ಇತ್ತೀಚೆಗೆ ಯುಎಸ್‌ನ ವಾಣಿಜ್ಯ ಕಾರ್ಯದರ್ಶಿ ಹೇಳಿದ್ದಾರೆ. ಇಂತಹ ಒರಟು ಪದ ಬಳಕೆಯ ನಂತರವೂ ನಮ್ಮ ವಿದೇಶಾಂಗ ನೀತಿ ಕಟ್ಟುಮಸ್ತಾಗಿದೆ ಎಂಬ ಪ್ರಧಾನಿ ಮೋದಿಯ ಮಾತುಗಳು ಸಂಪೂರ್ಣವಾಗಿ ಸತ್ವವೇ ಇಲ್ಲದ ಶಬ್ದಾಡಂಬರವಾಗಿ ಕಾಣುತ್ತದೆ.

ಭಾರತೀಯ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳ ಸಂಶೋಧನಾ ಮಂಡಳಿ (ಐಸಿಆರ್‌ಐಇಆರ್)ಯ ವರದಿಯ ಪ್ರಕಾರ, ಅಮೆರಿಕ ಮತ್ತು ಭಾರತದ ನಡುವಿನ ಸುಂಕದ ಅಂತರವು ವಿಶೇಷವಾಗಿ ಕೃಷಿ ವಲಯದಲ್ಲಿ ಬಹಳ ಹೆಚ್ಚಿದೆ. ಏಕೆಂದರೆ ಅಭಿವೃದ್ಧಿ ಹೊಂದಿದ ದೇಶಗಳಾದ ಯುಎಸ್, ಆಸ್ಟ್ರೇಲಿಯಾ ಮತ್ತು ಯುರೋಪಿಯನ್ ಒಕ್ಕೂಟದಂತಹ ಭಾರೀ ಪ್ರಮಾಣದ ಸಬ್ಸಿಡಿ ಪಡೆಯುತ್ತಿರುವ ಕೃಷಿಯಿಂದ ಭಾರತೀಯ ಕೃಷಿಯನ್ನು ರಕ್ಷಿಸಲಿಕ್ಕಾಗಿ ಇದು ಅಸ್ತಿತ್ವಕ್ಕೆ ಬಂದಿದೆ. ಭಾರತ ಸರಕಾರ ಸುಂಕಗಳನ್ನು ಕಡಿಮೆ ಮಾಡುವ ಮೂಲಕ ಮತ್ತು ವಿದೇಶಿ ಕೃಷಿ–ಕಾರ್ಪೊರೇಟ್‌ಗಳ ಪ್ರವೇಶಕ್ಕೆ ಅವಕಾಶ ನೀಡುವ ಮೂಲಕ ತನ್ನ ಕೃಷಿ ವಲಯವನ್ನು ತೆರೆದು ಕೊಡಬೇಕು ಎಂದು ಯುಎಸ್ ಬಯಸುತ್ತದೆ. ನಮ್ಮ ಕೃಷಿ ವಲಯವನ್ನು ಅಮೆರಿಕದ ಶೋಷಣೆಗೆ ಮುಕ್ತಗೊಳಿಸುವ ಅಮೆರಿಕದ ಆಗ್ರಹಗಳಿಗೆ ಸರ್ಕಾರ ಸಮ್ಮತಿಸುತ್ತಿದೆ ಎಂದು ವರದಿಗಳು ಸೂಚಿಸುತ್ತವೆ.

ನಮ್ಮ ಮಾರುಕಟ್ಟೆಯನ್ನು ಅಮೆರಿಕದ ಜೋಳ, ಸೋಯಾಬೀನ್, ಹತ್ತಿ, ಅಕ್ಕಿ, ದ್ವಿದಳ ಧಾನ್ಯಗಳು ಮತ್ತು ಹೈನು ಉತ್ಪನ್ನಗಳಿಗೆ ಕೂಡ ತೆರೆಯಲು ಭಾರತ ಸರ್ಕಾರ ಸಿದ್ಧವಾಗಿದೆ. ಇದು ಭಾರತದ ಕೃಷಿಯ ಕತ್ತು ಹಿಸುಕುತ್ತದೆ, ಏಕೆಂದರೆ ನಮ್ಮ ರೈತರು ಭಾರೀ ಸಬ್ಸಿಡಿ ಹೊಂದಿರುವ ಅಮೆರಿಕದ ಆಮದುಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ. ಅಮೆರಿಕದ ಸರಕುಗಳ ಮೇಲಿನ ಸುಂಕಗಳ ಕಡಿತ ಭಾರತದ ಔಷಧ ಮತ್ತು ವಾಹನ ಉದ್ದಿಮೆಗಳ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ.

ಸುಂಕಗಳನ್ನು ಕಡಿಮೆ ಮಾಡಬಹುದಾದ ಉತ್ಪನ್ನಗಳನ್ನು ಗುರುತಿಸಲು ಸರ್ಕಾರವು ಭಾರತೀಯ ಉದ್ಯಮ ಸಮೂಹಗಳೊಂದಿಗೆ ಹಲವು ಸುತ್ತಿನ ಚರ್ಚೆಗಳನ್ನು ನಡೆಸಿದೆ. ಅಮೆರಿಕದ ನಿಯೋಗದ ಭೇಟಿಯ ಸಮಯದಲ್ಲಿ ಹೆಚ್ಚಿನ ವ್ಯಾಪಾರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರವು ಉದ್ದೇಶಿಸಿದೆ ಎಂದು ಸ್ಪಷ್ಟಪಡಿಸಲಾಯಿತು. ದುಬಾರಿಯಾಗಿದ್ದರೂ ಸಹ ಆಮದು ಮಾಡಿಕೊಳ್ಳಬಹುದಾದ ಯುಎಸ್ ಸರಕುಗಳನ್ನು ಸೂಚಿಸಲು ಉದ್ಯಮ ಪ್ರತಿನಿಧಿಗಳನ್ನು ಕೇಳಲಾಯಿತು. ಅಲ್ಲಿನ ದುಬಾರಿ ಸರಕುಗಳ ಆಮದನ್ನು ಹೆಚ್ಚಿಸುವ ಮೂಲಕ, ಯುಎಸ್ ಜೊತೆಗಿನ ಪ್ರಸ್ತುತ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡಬಹುದು ಎಂದು ಸರ್ಕಾರ ಭಾವಿಸುತ್ತಿದೆ. ಈ ವಿಧಾನವು ಅಮೆರಿಕಾವನ್ನು ತುಷ್ಟೀಕರಿಸಬಹುದಾದರೂ, ಭಾರತೀಯ ಗ್ರಾಹಕರಿಗೆ ಇದು ಮಾರುಕಟ್ಟೆಯಲ್ಲಿ ಲಭ್ಯವಿರುವ ಅಗ್ಗದ ಮತ್ತು ಉತ್ತಮ ಪರ್ಯಾಯಗಳು ಲಭ್ಯವಾಗದಂತೆ ಮಾಡುತ್ತದೆ.

ಯಾವುದೇ ಅಗ್ಗದ ಪರ್ಯಾಯ ಉಳಿದಿರಬಾರದು ಮತ್ತು ಎಲ್ಲಾ ದೇಶಗಳು ಯುಎಸ್ ರಫ್ತುಗಳನ್ನೇ ಅವಲಂಬಿಸುವಂತಾಗಬೇಕು ಎಂದು ಖಚಿತಪಡಿಸಿಕೊಳ್ಳಲು, ಜಗಳಗಂಟ ಡೊನಾಲ್ಡ್ ಟ್ರಂಪ್, ವೆನೆಜುವೆಲಾದಿಂದ ತೈಲವನ್ನು ಆಮದು ಮಾಡಿಕೊಳ್ಳುವ ದೇಶಗಳಿಗೆ ಹೆಚ್ಚುವರಿಯಾಗಿ ಶೇ. 25 ಸುಂಕವನ್ನು ವಿಧಿಸಲಾಗುವುದು ಎಂದು ಮಾರ್ಚ್ 24ರಂದು ಘೋಷಿಸಿದರು. ಟ್ರಂಪ್‌ರ ಮೊದಲ ಅವಧಿಯಲ್ಲಿ, ಹಿಂದಿನ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಯುಎಸ್ ಒತ್ತಡಕ್ಕೆ ಮಣಿದು ವೆನೆಜುವೆಲಾದಿಂದ ತೈಲ ಆಮದುಗಳನ್ನು ನಿಲ್ಲಿಸಿತು. ನಂತರ ಅದರ ಕಡಿಮೆ ವೆಚ್ಚದಿಂದಾಗಿ ಡಿಸೆಂಬರ್ 2023ರಿಂದ ವೆನೆಜುವೆಲಾದ ತೈಲ ಖರೀದಿಯನ್ನು ಅದು ಪುನರಾರಂಭಿಸಿತು. ಈಗ, ಟ್ರಂಪ್ ಅವರ ನವೀಕರಿಸಿದ ಬೆದರಿಕೆಗಳಿಗೆ ಹೆದರಿ, ಯುಎಸ್‌ನಿಂದ ಹೆಚ್ಚಿನ ಪೆಟ್ರೋಲಿಯಂ ಕಚ್ಚಾ ತೈಲವನ್ನು ಖರೀದಿಸಲು ಸರ್ಕಾರ ಈಗಾಗಲೇ ಒಪ್ಪಿಕೊಂಡಿದೆ. ಅಮೆರಿಕವು ಮಹಾ ತಂಟೆಕೋರನಂತೆ ವರ್ತಿಸುವುದನ್ನು ಮುಂದುವರಿಸಿದ್ದರೂ, ಬಿಜೆಪಿ ಸರ್ಕಾರವು ದೈನ್ಯತೆ ಪ್ರದರ್ಶಿಸುತ್ತ ಶರಣಾಗುತ್ತಿದೆ.

ಬಿಜೆಪಿ ಸರ್ಕಾರದ ವಿಧೇಯ ಮನೋಭಾವಕ್ಕೆ ವ್ಯತಿರಿಕ್ತವಾಗಿ, ಕೆನಡಾದಂತಹ ಅಮೆರಿಕದ ನಿಕಟ ಮಿತ್ರರಾಷ್ಟ್ರಗಳು ಸಹ ಅಮೆರಿಕಕ್ಕೆ ಎದುರಾಗಿ ನಿಂತಿರುವುದನ್ನು ನಾವು ಕಾಣುತ್ತೇವೆ. ಅಮೆರಿಕ ಉಕ್ಕು ಮತ್ತು ಅಲ್ಯೂಮಿನಿಯಂ ಮೇಲಿನ ಸುಂಕವನ್ನು ಹೆಚ್ಚಿಸಿದಾಗ, ಕೆನಡಾ ಅಮೆರಿಕದ ಉತ್ಪನ್ನಗಳ ಮೇಲೆ ತನ್ನದೇ ಆದ ಸುಂಕಗಳೊಂದಿಗೆ ಪ್ರತೀಕಾರ ಮಾಡಿತು. ಮೆಕ್ಸಿಕೊ, ಯುರೋಪಿಯನ್ ಒಕ್ಕೂಟ ಮತ್ತು ಚೀನಾ ಎಲ್ಲವೂ ಅಮೆರಿಕದ ಬೆದರಿಕೆಗಳನ್ನು ಎದ್ದು ನಿಂತು ಎದುರಿಸುತ್ತಿವೆ ಮತ್ತು ಪ್ರತಿ–ಸುಂಕಗಳಿಂದ ಉಂಟಾಗುವ ಸವಾಲುಗಳನ್ನು ಎದುರಿಸಲು ತಮ್ಮ ಅರ್ಥವ್ಯವಸ್ಥೆಗಳನ್ನು ಸಿದ್ಧಗೊಳಿಸುತ್ತಿವೆ. ಮತ್ತೊಂದೆಡೆ, ಬಿಜೆಪಿ ಸರ್ಕಾರ ಯುಎಸ್‌ಗೆ ಸವಾಲು ಹಾಕುವುದಂತೂ ದೂರ, ಅದನ್ನು ಪ್ರಶ್ನಿಸಲು ಸಹ ಸಿದ್ಧವಾಗಿಲ್ಲ.

ಭಾರತೀಯ ಅರ್ಥವ್ಯವಸ್ಥೆ ಮತ್ತು ನಮ್ಮ ರೈತರು, ಕಾರ್ಮಿಕರು ಮತ್ತು ಮಧ್ಯಮ ವರ್ಗದವರ ಜೀವನೋಪಾಯಗಳ ಮೇಲೆ ಅಮೆರಿಕವು ಒರಟು ಸವಾರಿ ನಡೆಸಲು ನಾವು ಅವಕಾಶ ನೀಡಬಾರದು. ಸರ್ಕಾರವು ಅಮೆರಿಕಕ್ಕೆ ಶರಣಾಗುವುದನ್ನು ತಡೆಯಲು ಸಾರ್ವಜನಿಕ ಅಭಿಪ್ರಾಯವನ್ನು ಅಣಿನೆರೆಸಬೇಕು. ಭಾರತೀಯ ಜನರ ಹಿತಾಸಕ್ತಿಗಳೇ ಪರಮೋಚ್ಚ, ಮತ್ತು ಅವನ್ನು ಯಾವುದೇ ಬೆಲೆ ತೆತ್ತಾದರೂ ರಕ್ಷಿಸಿಕೊಳ್ಳಬೇಕು.

ಅನುವಾದ: ವೇದರಾಜ್ ಎನ್.ಕೆ.

ಭಾರತೀಯ ಅರ್ಥವ್ಯವಸ್ಥೆ ಮತ್ತು ನಮ್ಮ ರೈತರು, ಕಾರ್ಮಿಕರು ಮತ್ತು ಮಧ್ಯಮ ವರ್ಗದವರ ಜೀವನೋಪಾಯಗಳ ಮೇಲೆ ಅಮೆರಿಕವು ಸವಾರಿ ನಡೆಸಲು ನಾವು ಅವಕಾಶ ನೀಡಬಾರದು. ಸರ್ಕಾರವು ಅಮೆರಿಕಕ್ಕೆ ಶರಣಾಗುವುದನ್ನು ತಡೆಯಲು ಸಾರ್ವಜನಿಕ ಅಭಿಪ್ರಾಯವನ್ನು ಅಣಿನೆರೆಸಬೇಕು. ಭಾರತೀಯ ಜನತೆಯ ಹಿತಾಸಕ್ತಿಗಳೇ ಪರಮೋಚ್ಚ, ಮತ್ತು ಅವನ್ನು ಯಾವುದೇ ಬೆಲೆ ತೆತ್ತಾದರೂ ರಕ್ಷಿಸಿಕೊಳ್ಳಬೇಕು.



ನವದೆಹಲಿಯಲ್ಲಿ ಬಿಸಿ ಗಾಳಿ ಅಲೆ ಎಂದು ಅಮೆರಿಕದಲ್ಲಿ ಟ್ರಂಪ್ ಘೋಷಣೆ!

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

24ನೇ ಮಹಾಧಿವೇಶನ–ಮುಂದಿನ ಹಾದಿಯತ್ತ

ಪ್ರಕಾಶ್ ಕಾರಟ್

ಸಿಪಿಐ(ಎಂ)ನ 24ನೇ ಮಹಾಧಿವೇಶನವು 2025ರ ಏಪ್ರಿಲ್ 2 ರಿಂದ 6 ರವರೆಗೆ ಮಧುರೈನಲ್ಲಿ ನಡೆಯಲಿದೆ. ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡ ನಂತರ ಅಂತರರಾಷ್ಟ್ರೀಯ ಸನ್ನಿವೇಶದಲ್ಲಿ ಆಗುತ್ತಿರುವ ತ್ವರಿತ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಹಾಧಿವೇಶನ ನಡೆಯುತ್ತಿದೆ. ಭಾರತದ ರಾಜಕೀಯ ಪರಿಸ್ಥಿತಿಯು ಬಿಜೆಪಿ ಆಡಳಿತ ಅಡಿಯಲ್ಲಿ ಹಿಂದುತ್ವ–ಕಾರ್ಪೊರೇಟ್ ಸರ್ವಾಧಿಕಾರವನ್ನು ಬಲಪಡಿಸುವ ನಿಟ್ಟಿನಲ್ಲಿ ಸಾಗುತ್ತಿದೆ. ಮೋದಿ ಸರ್ಕಾರದ ಹಾಗೂ ಹಿಂದುತ್ವ–ಕಾರ್ಪೊರೇಟ್ ನೀತಿಗಳ ವಿರುದ್ಧ ಕಾರ್ಮಿಕ ವರ್ಗ, ರೈತರು ಹಾಗೂ ದುಡಿಯುವ ಜನರ ಐಕ್ಯ ಹೋರಾಟ ಬಲಗೊಳ್ಳುತ್ತಿದೆ.

ಎರಡು ತಿಂಗಳುಗಳ ಕಡಿಮೆ ಅಂತರದಲ್ಲಿ, ಕಳೆದ ಮೂರು ದಶಕಗಳ ಕಾಲ ಅಸ್ತಿತ್ವದಲ್ಲಿದ್ದ ಅಮೆರಿಕ ಪ್ರಾಬಲ್ಯದ “ಅಂತರರಾಷ್ಟ್ರೀಯ ವ್ಯವಸ್ಥೆ”ಯನ್ನು ಟ್ರಂಪ್ ಆಡಳಿತವು ಆಮೂಲಾಗ್ರ ಬದಲಾವಣೆ ಮಾಡಿದೆ. ‘ಅಮೆರಿಕಾ ಮೊದಲು’ ಮತ್ತು ‘ಅಮೆರಿಕಾವನ್ನು ಮತ್ತೆ ಅಸಾಧಾರಣ ಮಾಡುತ್ತೇವೆ’ ಎಂಬ ತಮ್ಮ ಘೋಷಣೆಗಳೊಂದಿಗೆ ಟ್ರಂಪ್ ಅವರು ಸಾಮ್ರಾಜ್ಯವಾದಿ ವಿಸ್ತರಣೆಯ ಅತ್ಯಂತ ನಗ್ನರೂಪವನ್ನು ಅನಾವರಣ ಮಾಡಿದ್ದಾರೆ. ಇದು ನ್ಯಾಟೋ ಹಾಗೂ ಯೂರೋಪಿನ ಮಿತ್ರದೇಶಗಳೊಂದಿಗೆ ಇರುವ ಅಮೆರಿಕಾದ ಸಂಬಂಧದ ಮೇಲೆ ಪ್ರಭಾವ ಬೀರಲಿದೆ; ಇದರಿಂದ ದಕ್ಷಿಣ ಆಫ್ರಿಕಾದಂತಹ ಜಾಗತಿಕ ದಕ್ಷಿಣದ ದೇಶಗಳ ವಿರುದ್ಧ ಪ್ರತಿಕೂಲ ಹಸ್ತಕ್ಷೇಪಗಳು ಹಾಗೂ ಪ್ಯಾಲೆಸ್ತೈನ್ ಜನರ ವಿರುದ್ಧ ಇಸ್ರೇಲಿನ ಅತ್ಯಂತ ಹೀನ ನರಮೇಧ ಕೃತ್ಯಗಳು ಹೆಚ್ಚಾಗುತ್ತವೆ.

ಇಲ್ಲಿಯವರೆಗೂ ಮಂದವಾಗಿದ್ದ ಸಾಮ್ರಾಜ್ಯವಾದಿಗಳ ನಡುವಿನ ತಿಕ್ಕಾಟವೂ ಒಳಗೊಂಡಂತೆ ಎಲ್ಲಾ ಪ್ರಮುಖ ಸಾಮಾಜಿಕ ವೈರುಧ್ಯಗಳು ಟ್ರಂಪ್ ಅವರ ಅಧ್ಯಕ್ಷೀಯ ಕಾಲದಲ್ಲಿ ಉಲ್ಬಣಗೊಳ್ಳಲಿವೆ. ಅಂತರರಾಷ್ಟ್ರೀಯ ಸನ್ನಿವೇಶದ ಈ ಬೆಳವಣಿಗೆಗಳೊಂದಿಗೆ ಪಕ್ಷದ ಮಹಾಧಿವೇಶನವು ತನ್ನ ವಿಶ್ಲೇಷಣೆಯನ್ನು ಪರಿಷ್ಕರಿಸಲಿದೆ.

ಆಮದು ಸುಂಕಗಳ ವಿಚಾರದಲ್ಲಿ ಭಾರತದ ವಿರುದ್ಧ ಅಮೆರಿಕಾ ಪ್ರತಿಕೂಲ ಧೋರಣೆ ಹೊಂದಿರುವಾಗಲೂ ಹಾಗೂ ವೀಸಾಗಳ ಬಗ್ಗೆ ಭಾರತೀಯರನ್ನು ಅಮೆರಿಕಾ ಅಮಾನುಷವಾಗಿ ನಡೆಸಿಕೊಂಡಿರುವಾಗಲೂ ನರೇಂದ್ರ ಮೋದಿ ಹಾಗೂ ಬಿಜೆಪಿ ಸರ್ಕಾರ ಟ್ರಂಪ್ ಸರ್ಕಾರಕ್ಕೆ ಧಾರಾಳವಾಗಿ ಬೆಂಬಲ ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಈ ಹೊಸ ಆಕ್ರಮಣಕಾರಿ ನಿಲುವು ಮತ್ತು ಭಾರತದ ನಡುವಿನ ಸಂಬಂಧವನ್ನು ನಾವು ನೋಡಬೇಕಿದೆ. ಜಾಗತಿಕವಾಗಿ ತಲೆದೋರುತ್ತಿರುವ ತೀವ್ರ–ಬಲಪಂಥೀಯ ರಾಜಕೀಯ ಬಣಗಳೊಂದಿಗೆ ಮೋದಿ ಸರ್ಕಾರ ಹಾಗೂ ಬಿಜೆಪಿ ದೃಢವಾಗಿ ನಿಂತುಕೊಂಡಿದೆ. ಹನ್ನೊಂದು ವರ್ಷಗಳ ಮೋದಿ ಸರ್ಕಾರದ ಆಡಳಿತವು ನವ–ಫ್ಯಾಸೀವಾದಿಯಂತಹ ವಿಶಿಷ್ಟ ಸ್ವಭಾವಗಳನ್ನು ಹೊಂದಿರುವ ಬಲಪಂಥೀಯ, ಕೋಮುವಾದಿ, ನಿರಂಕುಶಾಧಿಕಾರಿ ಶಕ್ತಿಗಳ ಕ್ರೋಢೀಕರಣಕ್ಕೆ ಕಾರಣವಾಗಿದೆ. ಮೋದಿ ಸರ್ಕಾರವು ಹಿಂದುತ್ವ ಶಕ್ತಿಗಳ ಹಾಗೂ ದೊಡ್ಡಬಂಡವಾಳಗಾರರ ಮೈತ್ರಿಕೂಟವನ್ನು ಪ್ರತಿನಿಧಿಸುತ್ತದೆ. ಈ ವಿಶ್ಲೇಷಣೆಯ ಆಧಾರದಲ್ಲಿ ರೂಪುಗೊಂಡಿರುವ ರಾಜಕೀಯಾತ್ಮಕ–ತಂತ್ರೋಪಾಯದ ಪ್ರಕಾರ ಬಿಜೆಪಿ–ಆರ್‌ಎಸ್‌ಎಸ್ ಹಾಗೂ ಅದಕ್ಕೆ ಅಡಿಪಾಯವಾಗಿರುವ ಹಿಂದುತ್ವ–ಕಾರ್ಪೊರೇಟ್ ಕೂಟದ ವಿರುದ್ಧ ಸೆಣೆಸುವುದು ಹಾಗೂ ಸೋಲಿಸುವುದು ನಮ್ಮ ಮುಖ್ಯ ಗುರಿಯಾಗಬೇಕು.

ರಾಜಕೀಯ ಗುರಿ

24ನೇ ಮಹಾಧಿವೇಶನಕ್ಕಾಗಿ ಸಿದ್ಧಪಡಿಸಿದ ಕರಡು ರಾಜಕೀಯ ನಿರ್ಣಯದ ಮೂಲಕ ರಾಜಕೀಯ ಗುರಿಯನ್ನು ಹೀಗೆ ವಿವರಿಸಲಾಗಿದೆ:

“2.86 ಬಿಜೆಪಿ ಹಾಗೂ ಹಿಂದುತ್ವ ಶಕ್ತಿಗಳನ್ನು ಪ್ರತ್ಯೇಕಿಸಲು ಮತ್ತು ಸೋಲಿಸಲು ಹಿಂದುತ್ವ ಸಿದ್ಧಾಂತ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸುವ ಅಗತ್ಯವಿದೆ. ಹಿಂದುತ್ವ ಕೋಮುವಾದದ ವಿರುದ್ಧ ಎಲ್ಲಾ ಜಾತ್ಯತೀತ ಶಕ್ತಿಗಳನ್ನು ವಿಶಾಲ ನೆಲೆಯಲ್ಲಿ ಅಣಿನೆರಸಲು ಪಕ್ಷವು ಶ್ರಮಿಸಬೇಕು.

“2.87 ಹಿಂದುತ್ವ ನವ–ಉದಾರವಾದಿ ಪ್ರಭುತ್ವದ ವಿರುದ್ಧ ಜಯಗಳಿಸಲು ಸಿಪಿಐ(ಎಂ)ನ ಹಾಗೂ ಎಡ ಶಕ್ತಿಗಳ ಸ್ವತಂತ್ರ ಬಲ ಹೆಚ್ಚಿಸುವ ಅಗತ್ಯವಿದೆ. ಅದಕ್ಕೆ ಹಿಂದುತ್ವ ಕೋಮುವಾದದ ವಿರುದ್ಧದ ಹೋರಾಟ ಹಾಗೂ ನವ–ಉದಾರವಾದಿ ನೀತಿಗಳ ವಿರುದ್ಧದ ಹೋರಾಟಗಳನ್ನು ಒಂದುಗೂಡಿಸುವ ಅವಶ್ಯಕತೆ ಕೂಡ ಇದೆ.

“2.88 ದುಡಿಯುವ ಜನರ ಶೋಷಣೆಯನ್ನು ತೀವ್ರಗೊಳಿಸುತ್ತಿರುವ ಮತ್ತು ಅವರ ಜೀವನೋಪಾಯಗಳು ಹಾಗೂ ಬದುಕಿನ ಪರಿಸ್ಥಿತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿರುವ ಮೋದಿ ಸರ್ಕಾರ ಹಾಗೂ ಬಿಜೆಪಿಯ ಕಾರ್ಪೊರೇಟ್ ಪರ ಹಾಗೂ ನವ–ಉದಾರವಾದಿ ನೀತಿಗಳ ವಿರುದ್ಧ ವರ್ಗ ಹಾಗೂ ಸಾಮೂಹಿಕ ಹೋರಾಟಗಳನ್ನು ನಡೆಸಬೇಕಾಗುತ್ತದೆ. ಸ್ವಜನ ಬಂಡವಾಳವಾದ (ಕ್ರೋನಿ ಕ್ಯಾಪಿಟಲಿಸಂ), ರಾಷ್ಟ್ರೀಯ ಆಸ್ತಿಗಳ ಲೂಟಿ ಹಾಗೂ ದೊಡ್ಡ ಪ್ರಮಾಣದ ಖಾಸಗೀಕರಣವನ್ನು ವಿರೋಧಿಸುವಲ್ಲಿ ಪಕ್ಷವು ಮುಂಚೂಣಿಯಲ್ಲಿರಬೇಕು.”

ಇದರ ಜೊತೆಯಲ್ಲಿ, ಪ್ರಜಾಪ್ರಭುತ್ವದ ವಿರುದ್ಧದ ನಿರಂಕುಶವಾದಿ ದಾಳಿಗಳು, ಕರಾಳ ಶಾಸನಗಳ ಬಳಕೆ ಮತ್ತು ಸಂವಿಧಾನ ಹಾಗೂ ಪ್ರಭುತ್ವದ ಸಂಸ್ಥೆಗಳನ್ನು ಬುಡಮೇಲು ಮಾಡುವ ಪ್ರಯತ್ನಗಳು ಮುಂತಾದ ಪ್ರಶ್ನೆಗಳ ಮೇಲೆ ಎಲ್ಲಾ ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಜತೆ ಸಿಪಿಐ(ಎಂ) ಸಹಕರಿಸಿ ಕೆಲಸ ಮಾಡಬೇಕು. ಇದನ್ನು ಗಮನದಲ್ಲಿ ಇರಿಸಿಕೊಂಡು, ಇಂಡಿಯಾ ಬ್ಲಾಕ್ ನಂತಹ ಜಾತ್ಯತೀತ ವಿಪಕ್ಷಗಳ ವಿಶಾಲ ನೆಲೆಯ ವೇದಿಕೆಯ ಮುಂದುವರಿಕೆಗೆ ಪಕ್ಷವು ಕೆಲಸ ಮಾಡಬೇಕು.

ಪಕ್ಷದ ಸ್ವತಂತ್ರ ಬಲವನ್ನು ಹೆಚ್ಚಿಸಬೇಕು

ಹಿಂದಿನ 23ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ರಾಜಕೀಯ–ವ್ಯೂಹಾತ್ಮಕ ನಿಲುವನ್ನು ಜಾರಿಮಾಡಿರುವ ಕುರಿತು ಕೇಂದ್ರ ಸಮಿತಿಯು ಸಿದ್ಧಪಡಿಸಿದ ರಾಜಕೀಯ ಪುನರ್ವಿಮರ್ಶಾ ವರದಿಯು ಪಕ್ಷದ ಸ್ವತಂತ್ರ ಬಲವನ್ನು ಹೆಚ್ಚಿಸುವ ಅಗತ್ಯ ಹಾಗೂ ಮಹತ್ವದ ಪ್ರಾಧಾನ್ಯತೆಯನ್ನು ಎತ್ತಿತೋರಿಸಿದೆ. ಪಕ್ಷದ ಮಹಾಧಿವೇಶನವು ಇದನ್ನು ಪ್ರಧಾನ ವಿಷಯವಾಗಿ ಚರ್ಚೆ ಮಾಡಲಿದೆ, ಏಕೆಂದರೆ ಪಕ್ಷದ ಸ್ವತಂತ್ರ ಬಲ ಹೆಚ್ಚಾಗದೆ ಬಿಜೆಪಿ–ಆರ್‌ಎಸ್‌ಎಸ್ ಶಕ್ತಿಗಳನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲು ಸಾಧ್ಯವಾಗುವುದಿಲ್ಲ.



ಪಕ್ಷವನ್ನು ಬಲಪಡಿಸಲು ಮೂಲ ವರ್ಗಗಳ ನಡುವೆ ಕೆಲಸ ಮಾಡುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಾದ ಅವಶ್ಯಕತೆ ಇದೆ. ಗ್ರಾಮೀಣ ಶ್ರೀಮಂತರ ಕೂಟದ ಶೋಷಣೆಯ ವಿರುದ್ಧ ಗ್ರಾಮೀಣ ಬಡವರ ಹೋರಾಟಗಳನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕು. ತಯಾರಿಕ ವಲಯ ಹಾಗೂ ಆಯಕಟ್ಟಿನ ಉದ್ದಿಮೆಗಳಂತಹ ಸಂಘಟಿತ ವಲಯದ ಕಾರ್ಮಿಕರ ನಡುವೆ ಪಕ್ಷದ ಪ್ರಭಾವವನ್ನು ವಿಸ್ತರಿಸಬೇಕು ಮತ್ತು ಸಂಘಟಿತ ವಲಯದ ಗುತ್ತಿಗೆ ಕಾರ್ಮಿಕರನ್ನು ಸಂಘಟಿಸುವುದಕ್ಕೆ ಹೆಚ್ಚು ಮಹತ್ವ ನೀಡಬೇಕು.

ಪಕ್ಷದ ರಾಜಕೀಯ ವೇದಿಕೆಗಳ ಸುತ್ತ ಸ್ವತಂತ್ರ ರಾಜಕೀಯ ಪ್ರಚಾರ ಹಾಗೂ ಸಾಮೂಹಿಕ ಕಾರ್ಯಾಚರಣೆಗೆ ಹೆಚ್ಚು ಗಮನ ನೀಡಬೇಕು. ಚುನಾವಣಾ ಹೊಂದಾಣಿಕೆ ಅಥವಾ ಮೈತ್ರಿಕೂಟದ ಹೆಸರಿನಲ್ಲಿ ನಮ್ಮ ಸ್ವತಂತ್ರ ಅಸ್ಮಿತೆ ಮಸುಕಾಗದಂತೆ ಅಥವಾ ನಮ್ಮ ಸ್ವತಂತ್ರ ಚಟುವಟಿಕೆಗಳು ಕಡಿಮೆಯಾಗದಂತೆ ಎಚ್ಚರ ವಹಿಸಬೇಕು. ಆರ್‌ಎಸ್‌ಎಸ್–ಹಿಂದುತ್ವ ಶಕ್ತಿಗಳ ಸಿದ್ಧಾಂತ ಹಾಗೂ ಚಟುವಟಿಕೆಗಳನ್ನು ಹಿಮ್ಮೆಟ್ಟಿಸಲು ಸೈದ್ಧಾಂತಿಕ ಕೆಲಸ ಹಾಗೂ ಪ್ರಚಾರಕ್ಕೆ ವಿಶೇಷ ಗಮನ ಹರಿಸಬೇಕು.

ಸ್ಥಳೀಯ ಹೋರಾಟಗಳಲ್ಲಿ ಸಾಮೂಹಿಕ ಹಾಗೂ ವರ್ಗ ಪ್ರಶ್ನೆಗಳನ್ನು ಸತತವಾಗಿ ಕೈಗೆತ್ತಿಕೊಳ್ಳಬೇಕಾದ ವಿಷಯಕ್ಕೆ ಪ್ರಾಶಸ್ತ್ಯ ನೀಡಬೇಕು. ಸಾಮಾಜಿಕ ಹಾಗೂ ಜಾತಿ ದಮನ ಮತ್ತು ಲಿಂಗ ತಾರತಮ್ಯದಂತಹ ಸಮಸ್ಯೆಗಳ ಬಗ್ಗೆ ಪಕ್ಷವು ನೇರ ಪ್ರಚಾರ ಹಾಗೂ ಹೋರಾಟಗಳನ್ನು ನಡೆಸಬೇಕು. ಸಾಮಾಜಿಕ ದಬ್ಬಾಳಿಕೆ ವಿರುದ್ಧದ ಹೋರಾಟಗಳನ್ನು ವರ್ಗ ಶೋಷಣೆಯ ವಿರುದ್ಧದ ಹೋರಾಟಗಳಿಗೆ ಜೋಡಿಸಲು ಸಾಧ್ಯವಾಗಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಯುವಜನರನ್ನು ಆಕರ್ಷಿಸಿ ಪಕ್ಷಕ್ಕೆ ತರುವ ಅಗತ್ಯ ಬಹಳ ಇದೆ. ಇದಕ್ಕಾಗಿ, ರಾಜಕೀಯ ವೇದಿಕೆ ಮತ್ತು ಹಕ್ಕೊತ್ತಾಯಗಳನ್ನು ರೂಪಿಸುವಾಗ ಯುವಜನರಿಗೆ ಪ್ರಸ್ತುತವಾಗುವಂತಹ ವಿಷಯಗಳನ್ನು ಆರಿಸಿಕೊಳ್ಳಬೇಕು.

ಹೋರಾಟಗಳು ಮತ್ತು ಪ್ರತಿರೋಧ:

ಮೇ 2024ರ ಲೋಕಸಭಾ ಚುನಾವಣಾ ಕದನದಲ್ಲಿ ಬಿಜೆಪಿಗೆ ಬಹುಮತ ದೊರಕದೆ ಜಾತ್ಯತೀತ ಪ್ರಜಾಸತ್ತಾತ್ಮಕ ವಿಪಕ್ಷಗಳಿಗೆ ಭಾಗಶಃ ಯಶಸ್ಸು ತಂದುಕೊಟ್ಟಿದೆ; ಆದರೆ ಮೋದಿ ಸರಕಾರದ ಮೂರನೇ ಅವಧಿಯಲ್ಲಿನ ಕಳೆದ ಹತ್ತು ತಿಂಗಳ ಆಡಳಿತದ ಅನುಭವವು ಹಿಂದುತ್ವ ಕಾರ್ಪೊರೇಟ್ ಕಾರ್ಯಸೂಚಿಯ ಜಾರಿಯಲ್ಲಿ ಯಾವುದೇ ಸಡಿಲತೆ ಆಗಿಲ್ಲ ಎನ್ನುವುದನ್ನು ತೋರಿಸಿದೆ. ಈ ಕಾರಣದಿಂದಾಗಿಯೇ ಮೋದಿ ಸರಕಾರದ ಆರ್ಥಿಕ ಹಾಗೂ ಹಿಂದುತ್ವ ಕಾರ್ಪೊರೇಟ್ ನೀತಿಗಳ ವಿರುದ್ಧದ ಪ್ರತಿರೋಧವನ್ನು ಬಲಪಡಿಸುವುದು ಹಾಗೂ ವಿಸ್ತರಿಸುವುದು ಬಹಳ ಮುಖ್ಯವಾಗುತ್ತದೆ.

23ನೇ ಮಹಾಧಿವೇಶನ ನಡೆದ ನಂತರದ ಅವಧಿಯಲ್ಲಿ ಕಾರ್ಮಿಕರು, ರೈತರು, ಮಹಿಳೆಯರು, ಯುವಜನರು ಮತ್ತು ವಿದ್ಯಾರ್ಥಿಗಳು ಗಮನಸೆಳೆಯುವ ಹೋರಾಟಗಳನ್ನು ಹಾಗೂ ಜಂಟಿ ಕಾರ್ಯಾಚರಣೆಗಳನ್ನು ನಡೆಸಿದ್ದಾರೆ. ತಮಿಳುನಾಡಿನ ಕಾಂಚೀಪುರಂನಲ್ಲಿರುವ ಸ್ಯಾಮ್‌ಸಂಗ್ ನೌಕರರು ದೈತ್ಯ ಬಹುರಾಷ್ಟ್ರೀಯ ಕಂಪನಿಯನ್ನು ಮಣಿಸಿದ ಯಶಸ್ವೀ ಹೋರಾಟವು ಎಲ್ಲರಿಗೂ ಮಾದರಿಯಾಗುವಂತಹ ಉದಾಹರಣೆಯಾಗಿದೆ. ವಿಶಾಖಪಟ್ಟಣದ ಉಕ್ಕಿನ ಕಾರ್ಖಾನೆಯ ಖಾಸಗೀಕರಣದ ವಿರುದ್ಧ ಹೋರಾಟ ಮುಂದುವರಿಯುತ್ತಿದೆ. ಹಲವಾರು ರಾಜ್ಯಗಳಲ್ಲಿ ಯೋಜನಾ ನೌಕರರು ಅಸಂಖ್ಯಾತ ಹೋರಾಟಗಳನ್ನು ನಡೆಸಿದ್ದಾರೆ. ಸ್ವಲ್ಪಮಟ್ಟಿನ ಯಶಸ್ಸನ್ನೂ ಪಡೆದಿದ್ದಾರೆ. ಮನರೇಗಾ ಕೂಲಿ, ಜಮೀನು ಹಾಗೂ ಮನೆ ನಿವೇಶನಗಳು ಮುಂತಾದ ಸಮಸ್ಯೆಗಳಿಗಾಗಿ ಹಲವಾರು ಕಡೆಗಳಲ್ಲಿ ಹೋರಾಟಗಳು ನಡೆದಿವೆ.

ರೈತರು ಜಂಟೀ ವೇದಿಕೆಯಡಿ–ಸಂಯುಕ್ತ ಕಿಸಾನ್ ಮೋರ್ಚಾದ ಅಡಿ–ನ್ಯಾಯಯುತ ಕನಿಷ್ಠ ಬೆಂಬಲ ಬೆಲೆ ನಿಗದಿಗಾಗಿ ಹೋರಾಟಗಳನ್ನು ಮುಂದುವರೆಸಿದ್ದಾರೆ. ಗಣಿ ಯೋಜನೆಗಳಿಗಾಗಿ ಒಕ್ಕಲೆಬ್ಬಿಸುವುದರ ವಿರುದ್ಧ ಆದಿವಾಸಿಗಳು ಮತ್ತು ರೈತರು ಹೋರಾಟ ಮಾಡುತ್ತಿದ್ದಾರೆ. ಆಹಾರ ಸುರಕ್ಷತೆ, ಮಹಿಳಾ ದೌರ್ಜನ್ಯಗಳು, ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ನಿರುದ್ಯೋಗ ಮುಂತಾದ ಸಮಸ್ಯೆಗಳ ವಿರುದ್ಧ ಮಹಿಳೆಯರು, ಯುವಜನರು, ವಿದ್ಯಾರ್ಥಿಗಳು ಹೋರಾಟದಲ್ಲಿ ನಿರತರಾಗಿದ್ದಾರೆ.

ಮುಂಬರುವ ದಿನಗಳಲ್ಲಿ, ನವ–ಉದಾರವಾದಿ ನೀತಿಗಳ ವಿರುದ್ಧದ ಹೋರಾಟಗಳನ್ನು ವಿಸ್ತರಿಸಬೇಕು ಮತ್ತು ತೀವ್ರಗೊಳಿಸಬೇಕು. ಈಗಾಗಲೇ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನಾಲ್ಕು ಕಾರ್ಮಿಕ ಸಂಹಿತೆಗಳ ವಿರುದ್ಧ ಮೇ 20, 2025ರಂದು ದೇಶವ್ಯಾಪಿ ಒಂದು ದಿನದ ಮುಷ್ಕರಕ್ಕೆ ಕರೆ ನೀಡಿದೆ.

ಇಂತಹ ಹೋರಾಟಗಳಲ್ಲಿ ತೊಡಗಿರುವ ಮತ್ತು ವರ್ಗ ಹಾಗೂ ಸಾಮೂಹಿಕ ಸಂಘಟನೆಗಳ ಸದಸ್ಯರಾಗಿರುವ ಸಮೂಹಗಳಲ್ಲಿ ರಾಜಕೀಯ ಪ್ರಜ್ಞೆ ಮೂಡಿಸಲು ಪಕ್ಷದ ಘಟಕಗಳು ಹೆಚ್ಚು ಗಮನಹರಿಸಬೇಕು. ಹೋರಾಟಗಳಲ್ಲಿರುವ ಸಮರಶೀಲ ಹಾಗೂ ಕ್ರಿಯಾಶೀಲ ದೊಡ್ಡ ಸಂಖ್ಯೆಯ ಸದಸ್ಯರುಗಳನ್ನು ರಾಜಕೀಯಗೊಳಿಸಿ ಪಕ್ಷಕ್ಕೆ ತಂದರೆ ಮಾತ್ರ ಪಕ್ಷದ ಸ್ವತಂತ್ರ ಶಕ್ತಿ ವೃದ್ಧಿಯಾಗಲು ಸಾಧ್ಯ.

ಟ್ರಂಪ್ ಅಧ್ಯಕ್ಷತನದಲ್ಲಿ ಮೂರ್ತೀಕರಿಸಲ್ಪಟ್ಟ ಹೆಚ್ಚು ಆಕ್ರಮಣಕಾರಿ ಸಾಮ್ರಾಜ್ಯವಾದದತ್ತ ಜಗತ್ತು ವೇಗವಾಗಿ ಸಾಗುತ್ತಿದೆ. ಮೋದಿ ↗

ಸಿಪಿಐ(ಎಂ) ಅಖಿಲ ಭಾರತ 24ನೇ ಮಹಾಧಿವೇಶನ: ಪ್ರತಿನಿಧಿಗಳನ್ನು ತೆರೆದ ಬಾಹುಗಳಿಂದ ಸ್ವಾಗತಿಸಲು ಮದುರೈ ಸಿದ್ಧವಾಗಿದೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 24ನೇ ಅಖಿಲ ಭಾರತ ಮಹಾಧಿವೇಶನವು ಏಪ್ರಿಲ್ 2 ರಿಂದ 6 ರವರೆಗೆ ತಮಿಳುನಾಡಿನ ಮಧುರೈ ನಗರದ ಹೃದಯಭಾಗದಲ್ಲಿರುವ ಐತಿಹಾಸಿಕ ತಮುಕ್ಕಂ ಕಲಾ ಮಂದಿರದಲ್ಲಿ ನಡೆಯಲಿದೆ. ದೇಶದ ಮೂಲೆಮೂಲೆಗಳಿಂದ ಮಾಹಾಧಿವೇಶನಕ್ಕೆ ಬರುವ ಪ್ರತಿನಿಧಿಗಳನ್ನು ಮುಕ್ತ ತೋಳುಗಳಿಂದ ಸ್ವಾಗತಿಸಲು ಮದುರೈ ಸಿದ್ಧವಾಗಿದೆ. ಮದುರೈ ಪ್ರಾಚೀನ ಮತ್ತು ಅದ್ಭುತ ಇತಿಹಾಸ ಹೊಂದಿರುವ ನಗರವಾಗಿದೆ. 2,500 ವರ್ಷಗಳಷ್ಟು ಇತಿಹಾಸದ ವೈಭವ ಮದುರೈಗಿದೆ. ಪಾಂಡ್ಯರ ಕಾಲದ ವೈಭವ, ನಾಯಕರ ಕಾಲದ ಇತಿಹಾಸ, ನಂತರ ಬ್ರಿಟಿಷ್ ಬ್ರಿಟಿಷ್ ಆಡಳಿತವೂ ನಡೆದಿದೆ. ಇವರೆಲ್ಲರ ಆಡಳಿತದಲ್ಲಿ ಬದುಕಿದ ಶ್ರಮಜೀವಿಗಳ ಇತಿಹಾಸವೂ ಮೆಚ್ಚುಗೆಗೆ ಅರ್ಹವಾಗಿದೆ.

ವಿಮೋಚನಾ ಹೋರಾಟದ ಜ್ವಾಲೆಯ ಕಿಡಿಗಳು

ಬ್ರಿಟಿಷ್ ಆಳ್ವಿಕೆಯ ವಿರುದ್ಧ ಮಧುರೈ ಜಿಲ್ಲೆಯಲ್ಲಿ ಹಲವಾರು ದಂಗೆಗಳು ನಡೆದಿವೆ. ಮಧುರೈಗೆ ಬಂದ ಮಹಾತ್ಮ ಗಾಂಧಿಯವರು ಅಲ್ಲಿನ ರೈತರ ಸ್ಥಿತಿಯನ್ನು ನೋಡಿ ಅರ್ಧ ಉಡುಪು ಧರಿಸಲು ಬದಲಾದರು ಎಂದು ಇತಿಹಾಸ ಹೇಳುತ್ತದೆ. ಅದರೊಂದಿಗೆ ಇಂದು ಗಾಂಧಿ ವಸ್ತುಸಂಗ್ರಹಾಲಯವು ತನ್ನ ವೈಭವವನ್ನು ಮೆರೆದಿದೆ. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಖಂಡಿಸಿ, ಮಹಾತ್ಮ ಗಾಂಧಿಯವರ ಬಂಧನವನ್ನು ಖಂಡಿಸಿ ಮಧುರೈನಲ್ಲಿ ತೀವ್ರ ಪ್ರತಿಭಟನೆಗಳು ನಡೆದವು. ಐ.ಮಾಯಾಂಡಿ ಭಾರತಿ, ಎನ್.ಎಂ.ಆರ್.ಸುಬ್ಬರಾಮನ್, ಪಸುಂಪನ್ ಮುತ್ತುರಾಮಲಿಂಗದೇವರ್, ಪಿ.ಜೀವನಂದಂ, ಪಿ.ರಾಮಮೂರ್ತಿ, ಕೆ.ಪಿ.ಜಾನಕಿ ಯಮ್ಮಾಳ್, ಎನ್.ಶಂಕರಯ್ಯ, ಮತ್ತು ಕೆ.ಟಿ.ಕೆ.ತಂಗಮಣಿ ಅವರಂತಹ ಮಹಾನ್ ನಾಯಕರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದ ನೆಲ ಮದುರೈ.

ಹೃದಯವನ್ನು ತುಂಬಿದ ನೆನಪುಗಳು

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರನ್ನು ಮಧುರೈಗೆ ಕರೆತಂದು ಧ್ವಜಾರೋಹಣ ಸಮಾರಂಭ ಮತ್ತು ಸಾರ್ವಜನಿಕ ಸಭೆಗಳನ್ನು ಆಯೋಜಿಸಿದ ಗೌರವವೂ ಮಧುರೈಗಿದೆ. 1953ರಲ್ಲಿ ನಡೆದ ಅಖಿಲ ಭಾರತ ಸಮ್ಮೇಳನದಲ್ಲಿ ಇಂಗ್ಲೆಂಡ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಹರಿಬಾಲ್ಡಿ ಭಾಗವಹಿಸಿದ್ದು ಒಂದು ಐತಿಹಾಸಿಕ ಘಟನೆಯಾಗಿದೆ. ಅಂತಹ ಅಸಂಖ್ಯಾತ ವೈಭವಗಳು ಮಧುರೈಗಿದೆ.

ತ್ಯಾಗದ ಹೆಜ್ಜೆ ಗುರುತುಗಳು!

ಪೆರುಂಗಮನಲ್ಲೂರು ಹುತಾತ್ಮರ ವೀರ ಇತಿಹಾಸ ಇಂದಿಗೂ ಸ್ಮರಣೀಯವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ವಿ.ಯು.ಚಿದಂಬರನಾರ್, ಸುಬ್ರಮಣ್ಯ ಶಿವ, ಭಾರತಿಯಾರ್ ಕೂಡ ಮಧುರೈಗೆ ಬಂದು ಇತಿಹಾಸ ನಿರ್ಮಿಸಿದ ವೀರರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬ್ರಿಟೀಷರ ವಿರುದ್ಧ ನಡೆದ ಹೋರಾಟದಲ್ಲಿ ಹುತಾತ್ಮರಾದ ಕಮ್ಯುನಿಸ್ಟ್ ಚಳುವಳಿಯ ಮನವಾಲನ್, ತಿಲ್ಲೈವನಂ, ಪೊಡುಂಬು ಪೊನ್ನಯ್ಯ, ಪೂಂತೋಟ್ಟಂ ಸುಬ್ಬಯ್ಯ, ರೈಲ್ವೆ ರಾಮಸಾಮಿ, ಕುಟ್ಟಿ ಜಯಪ್ರಕಾಶ್, ಲೀಲಾವತಿ, ಮಡಕ್ಕುಳಂ ಕರ್ಪು ಮತ್ತು ಲೋಡಿಂಗ್ ವರ್ಕರ್ ಬಾಲಮುರುಗನ್ ತಮ್ಮ ತ್ಯಾಗದ ಮೂಲಕ ಮಧುರೈಗೆ ಕೀರ್ತಿ ತಂದಿದ್ದಾರೆ.



ಕಾರ್ಮಿಕರ ಬದುಕಿನ ಕನಸಿನ ತಾಣ!

ಬ್ರಿಟಿಷ್ ಆಳ್ವಿಕೆಯಲ್ಲಿ ಮಧುರೈಗೆ ಬಂದ ಹತ್ತಿ ಗಿರಣಿ ಉದ್ಯಮವು ಜಿಲ್ಲೆಯಾದ್ಯಂತ ಹರಡಿತು. 30,000ಕ್ಕೂ ಹೆಚ್ಚು ಕಾರ್ಮಿಕರಿದ್ದ ಮಧುರೈ ಕೈಮಗ್ಗ ನೇಕಾರರಿಂದ ತುಂಬಿದ್ದ ಪಟ್ಟಣವಾಗಿತ್ತು. ಸರ್ಕಾರದ ನೀತಿಗಳಿಂದಾಗಿ ಈ ಕೈಗಾರಿಕೆಗಳು ಕಾಲಾನಂತರದಲ್ಲಿ ಕಣ್ಮರೆಯಾಗಿದ್ದರೂ, ಇಂದು ಮಧುರೈನ ಜನರನ್ನು ಉಳಿಸುತ್ತಿರುವುದು ಸಣ್ಣ ಮತ್ತು ಸೂಕ್ಷ್ಮ ಕೈಗಾರಿಕೆಗಳು. ಮಧುರೈ ಜಿಲ್ಲೆಯು ಹೆಚ್ಚಿನ ಸಂಖ್ಯೆಯ ಅನೌಪಚಾರಿಕ ಕಾರ್ಮಿಕರು, ಗ್ರಾಮೀಣ ರೈತರು ಮತ್ತು ಕೃಷಿ ಕಾರ್ಮಿಕರನ್ನು ಹೊಂದಿರುವ ಜಿಲ್ಲೆಯಾಗಿದೆ.

ಮಹಾನ್ ಸಮ್ಮೇಳನಗಳ ಐತಿಹಾಸಿಕ ಹೆಜ್ಜೆಗುರುತು!

1953ರಲ್ಲಿ 3ನೇ ಅಖಿಲ ಭಾರತ ಸಮ್ಮೇಳನವನ್ನೂ, 1972ರಲ್ಲಿ 9ನೇ ಅಖಿಲ ಭಾರತ ಸಮ್ಮೇಳನವನ್ನೂ ಆಯೋಜಿಸಿದ ಹೆಗ್ಗಳಿಕೆ ಮಧುರೈಗಿದೆ. ಈ ವರ್ಷಗಳಲ್ಲಿ, ಕಾಮ್ರೇಡ್ ಎ.ಕೆ.ಗೋಪಾಲನ್, ಜ್ಯೋತಿಬಸು, ಸುರ್ಜಿತ್, ಬಿ.ಟಿ.ರಣದಿವೆ, ಪಿ.ಸುಂದರಯ್ಯ, ಬಸವ ಪುನ್ನಯ್ಯ ಮತ್ತು ಇ.ಎಂ.ಎಸ್. ನಂಬೂದಿರಿಪಾಡ್ ಅವರಂತಹ ಮಹಾನ್ ನಾಯಕರು ಮಧುರೈಗೆ ಭೇಟಿ ನೀಡಿದ್ದಾರೆ. ಇವರೊಂದಿಗೆ, ಸಂಗಾತಿಗಳಾದ ಪಿ.ರಾಮಮೂರ್ತಿ, ಎನ್.ಶಂಕರಯ್ಯ, ಕೆ.ಪಿ.ಜಾನಕಿಯಮ್ಮಾಳ್, ಎ.ಪಿ.ಪಳನಿಚ್ಚಾಮಿ, ವಿ.ಕರ್ಮೇಗಂ, ಎಂ.ಮುನಿಯಾಂಡಿ, ಕೆ.ಬಾಲಕೃಷ್ಣನ್, ವಝುವಂತನ್, ಕೆ.ಅಯ್ಯಾವು, ಜೆ.ಎಸ್.ಕೃಷ್ಣಮೂರ್ತಿ ಸೇರಿದಂತೆ ಅನೇಕ ಸಂಗಾತಿಗಳಿದ್ದರು.

ಕೆ.ಪಿ.ಜಾನಕಿಯಮ್ಮಾಳ್ ಅವರು ಗ್ರಾಮೀಣ ಜನರಿಗಾಗಿ ಹೋರಾಟವನ್ನು ಮುನ್ನಡೆಸಿ, ಭೂ ಹಂಚಿಕೆಯಲ್ಲಿ ಮುಂದಾಳತ್ವ ವಹಿಸಿದ್ದರು. ಕಮ್ಯುನಿಸ್ಟ್ ಹೆಸರೇ ಗೊತ್ತಿಲ್ಲದವರೂ ಕಮ್ಯುನಿಸ್ಟ್ ಚಳವಳಿಯನ್ನು ಜಾನಕಿಯಮ್ಮಾಳ್ ಪಕ್ಷ ಎಂದು ಕರೆಯುತ್ತಿದ್ದರು.

ಹೊಸ ಯುಗದ ಆರಂಭ!

ಇಂದು ಮಧುರೈ ನಗರ ಮತ್ತು ಅದರ ಉಪನಗರಗಳಲ್ಲಿ 25ಕ್ಕೂ ಹೆಚ್ಚು ಯೂನಿಯನ್ ಗಳು, ಪ್ರದೇಶ ಸಮಿತಿಗಳು 600ಕ್ಕೂ ಹೆಚ್ಚು ಶಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತದೆ. ಸಾಮೂಹಿಕ ಸಂಘಟನೆಗಳು ದುಡಿಯುವ ಜನಗಳಿಗಾಗಿ ಹೋರಾಟಗಳನ್ನು ಮುನ್ನಡೆಸುತ್ತಿವೆ ಮತ್ತು ಹಲವಾರು ಕಾನೂನು ಪ್ರಯೋಜನಗಳನ್ನು ಪಡೆದುಕೊಳ್ಳುತ್ತಿವೆ. ಸ್ವಾತಂತ್ರ್ಯ ಹೋರಾಟದ ನಂತರ ಅನೇಕ ಕಮ್ಯುನಿಸ್ಟರು, ಸಂಸತ್ತು, ರಾಜ್ಯ ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾಗಿದ್ದಾರೆ ಮತ್ತು ಮಧುರೈ ಜಿಲ್ಲೆಯ ಜನರಿಗಾಗಿ ಶ್ರಮಿಸಿದ್ದಾರೆ. ಅಂತಹ ಹೆಮ್ಮೆ ಇಂದಿಗೂ ಮುಂದುವರೆದಿದೆ.

ಜನರ ಕಲ್ಯಾಣಕ್ಕಾಗಿ ಗರ್ಜಿಸುವ ಧ್ವನಿ

ಮಧುರೈ ಜಿಲ್ಲೆಯಲ್ಲಿ ಭಾರೀ ಕೈಗಾರಿಕೆಗಳ ಸ್ಥಾಪನೆಗೆ ಒತ್ತಾಯಿಸಿ, ವಿಮಾನ ನಿಲ್ದಾಣ ವಿಸ್ತರಣೆಗೆ ಒತ್ತಾಯಿಸಿ, ಅತ್ಯಾಧುನಿಕ ಏಮ್ಸ್ ಆಸ್ಪತ್ರೆಯ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಒತ್ತಾಯಿಸಿ, ನ್ಯೂರೋ ವೈದ್ಯಕೀಯ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಬೇಕು, ಮಧುರೈ ಮಲ್ಲಿಗೆಯನ್ನು ಬಳಸಿಕೊಂಡು ಸುಗಂಧ ದ್ರವ್ಯ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿ ಹಾಗೂ ಜಿಲ್ಲೆಯಲ್ಲಿರುವ ಗ್ರಾಮ, ನಗರಗಳಲ್ಲಿ ವಾಸಿಸುವ ಜನರಿಗೆ ಸಾಮಾಜಿಕ ಭದ್ರತೆಯೊಂದಿಗೆ ಖಾತರಿಪಡಿಸಿದ ಉದ್ಯೋಗದ ಅಗತ್ಯವನ್ನು ಪೂರೈಸಬೇಕೆಂದು ಒತ್ತಾಯಿಸಿ ಮಧುರೈ ಜಿಲ್ಲೆಯ ಎರಡು ಜಿಲ್ಲಾ ಸಮಿತಿಗಳು ಹೋರಾಟ ಮುಂದುವರಿಸಿವೆ.

ಇಡೀ ಭಾರತದ ಜನರ ಬೇಡಿಕೆಗಳನ್ನು ಸಮರ್ಥಿಸುತ್ತಾ, ತಮಿಳುನಾಡಿನ ಜನರ ಭಾಷಾ ಹಕ್ಕುಗಳನ್ನು ರಕ್ಷಿಸಲು, ಮಳೆ, ಪ್ರವಾಹ ಮತ್ತು ಶಿಕ್ಷಣಕ್ಕೆ ಹಣವನ್ನು ಒದಗಿಸಲು ನಿರಾಕರಿಸುವುದನ್ನು ಖಂಡಿಸಿ, ಧಾರ್ಮಿಕ ಸಾಮರಸ್ಯವನ್ನು ಒತ್ತಾಯಿಸುವ ಮಧುರೈನ ಧ್ವನಿಯಾಗಿ ಕಾಮ್ರೇಡ್ ಎಸ್.ವೆಂಕಟೇಶನ್ ಧ್ವನಿ ಎತ್ತುತ್ತಿದ್ದಾರೆ. ವಿದ್ಯಾರ್ಥಿಗಳ ಶಿಕ್ಷಣ ಸಾಲದ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಶಿಬಿರಗಳನ್ನು ನಡೆಸಲಾಗುತ್ತಿದೆ. ಈ ಅವಧಿಯಲ್ಲಿ ಜನರ ಕುಂದುಕೊರತೆ ಪರಿಹಾರ ಶಿಬಿರಗಳನ್ನು ಸಹ ನಡೆಸಲಾಗಿದೆ.

ಹೊಸ ಹಾದಿಯಲ್ಲಿ ಒಂದು ಕ್ರಾಂತಿಕಾರಿ ಹೆಜ್ಜೆ!

ಐತಿಹಾಸಿಕ ಮಧುರೈ ಜಿಲ್ಲೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಸಮ್ಮೇಳನ ಚರ್ಚೆಯ ಆಧಾರದ ಮೇಲೆ ವಿವಿಧ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವ ನಿರೀಕ್ಷೆಯಿದೆ. ಪಕ್ಷವನ್ನು ಬಲಿಷ್ಠಗೊಳಿಸುವ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಬಿಜೆಪಿಯನ್ನು ಸೋಲಿಸಲು ಸಮಗ್ರ ತಂಡವನ್ನು ರಚಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ. ಪಕ್ಷದ ಅಖಿಲ ಭಾರತ ನಾಯಕರುಗಳಾದ ಸಂಗಾತಿ ಪ್ರಕಾಶ್ ಕಾರಟ್, ಬೃಂದಾ ಕಾರಟ್, ಪಿಣರಾಯಿ ವಿಜಯನ್, ಮಾಣಿಕ್ ಸರ್ಕಾರ್ ರಂತಹ ಜನಪ್ರಿಯ ಇತರ ಮಹಾನ್ ನಾಯಕರು, ಭಾರತದ ರಾಜಕೀಯದ ದಿಕ್ಕನ್ನು ನಿರ್ಧರಿಸಬಲ್ಲ ಕೇಂದ್ರ ಸಮಿತಿಯ ಸದಸ್ಯರು ಮತ್ತು ದೇಶದಾದ್ಯಂತ ಪ್ರತಿನಿಧಿಗಳು ಮಧುರೈಗೆ ಭೇಟಿ ನೀಡುತ್ತಾರೆ.

ಪುಟ 14 ಕ್ಕೆ

ಸರ್ಕಾರವು ಅದರ ಜಾಗತಿಕ ಕಾರ್ಯಾಚರಣೆಗಳಿಗೆ ಇಚ್ಛಾ ಮಿತ್ರನಾಗಲು ಹೊರಟಿದೆ. ಈ ಹಿನ್ನೆಲೆಯಲ್ಲಿ ಮೋದಿ ಸರ್ಕಾರದ ಅಮೆರಿಕಾ ಪರ ನೀತಿಗಳನ್ನು ವಿರೋಧಿಸಲು ನಮ್ಮ ದೇಶದಲ್ಲಿ ಸಾಮ್ರಾಜ್ಯವಾದಿ ವಿರೋಧಿ ಚಳವಳಿಯನ್ನು ಚುರುಕುಗೊಳಿಸಬೇಕಾಗಿದೆ. ಈ ಕೆಲಸವನ್ನು ಸಿಪಿಐ(ಎಂ) ಮತ್ತು ಎಡ ಪಕ್ಷಗಳು ಮಾತ್ರ ಕೈಗೊಳ್ಳಲು ಸಾಧ್ಯ.

ಕೇರಳ ಎಲ್‌ಡಿಎಫ್ ಸರ್ಕಾರ

"ಹೊಸ ಕೇರಳ"ವನ್ನು ವೃದ್ಧಿಪಡಿಸುವ ಸಲುವಾಗಿ ಪರ್ಯಾಯ ನೀತಿಗಳನ್ನು ಜಾರಿ ಮಾಡುವಲ್ಲಿ ಎಲ್‌ಡಿಎಫ್ (ಎಡ ಪ್ರಜಾಸತ್ತಾತ್ಮಕ ರಂಗ) ಸರ್ಕಾರವು ಎದ್ದು ಕಾಣುವಂತಹ ಕೆಲಸ ಮಾಡಿದೆ. ಕೇಂದ್ರ ಸರ್ಕಾರದ ಪ್ರತಿಕೂಲ ಹಾಗೂ ತಾರತಮ್ಯ ಧೋರಣೆಯ ಎದುರಿನಲ್ಲಿ ಇದನ್ನು ಮಾಡಲಾಗಿದೆ. ಜಾತ್ಯತೀತ ಪ್ರಜಾಸತ್ತಾತ್ಮಕ ಪರ್ಯಾಯಕ್ಕೆ ಬೆಂಬಲವಾಗಿ ಕೇರಳದ ಸಿಪಿಐ(ಎಂ) ಘಟಕವು ಜನರನ್ನು ನಿರಂತರವಾಗಿ ಅಣಿನೆರೆಸುತ್ತಿದೆ. ಇದನ್ನು ಬೆಂಬಲಿಸುವ ಸಲುವಾಗಿ ದೇಶದ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಸುವ ಮೂಲಕ ಈ ಎಲ್‌ಡಿಎಫ್ ಸರ್ಕಾರವನ್ನು ಸಂರಕ್ಷಿಸಬೇಕು.

ಬಲಿಷ್ಠವಾದ ಸಂಘಟನೆ ಕಟ್ಟಿ ಬೆಳೆಸಿ

ರಾಜಕೀಯ ಹಾಗೂ ಸೈದ್ಧಾಂತಿಕ ಕಾರ್ಯಭಾರಗಳ ಹಿನ್ನೆಲೆಯಲ್ಲಿ ಪಕ್ಷದ ಸಂಘಟನೆಯನ್ನು ಸುವ್ಯವಸ್ಥಿತಗೊಳಿಸಲು ಹಾಗೂ ವಿಸ್ತರಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಮಹಾಧಿವೇಶನವು ಚರ್ಚೆ ಮಾಡುತ್ತದೆ ಮತ್ತು ರೂಪಿಸುತ್ತದೆ.

23ನೇ ಮಹಾಧಿವೇಶನವು ಕೆಲವು ಸಂಘಟನಾ ಗುರಿಗಳನ್ನು ನಿಗದಿಪಡಿಸಿತ್ತು: ಪಕ್ಷದ ಸದಸ್ಯರ ಗುಣಮಟ್ಟವನ್ನು ಉತ್ತಮಗೊಳಿಸುವುದು, ಪ್ರಾಥಮಿಕ ಘಟಕವಾದ ಶಾಖೆಗಳನ್ನು ಕ್ರಿಯಾಶೀಲಗೊಳಿಸುವುದು, ಪಕ್ಷದ ಘಟಕಗಳು ವರ್ಗ ಹಾಗೂ ಸಾಮೂಹಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟಗಳನ್ನು ಮುನ್ನಡೆಸಲು ಸಾಧ್ಯವಾಗುವಂತೆ ಶಾಖೆಯು ಸಾಮೂಹಿಕ ಧೋರಣೆಯನ್ನು ಅಳವಡಿಸಿಕೊಳ್ಳಬೇಕು. ಹಿಂದುತ್ವ ಸಿದ್ಧಾಂತ ಹಾಗೂ ಚಟುವಟಿಕೆಗಳನ್ನು ಹಿಮ್ಮೆಟ್ಟಿಸಲು ಸೈದ್ಧಾಂತಿಕ ಕೆಲಸಗಳನ್ನು ಕೈಗೆತ್ತಿಕೊಳ್ಳುವಂತೆ ಪಕ್ಷದ ಸಂಘಟನೆಗಳನ್ನು ಸಜ್ಜುಗೊಳಿಸುವತ್ತ ಹೆಚ್ಚು ಒತ್ತುಕೊಡಲಾಗಿತ್ತು. ಈ ವಿಷಯಗಳಲ್ಲಿ ಆಗಿರುವ ಕೆಲಸಗಳನ್ನು ಸಂಘಟನಾ ವರದಿಯಲ್ಲಿ ಪರಿಶೀಲಿಸಲಾಗುವುದು. ಆಗಿರುವ ಪ್ರಗತಿ ಮತ್ತು ನ್ಯೂನತೆಗಳ ಕುರಿತು ಮೇಲಿನಿಂದ ಕೆಳಗಿನವರೆಗೆ ಸ್ವವಿಮರ್ಶಾತ್ಮಕವಾಗಿ ಪುನರಾವಲೋಕನ ಮಾಡಲಾಗುವುದು, ರಾಜಕೀಯ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ಹೋರಾಟಗಳನ್ನು ಹಾಗೂ ಚಳವಳಿಗಳನ್ನು ಬೆಳೆಸಲು ಮತ್ತು ಸೈದ್ಧಾಂತಿಕ ಸಮರ ಸಾರಲು ಸಂಘಟನೆಯನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಮುಂದಿನ ಗುರಿಯನ್ನು ನಿರ್ಧರಿಸಲಾಗುವುದು.

ಎಡ ಶಕ್ತಿಗಳ ಐಕ್ಯತೆಯನ್ನು ಸಾಧಿಸುವಾಗಲೇ ಮತ್ತು ಎಡ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯವನ್ನು ರೂಪಿಸುವಾಗಲೇ ಜತೆಯಲ್ಲೇ ಸಿಪಿಐ(ಎಂ) ಪಕ್ಷವನ್ನು ಬಲಪಡಿಸಬೇಕು. ಎಡ ಮತ್ತು ಪ್ರಜಾಪ್ರಭುತ್ವ ವೇದಿಕೆಯನ್ನು ಅತ್ಯಂತ ತಾಳ್ಮೆಯಿಂದ ಕಟ್ಟಬೇಕು, ಅವುಗಳನ್ನು ಪ್ರತಿನಿಧಿಸುವ ಮತ್ತು ದುಡಿಯುವ ಜನರ ಎಲ್ಲಾ ವರ್ಗಗಳನ್ನು ಹಾಗೂ ವಿಭಾಗಗಳನ್ನು ಹಾಗೂ ಸಂಘಟನೆಗಳನ್ನು ಕೂಡ ಅಣಿನೆರೆಸಬೇಕು.

24ನೇ ಮಹಾಧಿವೇಶನವು ಈ ಎಲ್ಲಾ ಶಕ್ತಿಗಳನ್ನು–ಎಡ, ಪ್ರಜಾಪ್ರಭುತ್ವ ಹಾಗೂ ಜಾತ್ಯತೀತ ಶಕ್ತಿಗಳನ್ನು–ಒಟ್ಟುಗೂಡಿಸುವ ವೇದಿಕೆಯಾಗಲಿ; ಆ ವೇದಿಕೆಯು ಎಲ್ಲಾ ಕರಾಳ ಪ್ರತಿಗಾಮಿ ಶಕ್ತಿಗಳನ್ನು ಹಿಮ್ಮೆಟ್ಟಿಸಲಿ ಮತ್ತು ಜಾತ್ಯತೀತ, ಪ್ರಜಾಪ್ರಭುತ್ವ ಹಾಗೂ ಪ್ರಗತಿಪರ ಧೋರಣೆಯ ಪರ್ಯಾಯ ಅಭಿವೃದ್ಧಿ ಪಥವನ್ನು ತೆರೆಯಲು ಪ್ರಯತ್ನಿಸಲಿ.

ಒಳಮೀಸಲಾತಿ ವೈಜ್ಞಾನಿಕ ಸಮೀಕ್ಷೆಯನ್ನು ತ್ವರಿತಗೊಳಿಸಲು ಮತ್ತು ಅಲ್ಲಿಯವರೆಗೆ ಪರಿಶಿಷ್ಟ ನೇಮಕಾತಿಗಳನ್ನು ತಡೆಹಿಡಿಯಲು ಸಿಪಿಐ(ಎಂ) ಆಗ್ರಹ

ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಯ ಒಳ ಮೀಸಲಾತಿಗೆ ಸಂಬಂಧಿಸಿ ನ್ಯಾ.ನಾಗಮೋಹನ ದಾಸ್ ಆಯೋಗವು ಮಧ್ಯಂತರ ವರದಿಯನ್ನು ನೀಡಿದೆ. ಸಮಿತಿಯು ಪ್ರಧಾನವಾಗಿ ನಾಲ್ಕು ಶಿಫಾರಸ್ಸುಗಳನ್ನು ನೀಡಿದೆ. ಈ ಶಿಫಾರಸ್ಸುಗಳನ್ನು ರಾಜ್ಯ ಸಚಿವ ಸಂಪುಟವು ಅಂಗೀಕರಿಸಿದೆ. ಈ ಹಿನ್ನೆಲೆಯಲ್ಲಿ ಒಳ ಮೀಸಲಾತಿಗೆ ಅಗತ್ಯವಾದ ವೈಜ್ಞಾನಿಕ ಸಮೀಕ್ಷೆಯನ್ನು ನಿಗದಿತ ಗಡುವಿನಲ್ಲಿ ಪೂರ್ಣಗೊಳಿಸಬೇಕು ಮತ್ತು ಅಲ್ಲಿಯವರೆಗೆ ಪರಿಶಿಷ್ಟ ಜಾತಿಗಳಿಗೆ ಅನ್ಯಾಯವಾಗದ ಹಾಗೆ ನೇಮಕಾತಿಗಳನ್ನು ತಡೆಹಿಡಿಯಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿಯು ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಪರಿಶಿಷ್ಟ ಜಾತಿಗಳ ವೈಜ್ಞಾನಿಕ ವರ್ಗೀಕರಣಕ್ಕೆ ಹೊಸ ಸಮೀಕ್ಷೆ ನಡೆಸಿ ದತ್ತಾಂಶ ಸಂಗ್ರಹಿಸಲು ಮಾಡಿರುವ ಶಿಫಾರಸ್ಸು ಮುಂದಿನ ದಿನಗಳಲ್ಲಿ ಒಳಮೀಸಲಾತಿಯ ವಿವಿಧ ಪ್ರಶ್ನೆಗಳ ಮೇಲೆ ಕೋರ್ಟ್ ಮೆಟ್ಟಿಲೇರುವುದನ್ನು ತಡೆಗಟ್ಟಲು ಅಗತ್ಯವಾಗಿದೆ. ಸುಪ್ರೀಂ ಕೋರ್ಟಿನ ತೀರ್ಪು ಬಹಳ ಮುಖ್ಯವಾಗಿ ಈ ಅಂಶವನ್ನು ಆಧರಿಸಿದೆ. ಆದ್ದರಿಂದ ಆಯೋಗವು ಅಭಿಪ್ರಾಯಪಟ್ಟಿರುವ ಹಾಗೆ ಆಧುನಿಕ ಸಾಧನಗಳನ್ನು ಬಳಸಿ, ಸರ್ಕಾರವು ನಿಗದಿ ಪಡಿಸಿದ 60 ದಿನಗಳೊಳಗೆ, ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿದೆ ಎಂದಿದೆ.

ಆಯೋಗವು ಶಿಫಾರಸ್ಸು ಮಾಡಿರುವ ಹಾಗೆ ಮುಂದಿನ ನೇಮಕಾತಿಗಳಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಅನ್ಯಾಯವಾಗದ ಹಾಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ಎರಡು ತಿಂಗಳ ಅವಧಿಗೆ ಪರಿಶಿಷ್ಟ ಜಾತಿಗಳ ಮೀಸಲು ನೇಮಕಾತಿಯನ್ನು ಮುಂದೂಡುವುದು ಅಗತ್ಯವಾಗಿದೆ ಎಂದಿದೆ.

ಒಳ ಮೀಸಲಾತಿ ವಿಚಾರವು ಪ್ರಮುಖ ಹಾಗೂ ಅತ್ಯಂತ ಸಂಕೀರ್ಣವಾದ ಪ್ರಶ್ನೆಯಾಗಿದೆ. ಮ್ಮೆ ಜಾರಿಗೊಳಿಸಿದ ನಂತರ, ಸೂಕ್ತ ದತ್ತಾಂಶಗಳ ಕೊರತೆ ಅಥವಾ ಅವೈಜ್ಞಾನಿಕ ಸಮೀಕ್ಷೆ ಇತ್ಯಾದಿ ಕಾರಣಗಳಿಗಾಗಿ ಕೋರ್ಟಿನಲ್ಲಿ ನಕಾರಾತ್ಮಕ ಪರಿಣಾಮ ಉಂಟಾಗದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ. ಆದ್ದರಿಂದ ಎರಡು ತಿಂಗಳ ಸಮಯದಲ್ಲಿ, ಒಳ ಮೀಸಲಾತಿ ತೀರ್ಮಾನವು ಯಾವುದೇ ಕಾನೂನಿನ ತೊಡಕುಗಳಿಗೆ ಸಿಕ್ಕಿ ತೊಳಲಾಡದಂತೆ ಮಾಡುವ ದೃಷ್ಟಿಯಿಂದ, ವೈಜ್ಞಾನಿಕ ಸಮೀಕ್ಷೆ ಮೂಲಕ ದತ್ತಾಂಶ ಸಂಗ್ರಹ ಮಾಡಲು ಎಲ್ಲ ಶಕ್ತಿಗಳು ಸಹಕಾರ ನೀಡಬೇಕೆಂದು ಸಿಪಿಐ(ಎಂ) ವಿನಂತಿಸಿದೆ.

ಕಾಮ್ರೇಡ್ ಶ್ರೀಮತಿ ಟೀಚರ್ ಬಗ್ಗೆ ಸುಳ್ಳು ಹೇಳಿರುವುದಾಗಿ 6 ವರ್ಷಗಳ ನಂತರ ಬಿಜೆಪಿ ಮುಖಂಡರ ಬಹಿರಂಗ ತಪ್ಪೊಪ್ಪಿಗೆ

ಕೇರಳದ ಬಿಜೆಪಿ ಮುಖಂಡ ಬಿ.ಗೋಪಾಲಕೃಷ್ಣನ್ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯೆ ಮತ್ತು ಎಲ್‌ಡಿಎಫ್ ಸರಕಾರದಲ್ಲಿ ಸಚಿವೆಯಾಗಿದ್ದ ಪಿ.ಕೆ.ಶ್ರೀಮತಿಯವರ ವಿರುದ್ಧ ತಾನು ಮಾಡಿರುವ ಮಾನಹಾನಿಕರ ಟಿಪ್ಪಣಿಯ ಬಗ್ಗೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಿದ್ದಾರೆ. ಈ ಕುರಿತ ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳ ಹೈಕೋರ್ಟಿನಲ್ಲಿ ಹಾಜರಾದ ನಂತರ ಅವರು ಮಾಧ್ಯಮಗಳ ಮುಂದೆ ಬಂದು, ಶ್ರೀಮತಿ ಟೀಚರ್ ವಿರುದ್ಧ ಮಾಡಿರುವ ಆಪಾದನೆಗಳಿಗೆ ಸಾಕ್ಷ್ಯ ಒದಗಿಸಲು ತನಗೆ ಸಾಧ್ಯವಾಗಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಒಂದು ಟಿವಿ ಚರ್ಚೆಯ ಸಂದರ್ಭದಲ್ಲಿ ಗೋಪಾಲಕೃಷ್ಣನ್, ಆರೋಗ್ಯ ಇಲಾಖೆಯಲ್ಲಿ ಶ್ರೀಮತಿ ಟೀಚರ್ ಸಚಿವೆಯಾಗಿದ್ದಾಗ ತನ್ನ ಮಗನ ಕಂಪನಿಯಿಂದ ಔಷಧಿಗಳನ್ನು ಖರೀದಿಸಿದ್ದಾರೆ ಎಂದು ಆರೋಪಿಸಿದರು. ಶ್ರೀಮತಿ ಟೀಚರ್ ತಮ್ಮ ಮಗನಿಗೆ ಯಾವುದೇ ಔಷಧ ಕಂಪನಿ ಅಥವಾ ವ್ಯವಹಾರದಲ್ಲಿ ಯಾವುದೇ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದರು. ಗೋಪಾಲಕೃಷ್ಣನ್, ತರುವಾಯ ಇದು ಆಧಾರರಹಿತ ಆರೋಪ ಮತ್ತು ತಮ್ಮ ಹೇಳಿಕೆಗಳನ್ನು ದೃಢೀಕರಿಸಲು ತಮ್ಮ ಬಳಿ ಯಾವುದೇ ಪುರಾವೆಗಳು ಅಥವಾ ದಾಖಲೆಗಳು ಇಲ್ಲ ಎಂದು ಒಪ್ಪಿಕೊಳ್ಳಲೇ ಬೇಕಾಯಿತು.



ಈ ಮಾನನಷ್ಟ ಪ್ರಕರಣ ಆರು ವರ್ಷಗಳಿಂದ ನಡೆಯುತ್ತಿದೆ ಎಂದು ನೆನಪಿಸಿರುವ ಶ್ರೀಮತಿ ಟೀಚರ್, ಸಾರ್ವಜನಿಕ ಚಟುವಟಿಕೆಗಳಲ್ಲಿ ತೊಡಗಿರುವ ಮಹಿಳೆಯರನ್ನು, ವಿಶೇಷವಾಗಿ ಎಡಪಂಥೀಯ ಚಳುವಳಿಗಳೊಂದಿಗೆ ಸಂಬಂಧ ಹೊಂದಿರುವವರನ್ನು ಸುಳ್ಳು ಕಥೆಗಳು ಮತ್ತು ಆಧಾರರಹಿತ ಆರೋಪಗಳ ಮೂಲಕ ನಿರಂತರವಾಗಿ ದುರುದ್ದೇಶಪೂರಿತ ದಾಳಿಗಳಿಗೆ ಗುರಿಪಡಿಸಲಾಗುತ್ತಿದೆ ಎಂದು ಹೇಳಿದರು. ಈ ದಾಳಿಗಳು ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಕೊಡುಗೆಗಳನ್ನು ನೀಡದಂತೆ ತಡೆಯುವ ಉದ್ದೇಶಪೂರ್ವಕ ಪ್ರಯತ್ನಗಳ ಒಂದು ಭಾಗವಾಗಿದ್ದು, ಈ ರೀತಿಯ ದುರ್ನಡತೆಗಳನ್ನು ಸಹಿಸಬಾರದು ಎಂದು ಹೇಳಿದ್ದಾರೆ.

ಲಾಭ, ಅತಿಲಾಭ, ಆಕ್ರಮಣ, ಯುದ್ಧ, ತೆರಿಗೆ ಬ್ರಿಟಿಷ್ ವಿಶ್ವಾಕ್ರಮಣದ ಸಾಧನವಾಗಿ ಪ್ರಜಾಪ್ರಭುತ್ವದ ಬಜೆಟ್.....

ಪುಟ 2 ರಿಂದ

ತೆರುವವರು ದುಡಿಯುವ ಜನರು.

ವಸ್ತುಗಳ ವ್ಯಾಪಾರ, ಅವುಗಳ ಆಮದು ರಫ್ತುಗಳಲ್ಲಿ ದೊಡ್ಡ ಪ್ರಮಾಣವನ್ನು ಕೈಗಾರಿಕೆ ಮೊದಲಾದ ಉತ್ಪಾದನೆಗಳಿಗಾಗಿ ಅಂತಹ ಉದ್ಯಮದ ಮಾಲೀಕರು ಅಥವಾ ಕಂಪನಿಗಳು ಕೊಳ್ಳುತ್ತವೆ. ಆದ್ದರಿಂದ ಕಂಪನಿಗಳು, ಮಾಲಿಕರುಗಳು ಕೂಡಾ ಈ ತೆರಿಗೆ, ಸುಂಕಗಳನ್ನು ತೆರುವ ಮೂಲಕ ಅದರಿಂದ ಸರ್ಕಾರಕ್ಕೆ ಒದಗುವ ಆದಾಯದ ಗಣನೀಯ ಭಾಗ ಈ ವರ್ಗದಿಂದ ಬರುತ್ತದೆ ಎಂದು ಹೇಳುವುದುಂಟು. ಆದರೆ ತಮ್ಮ ಉತ್ಪಾದನೆಗೆ ತೆರಿಗೆ, ಸುಂಕ ಸಮೇತ ಕೊಳ್ಳುವ ಉತ್ಪಾದಕರು ಅವುಗಳನ್ನು ತಮ್ಮ ಸ್ವಂತ ವೆಚ್ಚದಿಂದ ನೀಡುವುದಿಲ್ಲ. ಅವುಗಳನ್ನು ಉತ್ಪಾದನಾ ವೆಚ್ಚದ ಭಾಗವಾಗಿ ಆ ವಸ್ತುಗಳ ಬೆಲೆಯಲ್ಲಿ ಸೇರಿಸಿಯೇ ಮಾರುತ್ತಾರೆ. ಈ ಸಂದರ್ಭದಲ್ಲಿಯೂ ತೆರಿಗೆ ಸುಂಕಗಳನ್ನು ಅಂತಿಮವಾಗಿ ತೆರಬೇಕಾದವರು ಆ ವಸ್ತುಗಳ ಬಳಕೆದಾರರಾದ ದುಡಿಯುವ ಜನರೇ . ತೆರಿಗೆ ಮಾತ್ರವಲ್ಲದೆ ಬಜೆಟ್ ಗೆ ಇತರ ಕೆಲ ಆದಾಯದ ಮೂಲಗಳೂ ಇವೆ. ಉದಾಹರಣೆಗೆ ಭೂ ಕಂದಾಯ. ಬ್ರಿಟನ್ನಿನಲ್ಲಂತೂ ವೇಗವಾದ ಬಂಡವಾಳಶಾಹಿ ಬೆಳವಣಿಗೆಯ ದಿನಗಳಲ್ಲಿ ಭೂಮಿ ದೊಡ್ಡ ಬಂಡವಾಳಶಾಹಿ ಭೂಮಾಲಕರ ಕೈಸೇರಿತು. ಇವರು ಉಣ್ಣೆ ವಸ್ತುಗಳ ರಫ್ತು ಇತ್ಯಾದಿಗಳ ಮೂಲಕ ಬಹು ದೊಡ್ಡ ಲಾಭವನ್ನು ಗಳಿಸಿದರು. ಆದರೆ ಇವರು ಬಜೆಟ್ ನ ಭಾಗವಾಗಿ ತೆರುತ್ತಿದ್ದ ಕಂದಾಯ ದಶಕಗಟ್ಟಲೆ ಕಾಲದಲ್ಲಿ ಸ್ಥಗಿತವಾಗಿತ್ತು. ತೆರಿಗೆ ಸುಂಕಗಳಿಂದ ಬರುವ ಆದಾಯದ ಕೇವಲ ನಾಲ್ಕರಿಂದ ಐದನೇ ಭಾಗವಾಗಿತ್ತು.

ಉದಾಹರಣೆಗೆ ಫ್ರೆಂಚರಿಂದ ಅಮೆರಿಕ, ಭಾರತದ ಅವರ ವಸಾಹತುಗಳನ್ನು ವಶಪಡಿಸಿಕೊಂಡ ಯುದ್ಧದ 1755ರ ಸಮಯದಲ್ಲಿ ಸರ್ಕಾರದ ಆದಾಯ 6.75 ಮಿ. ಪೌಂಡ್ ಗಳಾದರೆ, ತೆರಿಗೆ ಮತ್ತು ಸುಂಕಗಳಿಂದ ಪಡೆಯುತ್ತಿದ್ದ ಆದಾಯ 5.44 ಮಿ. ಪೌಂಡ್. ಆದರೆ ಭೂ ಕಂದಾಯದ ಮೂಲದಿಂದ ಕೇವಲ ಒಂದು ಮಿ. ಪೌಂಡು. ಬಜೆಟ್ ಆದಾಯದ ಕೇವಲ ಶೇ. 14ರಷ್ಟು. ಉಳಿದುದೆಲ್ಲ ಸಾಮಾನ್ಯ ಜನರು ತೆರುವ ತೆರಿಗೆ. ಯುದ್ಧಗಳ ಸಂಖ್ಯೆ, ಪ್ರಮಾಣ, ವೆಚ್ಚ ಬೆಳೆದಂತೆಲ್ಲ, ಸಾಲದ ಗಾತ್ರ ಹೆಚ್ಚಿದಂತೆಲ್ಲ ತೆರಿಗೆಗಳ ಗಾತ್ರವೂ ಹೆಚ್ಚುತ್ತಾ ಹೋಯಿತು. 18ನೆಯ ಒಂದು ಶತಮಾನದ ಅವಧಿಯಲ್ಲಿ ಈ ತೆರಿಗೆ ಪ್ರಮಾಣ ಹತ್ತು ಪಟ್ಟು ಹೆಚ್ಚಿತು.

ಆದಾಯ ತೆರಿಗೆ ಅಥವಾ ಪ್ರತ್ಯಕ್ಷ ತೆರಿಗೆ

ಈಗ ನಾವು ಆದಾಯ ತೆರಿಗೆ ಎಂಬ ಬಾಬತ್ತಿನ ಬಗ್ಗೆ ಬಹಳ ಚರ್ಚೆ ನಡೆಯುವುದನ್ನು ಕೇಳಿದ್ದೇವೆ. ಹೆಚ್ಚು ಆದಾಯ ಪಡೆಯುವವರು ತಮ್ಮ ಆದಾಯದ ಪಾಲಿನಿಂದ ತೆರುವ ತೆರಿಗೆ ಅದು. ಇದನ್ನು ನೇರ ತೆರಿಗೆ ಅಥವಾ ಪ್ರತ್ಯಕ್ಷ ತೆರಿಗೆ ಎಂದು ಕರೆಯಲಾಗುತ್ತದೆ.

ಹೆಚ್ಚಿದ ದೂರ ವ್ಯಾಪಾರದಿಂದ, ಕೈಗಾರಿಕಾ ಉತ್ಪನ್ನಗಳಿಂದ ಬಜೆಟ್ ಪದ್ಧತಿ ಆರಂಭವಾಗುವ ಒಂದು ಶತಮಾನದ ಮೊದಲಿನಿಂದಲೂ ಲಾಭ, ಅತಿ ಲಾಭವನ್ನು ಗಳಿಸಿ ಬಂಡವಾಳದ ಶೇಖರಣೆ ಮಾಡಿ, ರಾಜಪ್ರಭುತ್ವಕ್ಕೇ ಸವಾಲು ಹಾಕುವಷ್ಟು ಶ್ರೀಮಂತರಾಗಿದ್ದರು. ನಂತರ ಮೇಲೆ ಪಟ್ಟಿ ಮಾಡಲಾದ 18ನೇ ಶತಮಾನದ ಯುದ್ಧಗಳಿಂದ ಈ ಬಂಡವಾಳಶಾಹಿ ವರ್ಗಕ್ಕೆ ಹತ್ತು ಹಲವು ಪಟ್ಟು ಲಾಭ, ಆದಾಯ ದೊರಕಿತು. ಹೀಗೆ ಯುದ್ಧಗಳ ಪ್ರಯೋಜನ ಪಡೆದವರೆಲ್ಲ ಈ ವರ್ಗದವರು. ಆದ್ದರಿಂದ ಈ ವರ್ಗದ ಮೇಲೆ ಆದಾಯ ತೆರಿಗೆಯ ಮೂಲಕ ಯುದ್ಧದ ವೆಚ್ಚವನ್ನು ಸಂಗ್ರಹಿಸುವುದು ಯಾರಿಗೇ ಆಗಲಿ ಸರಳವಾದ ಲೆಕ್ಕಾಚಾರ. ಆದರೆ 18ನೇ ಶತಮಾನದ ಇಡೀ ಸಮಯದಲ್ಲಿ ಆದಾಯ ತೆರಿಗೆ ಎಂಬ ಪದವೇ ಬ್ರಿಟಿಷ್ ಬಜೆಟ್ ಗಳಲ್ಲಿ ಕಾಣುವುದಿಲ್ಲ. ಆದಾಯ ತೆರಿಗೆಯನ್ನು ಮೊತ್ತ ಮೊದಲು ಹಾಕಿದ್ದು ಕೇವಲ 1799ರಲ್ಲಿ. ಅದಕ್ಕೆ ಮೊದಲಿನ ಏಳೆಂಟು ದೊಡ್ಡ ಯುದ್ಧಗಳು, ಅಮೆರಿಕದ ಸ್ವಾತಂತ್ರ್ಯ ಹೋರಾಟವನ್ನು ದಮನ ಮಾಡಿ ಅದನ್ನು ಉಳಿಸಿಕೊಳ್ಳುವ ಯುದ್ಧಕ್ಕೆ ಅವಶ್ಯವಾದ 97 ಮಿ. ಪೌಂಡ್ ವೆಚ್ಚವೂ ಸೇರಿದಂತೆ ಎಲ್ಲದರ ಭಾರವೂ ಕೂಡಾ ದುಡಿಯುವ ಜನರ ಮೇಲೆಯೇ ಹಾಕಲಾಗಿತ್ತು.

ಆದರೆ ಬಂಡವಾಳಶಾಹಿಗಳ ಒತ್ತಾಯದ ಮೇರೆಗೆ ಅದನ್ನು ಒಂದೆರಡು ವರ್ಷಗಳಲ್ಲಿಯೇ ಕಿತ್ತು ಹಾಕಲಾಯಿತು. ಮತ್ತೆ ಅದನ್ನು ನೆಪೋಲಿಯನ್ ನ ದಾಳಿಯನ್ನು ಎದುರಿಸುವ ಸಂದರ್ಭದ ಅಮೆರಿಕ ಯುದ್ಧಕ್ಕಿಂತ ಒಂಬತ್ತು ಪಟ್ಟು ವೆಚ್ಚ ಭರಿಸಲು ಮತ್ತೆ ಹಾಕಿದರು. ಆದರೆ ಮತ್ತೆ ಒತ್ತಡ, ಮತ್ತೆ ತೆಗೆಯಲಾಯಿತು. ಎರಡನೇ ಬಾರಿ ಅದನ್ನು ತೆಗೆದುಹಾಕುವಾಗ ಬಂಡವಾಳಶಾಹಿಗಳು ಈ ತೆರಿಗೆಯ ಯಾವ ಲೆಕ್ಕದ ದಾಖಲೆಗಳೂ ಕೂಡಾ ಸರ್ಕಾರದ ಬಳಿ ಉಳಿಯಬಾರದು, ಅವುಗಳನ್ನು ಸುಟ್ಟು ಹಾಕಬೇಕೆಂದು ಒತ್ತಾಯಿಸಿ ಯಶಸ್ವಿಯಾದರು. ಕೊನೆಗೆ 1842ರಲ್ಲಿ ಬಹು ವೆಚ್ಚದ ಆಕ್ರಮಣಗಳ ವೆಚ್ಚವನ್ನೆಲ್ಲ ಸಾಮಾನ್ಯ ಜನರು ಭರಿಸಿದ ಮೇಲೆ ಈ ತೆರಿಗೆಯ ಬಗ್ಗೆ ಒಂದು ಕಾಯಿದೆ ಅಂಗೀಕರಿಸಲಾಯಿತು. ಆ ವೇಳೆಗೆ ಈ ವರ್ಗದ ಆದಾಯ ಎಷ್ಟು ನೂರು ಪಟ್ಟು ಬೆಳೆದಿತ್ತೆಂಬ ಬಗ್ಗೆ ಕೇವಲ ಊಹಿಸಬಹುದು.

ಈ ಬಂಡವಾಳಶಾಹಿ ವರ್ಗ ಯುದ್ಧಗಳ ವಿಜಯದಿಂದ ತಾವು ಗಳಿಸಿದ ಬೃಹತ್ ಆದಾಯದಿಂದ ಇದೇ ಯುದ್ಧಗಳಿಗಾಗಿ ಸಾಲ ನೀಡಿ ಬಡ್ಡಿ ಪಡೆದರು. ಅವರ ಬಂಡವಾಳ ಮತ್ತಷ್ಟು ವೃದ್ಧಿಸಿತು. ಹೀಗೆ ಸಾಲ ನೀಡಿದವರು ಹೆಚ್ಚಾಗಿ ನೇರವಾಗಿ ಉದ್ದಿಮೆಗಳಲ್ಲಿ ಹೂಡಿ ಲಾಭ ಗಳಿಸಲಾಗದ ಸಣ್ಣ ಬಂಡವಾಳಗಾರರು. ದೊಡ್ಡ ಬಂಡವಾಳಗಾರರು ತಮ್ಮ ಬಂಡವಾಳವನ್ನು ಮತ್ತೆ ಹೂಡಿ ಮತ್ತಷ್ಟು ದೊಡ್ಡ ಪ್ರಮಾಣದ ಲಾಭ ಪಡೆದರು. ಅವರ ಬಂಡವಾಳ ಹಲವು ಪಟ್ಟು ವೃದ್ಧಿಸಿತು. ಆದರೆ ದುಡಿಯುವ ಜನರಿಂದ ಕಿತ್ತುಕೊಂಡ ತೆರಿಗೆಯಿಂದ ಯುದ್ಧಗಳ ವೆಚ್ಚವನ್ನು ಭರಿಸಿದ್ದಲ್ಲದೆ ಈ ವರ್ಗಕ್ಕೆ ನೀಡಿದ ಬಡ್ಡಿಯನ್ನೂ ನೀಡಲಾಯಿತು.

ಹೀಗೆ ಬಜೆಟ್ ಎಂಬುದು, ಅದರ ಮೂಲಕ ತೆರಿಗೆ ಸಂಗ್ರಹ ಎಂಬುದು ಬಂಡವಾಳ ಸಂಗ್ರಹದ ಮತ್ತೊಂದು ಸಾಧನವಾಯಿತು. ಶೇರು, ಡೆಪಾಸಿಟ್, ಬಾಂಡ್ ಕೊಳ್ಳುವುದು ಮುಂತಾದ ಸಾಧನಗಳು, ಬಂಡವಾಳಗಾರರ ಸ್ವಯಂ ತೀರ್ಮಾನದ ಆಧಾರದಲ್ಲಿ, ತಮಗೆ ಯಾವ ಸಾಧನದಿಂದ ಹೆಚ್ಚು ಆದಾಯ ದೊರಕುತ್ತದೆ ಎಂಬ ಲೆಕ್ಕಾಚಾರದ ಆಧಾರದ ಮೇಲೆ ಕೈಗೊಳ್ಳುವ ಸ್ವಾತಂತ್ರ್ಯ ಸಹಿತವಾಗಿ ಬಂಡವಾಳ ಸಂಗ್ರಹ ಆಗುತ್ತದೆ. ದುಡಿಯುವ ಜನರಿಂದ ಬಂಡವಾಳ ಸಂಗ್ರಹ ಮಾಡುವ ಬಜೆಟ್, ತೆರಿಗೆ ಎಂಬ ಸಾಧನ ಅವರಿಂದ ಅದನ್ನು ಒತ್ತಾಯ ಪೂರ್ವಕವಾಗಿ ಕಿತ್ತುಕೊಳ್ಳುವ ಸಾಧನ (ಕೊ ಎರ್ಸೀವ್ ಸಾಧನ).

ಆದರೆ ಇದಷ್ಟೇ ಅಲ್ಲ. ತೆರಿಗೆ ಹೆಚ್ಚಳದಿಂದ ಬೆಲೆ ಏರಿಕೆ, ಪೇಪರ್ ಹಣದ ಮುದ್ರಣದಿಂದ ಹಣದುಬ್ಬರ ವೇಗವಾದ ಬೆಲೆ ಏರಿಕೆ, ಬಳಕೆ ವಸ್ತುಗಳ ಕಳ್ಳ ವ್ಯಾಪಾರ ಇತ್ಯಾದಿ ಬೇರೆಯೇ ವಿಷಯ.

ಕರ್ನಾಟಕ: ಸೊರಗುತ್ತಿರುವ ಸಾರ್ವಜನಿಕ ಆರೋಗ್ಯ

ಗುರುರಾಜ ದೇಸಾಯಿ

> **ಅಪೌಷ್ಠಿಕತೆ, ರಕ್ತಹೀನತೆಯಿಂದ ಬಾಣಂತಿಯರ ಸಾಲು ಸಾಲು ಸಾವು ಒಂದು ಕಡೆಯಾದರೆ, ಮತ್ತೊಂದಡೆ ವೈದ್ಯರಿಲ್ಲದೆ ಸಾವುಗಳು ಸಂಭವಿಸುತ್ತಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಸೌಲಭ್ಯಗಳಿಲ್ಲದೆ ಪ್ರಾಥಮಿಕ ಚಿಕಿತ್ಸೆ ನೀಡಲಾಗದೆ ಹಲವು ಸಾವು ನೋವುಗಳು ಸಂಭವಿಸಿದ ಉದಾಹರಣೆಗಳಿವೆ. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮೂಲಸೌಲಭ್ಯಗಳಿಲ್ಲದ ಕಾರಣ, ಖಾಸಗಿ ಆಸ್ಪತ್ರೆಗಳತ್ತ ಜನ ಮುಖ ಮಾಡುತ್ತಿದ್ದಾರೆ. ಖಾಸಗಿ ಅಸ್ಪತ್ರೆಗಳು ಇದನ್ನೇ ಬಂಡವಾಳವಾಗಿಸಿಕೊಂಡು ಸುಲಿಗೆಗೆ ಇಳಿಯುತ್ತಿವೆ. ರಾಜ್ಯದಲ್ಲಿ ಬಹುತೇಕ ರಾಜಕಾರಣಿಗಳು ಖಾಸಗಿ ಆಸ್ಪತ್ರೆಗಳ ಮಾಲೀಕರಾಗಿದ್ದಾರೆ. ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಬೇಕಾಗಿರುವ ಶಾಸಕರುಗಳೆ ಖಾಸಗಿ ಆಸ್ಪತ್ರೆಗಳನ್ನು ತೆರೆದಿರುವಾಗ, ಅವರಿಂದ ಸರ್ಕಾರಿ ಆಸ್ಪತ್ರೆಗಳು ಅಭಿವೃದ್ಧಿಯಾಗಲು ಸಾಧ್ಯವೆ?**

ಆಸ್ಪತ್ರೆ ಎಂಬುದು ರೋಗಿಗಳಿಗೆ ಆರೋಗ್ಯ ರಕ್ಷಣೆ ನೀಡುವ ಜಾಗ. ಇಲ್ಲಿ ಸ್ವಲ್ಪ ಎಡವಟ್ಟಾದರೂ ಜೀವನ ಅಲ್ಲೋಲ ಕಲ್ಲೋಲವಾಗಿಬಿಡುತ್ತದೆ ಎಂಬುದಕ್ಕೆ ಕೋವಿಡ್–19 ನಮ್ಮ ಕಣ್ಮುಂದೆಯೆ ಇದೆ. ಕೋವಿಡ್ ಸಮಯದಲ್ಲಿ ನಮ್ಮ ರಾಜ್ಯ ಸೇರಿದಂತೆ ಇಡೀ ದೇಶ, ಜಗತ್ತು ಹೇಗೆಲ್ಲ ನರಳಾಡಿತು ಎಂಬುದನ್ನು ನೋಡಿದ್ದೇವೆ. ಆರೋಗ್ಯ ವ್ಯವಸ್ಥೆಯಲ್ಲಿ 'ರಾಜಕಾರಣದ' ಪ್ರವೇಶದಿಂದ ಸಾರ್ವಜನಿಕ ಆಸ್ಪತ್ರೆಗಳು ದುರ್ಬಲಗೊಳ್ಳುತ್ತಿವೆ. ಪರಿಣಾಮ ರೋಗಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಲೆ ಇದೆ.



ಅಪೌಷ್ಠಿಕತೆ, ರಕ್ತಹೀನತೆಯಿಂದ ಬಾಣಂತಿಯರ ಸಾಲು ಸಾಲು ಸಾವು ಒಂದು ಕಡೆಯಾದರೆ, ಮತ್ತೊಂದಡೆ ವೈದ್ಯರಿಲ್ಲದೆ ಸಾವುಗಳು ಸಂಭವಿಸುತ್ತಿವೆ. ಆಸ್ಪತ್ರೆಗಳಲ್ಲಿ ಸರಿಯಾದ ಸೌಲಭ್ಯಗಳಿಲ್ಲದೆ ಪ್ರಾಥಮಿಕ ಚಿಕಿತ್ಸೆ ನೀಡಲಾಗದೆ ಹಲವು ಸಾವು ನೋವುಗಳು ಸಂಭವಿಸಿದ ಉದಾಹರಣೆಗಳಿವೆ. "ಸರ್ಕಾರಿ ಆಸ್ಪತ್ರೆಗಳಿಗೆ ಬಡವರು ಮಾತ್ರ ಹೋಗುತ್ತಾರೆ, ಅವರು ಇದ್ದರೆಷ್ಟು ಬಿಟ್ಟರೆಷ್ಟು" ಎಂಬ ಭಾವನೆ ಆಳುವವರಲ್ಲಿದೆ. ಆ ಕಾರಣಕ್ಕಾಗಿಯೇ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ದುರ್ಬಲಗೊಳಿಸಲಾಗದೆ.

ರಾಜಕಾರಣಿಗಳ ಮಾಲೀಕತ್ವದಲ್ಲಿ ಆಸ್ಪತ್ರೆಗಳು

ರಾಜ್ಯದಲ್ಲಿ ಬಹುತೇಕ ಖಾಸಗಿ ಆಸ್ಪತ್ರೆಗಳ ಮಾಲೀಕರು ರಾಜಕಾರಣಿಗಳಾಗಿದ್ದಾರೆ. ಶಾಸಕರು, ಅವರ ಸಂಬಂಧಿಗಳು, ಇಲ್ಲವೆ ಅವರ ಹಿಂಬಾಲಕರು ಹೀಗೆ ಪಟ್ಟಿಮಾಡುತ್ತಾ ಹೋದರೆ ದೊಡ್ಡ ಸಂಖ್ಯೆಯಲ್ಲಿ ಸಿಗುತ್ತಾರೆ. ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಬೇಕಾಗಿರುವ ಶಾಸಕರುಗಳೆ ಖಾಸಗಿ ಆಸ್ಪತ್ರೆಗಳನ್ನು ತೆರೆದಿರುವಾಗ, ಅವರಿಂದ ಸಾರ್ವಜನಿಕ ಆಸ್ಪತ್ರೆಗಳು ಅಭಿವೃದ್ಧಿಯಾಗಲು ಸಾಧ್ಯವೆ? ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳಿಲ್ಲದಿರುವುದು ಖಾಸಗಿ ಆಸ್ಪತ್ರೆಗೆ ಸಂಜೀವಿನಿ ಇದ್ದಂತೆ. ಖಾಸಗಿ ಆಸ್ಪತ್ರೆಗಳ ಸಂಖ್ಯೆಗಳಲ್ಲೂ ಹೆಚ್ಚಳ ಆಗುತ್ತಿರುವುದು ಈ ಕಾರಣದಿಂದಾಗಿಯೇ.

ಸ್ವತಃ ಶಾಸಕರು, ಮಂತ್ರಿಗಳು ಸರ್ಕಾರಿ ಆಸ್ಪತ್ರೆಗಳ ಕಡೆ ಮುಖ ಮಾಡುವುದಿಲ್ಲ. ಇಲ್ಲಿಗೆ ಚಿಕಿತ್ಸೆಗೆಂದು ಬರುವವರು ಬಡವರು. ನಮ್ಮ ಆರೋಗ್ಯ ಚೆನ್ನಾಗಿರಬೇಕಾದರೆ, ನಮ್ಮ ಊರಿನ ಒಟ್ಟು ಆರೋಗ್ಯ ವ್ಯವಸ್ಥೆ ಉತ್ತಮವಾಗಿರಬೇಕು. ಅದೇ ರೀತಿ ರಾಜ್ಯ, ದೇಶದ್ದು ಕೂಡಾ. ಆದರೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲಾಗದೆ, ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡುವ ಧೋರಣೆ ನಮ್ಮನ್ನಾಳುವವರದ್ದು.

ಶೇ.70 ರಷ್ಟು ಸಿಬ್ಬಂದಿಗಳ ಕೊರತೆ

2023ರ ಅಂಕಿಅಂಶದ ಪ್ರಕಾರ ರಾಜ್ಯದಲ್ಲಿ 2844 ಸರ್ಕಾರಿ ಆಸ್ಪತ್ರೆಗಳಿವೆ. 16.993 ನೋಂದಾಯಿತ ಖಾಸಗಿ ಆಸ್ಪತ್ರೆಗಳಿವೆ. ರಾಜ್ಯದಲ್ಲಿರುವ ಜಿಲ್ಲಾ ಆಸ್ಪತ್ರೆಗಳಲ್ಲಿ ಮಾನವ ಸಂಪನ್ಮೂಲದ ಕೊರತೆಯ ಕಾರಣ ಗುಣಮಟ್ಟದ ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಂಜೂರಾದ ವೈದ್ಯರ ಸಂಖ್ಯೆ 2392. ಅವುಗಳಲ್ಲಿ 2052 ನೇಮಕಾತಿ ಆಗಿದ್ದರೆ, 340 ಹುದ್ದೆಗಳು ಖಾಲಿ ಇವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಶೇ. 14ರಷ್ಟು ವೈದ್ಯರ ಕೊರತೆಯನ್ನು ಎದುರಿಸುತ್ತಿವೆ. ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಿಶೇಷ ತಜ್ಞರು 451 ಜನ ಕಾರ್ಯನಿರ್ವಹಿಸಬೇಕಿತ್ತು. ಆದರೆ 273 ಜನ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ, 178 ಹುದ್ದೆಗಳು ಖಾಲಿ ಇವೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಇಲ್ಲಿ 728 ಜನ ವಿಶೇಷ ತಜ್ಞರು ಇರಬೇಕು. ಇದಕ್ಕೆ ಹೋಲಿಸಿದರೆ ಶೇ. 70ರಷ್ಟು ಸಿಬ್ಬಂದಿಗಳ ಕೊರತೆ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಫಾರ್ಮಾಸಿಸ್ಟ್ (ಔಷಧಿಕಾರ)ಗಳ ಮಂಜೂರಾದ ಹುದ್ದೆ 2273, ನೇಮಕಾತಿ ಆಗಿರುವುದು 1504. ಖಾಲಿ ಇರುವ ಹುದ್ದೆಗಳು 769. ಸಮುದಾಯ ಆರೋಗ್ಯ ಕೇಂದ್ರದಲ್ಲಿ 45 ಸರ್ಜನ್‌ಗಳು ಇರಬೇಕು. ಜನಸಂಖ್ಯೆಗೆ ಅನುಗುಣವಾಗಿ ನೋಡಿದರೆ 182 ಜನ ಸರ್ಜನ್ ಇರಬೇಕು. ಆದರೆ 16 ಜನ ಸರ್ಜನ್ ಮಾತ್ರ ಇದ್ದಾರೆ. ನಗರ ಪ್ರದೇಶದ ಆಸ್ಪತ್ರೆಗಳಲ್ಲೂ 2000ಕ್ಕೂ ಹೆಚ್ಚು ವೈದ್ಯರ ಕೊರತೆ ಇದೆ ಎಂದು ಅಂಕಿಅಂಶಗಳು ಹೇಳುತ್ತಿವೆ.

ಇನ್ನೊಂದೆಡೆ ಜನಸಂಖ್ಯೆಗೆ ಅನುಗುಣವಾಗಿ ಸಮುದಾಯ ಆರೋಗ್ಯ ಕೇಂದ್ರಗಳನ್ನು ಹೆಚ್ಚಿಸಿ ರೋಗಿಗಳ ಸಹಾಯಕ್ಕೆ ಗಮನಹರಿಸಬೇಕಿದೆ. ಕೇರಳದಲ್ಲಿ 4000 ಜನರಿಗೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಿದ್ದಾರೆ. ಕೋವಿಡ್–19 ನಿವಾರಣೆಯಲ್ಲಿ ಈ ಕೇಂದ್ರಗಳು ಮಹತ್ವದ ಪಾತ್ರ ವಹಿಸಿದ್ದವು. ಎಡರಂಗ ಸರ್ಕಾರದಲ್ಲಿ ಆರೋಗ್ಯ ಸಚಿವೆಯಾಗಿದ್ದ ಕೆ.ಕೆ.ಶೈಲಜಾ ಅವರಿಗೆ ಪ್ರತಿಷ್ಠಿತ ಯುರೋಪಿಯನ್ ಪ್ರಶಸ್ತಿ ಲಭಿಸಿದ್ದನ್ನು ನೆನಪಿಸಿಕೊಳ್ಳಬೇಕಿದೆ.

18,000 ಜನಸಂಖ್ಯೆಗೆ ಒಬ್ಬ ವೈದ್ಯರು!!

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಒಂದು ಸಾವಿರ ಜನರಿಗೆ ಒಬ್ಬರು ವೈದ್ಯರಿರಬೇಕು. ಆದರೆ ನಮ್ಮ ರಾಜ್ಯದಲ್ಲಿ 18,000 ಜನರಿಗೆ ಒಬ್ಬ ವೈದ್ಯರಿದ್ದಾರೆ. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮೂಲಸೌಲಭ್ಯಗಳು ಇಲ್ಲದ ಕಾರಣ, ಖಾಸಗಿ ಆಸ್ಪತ್ರೆಗಳತ್ತ ಜನ ಮುಖ ಮಾಡುತ್ತಿದ್ದಾರೆ. ಖಾಸಗಿ ಅಸ್ಪತ್ರೆಗಳು ಇದನ್ನೇ ಬಂಡವಾಳವಾಗಿಸಿಕೊಂಡು ಸುಲಿಗೆಗೆ ಇಳಿಯುತ್ತಿವೆ.

ಗಂಭೀರ ಖಾಯಿಲೆಗಳಾದ ಮೂತ್ರಪಿಂಡ ವೈಫಲ್ಯ, ಕ್ಯಾನ್ಸರ್, ಹೃದಯ ಸಮಸ್ಯೆಗಳಿಗೆ ಸ್ಥಳೀಯವಾಗಿ ಚಿಕಿತ್ಸೆ ಪಡೆಯುವುದು ಕಠಿಣವಾಗುತ್ತಿದೆ. ಕ್ಯಾನ್ಸರ್ ಚಿಕಿತ್ಸೆ ಪಡೆಯಲು ದೂರದ ಜಿಲ್ಲೆಗಳಿಂದ ಬೆಂಗಳೂರಿಗೆ ಬಂದು ತಿಂಗಳಾನುಗಟ್ಟಲೆ ಸಮಯ ವ್ಯಯಿಸಬೇಕಾದ ಸ್ಥಿತಿ ಇದೆ. 2021ರ ರಾಜ್ಯ ಚುನಾವಣಾ ಆಯೋಗದ ಮಾಹಿತಿಯ ಪ್ರಕಾರ ರಾಜ್ಯದಲ್ಲಿ 1192 ಜಿಲ್ಲಾ ಪಂಚಾಯತ್ ಕ್ಷೇತ್ರಗಳಿವೆ. ಇಲ್ಲಿ ಮಿನಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ತೆರೆಯುವ ಅಗತ್ಯವಿದೆ. ಸಕಲ ವೈದ್ಯಕೀಯ ವ್ಯವಸ್ಥೆಯನ್ನು ಒದಗಿಸಬೇಕಿದೆ. ಆಗ ಕ್ಷೇತ್ರದಲ್ಲಿ ಬದಲಾವಣೆ ಬೀಸಲಿದೆ. ಆರೋಗ್ಯವೇ ಭಾಗ್ಯ ಎಂದು ಕೇವಲ ಬಾಯಲ್ಲಿ ಹೇಳಿದರೆ ಸಾಕಾಗುವುದಿಲ್ಲ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ನೀಲನಕ್ಷೆಯನ್ನು ಸರ್ಕಾರಗಳು ರೂಪಿಸಬೇಕಿದೆ.

ಖಾಸಗಿ ಆಸ್ಪತ್ರೆಗಳಿಗೆ ಕಡಿವಾಣ ಇಲ್ಲವೆ?

ಕರ್ನಾಟಕದಲ್ಲಿನ ಸಾರ್ವಜನಿಕ ಆಸ್ಪತ್ರೆಗಳು ಕಡಿಮೆ ಮಾನವ ಶಕ್ತಿಯಿಂದಾಗಿ ಮತ್ತು ತಾಂತ್ರಿಕ ಬೆಂಬಲವಿಲ್ಲದೆ ಸೊರಗಿ ಹೋಗಿವೆ. ಕೋವಿಡ್–19 ಸಾರ್ವಜನಿಕ ಆಸ್ಪತ್ರೆ ವ್ಯವಸ್ಥೆಯ ಶೋಚನೀಯ ಸ್ಥಿತಿಯನ್ನು ಮೇಲ್ಮೈಗೆ ತಂದರೂ, ಸಾಂಕ್ರಾಮಿಕವಲ್ಲದ ಸಮಯಗಳಲ್ಲಿಯೂ ಸಹ, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಚಿಕಿತ್ಸೆ ದೊರೆಯುವುದು ಕಷ್ಟ.

ಕರ್ನಾಟಕದಲ್ಲಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿನ ವೆಚ್ಚಗಳ ನಡುವೆ ದೊಡ್ಡ ಪ್ರಮಾಣದ ಅಂತರವಿದೆ ಮತ್ತು ಜನರು ಚಿಕಿತ್ಸೆಗಳಿಗೆ ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳತ್ತ ವಾಲುತ್ತಿರುವ ಕರಾಳ ಚಿತ್ರಣ ಎದ್ದು ಕಾಣುತ್ತಿದೆ. ಖಾಸಗಿ ವಲಯದಲ್ಲಿ ಆಸ್ಪತ್ರೆ ದಾಖಲಾತಿಯ ಸರಾಸರಿ ವೆಚ್ಚ ಏರಿಕೆಯಾಗುತ್ತಿರುವುದಕ್ಕೆ ಕಡಿವಾಣ ಹಾಕಲು ಸರ್ಕಾರದ ಕಡೆಯಿಂದ ಸಾಧ್ಯವಾಗುತ್ತಲೇ ಇಲ್ಲ. "ಎಷ್ಟೆ ದುಡ್ಡು ಖರ್ಚಾದರೂ ಪರ್ವಾಗಿಲ್ಲ, ಕಾಯಿಲೆ ವಾಸಿ ಆದ್ರೆ ಸಾಕು" ಎಂದು ಹೇಳಿದರೆ ಸಾಕು, ಖಾಸಗಿ ಆಸ್ಪತ್ರೆಯವರು ಜನರ ರಕ್ತ ಹೀರಿಬಿಡುತ್ತಾರೆ. ಇತ್ತ ರೋಗಿಯೂ ಇಲ್ಲ, ಹಣವೂ ಉಳಿಯಲಿಲ್ಲ ಎಂಬ ವೇದನೆಯಲ್ಲಿ ಕುಟುಂಬದ ಸದಸ್ಯರು ಗೋಳಾಡುತ್ತಿರುವ ಬಹಳಷ್ಟು ಉದಾಹರಣೆಗಳಿವೆ. ಪೂರ್ಣ ಹಣ ನೀಡದೆ ಸತ್ತ ದೇಹವನ್ನು ನೀಡದ 'ಧನದಾಹಿ' ಖಾಸಗಿ ಆಸ್ಪತೆಗಳು ರಾಜ್ಯದಲ್ಲಿವೆ.

ಗ್ರಾಮೀಣ ಮತ್ತು ನಗರ ನಗರಗಳಲ್ಲಿ ಸಾರ್ವಜನಿಕ ಮತ್ತು ಖಾಸಗಿ ಆಸ್ಪತ್ರೆಗಳ ನಡುವಿನ ಆಸ್ಪತ್ರೆಗೆ ದಾಖಲಾಗುವ ಪ್ರಕರಣಗಳು ಸ್ವಲ್ಪಮಟ್ಟಿಗೆ ಒಂದೇ ರೀತಿಯ ಮಾದರಿಯನ್ನು ತೋರಿಸುತ್ತವೆ. ನಗರ ಪ್ರದೇಶಗಳಲ್ಲಿನ ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗುವವರ ಪ್ರಮಾಣವು 61.04 ರಷ್ಟಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ ಶೇ.35.3ರಷ್ಟಿದೆ. ಸಾರ್ವಜನಿಕ ಆಸ್ಪತ್ರೆಗಳಲ್ಲಿ ಕ್ರಮವಾಗಿ ಶೇ.51.9 ಮತ್ತು ಶೇ.45.7 ರಷ್ಟಿದೆ.

ದುಬಾರಿ ವೆಚ್ಚ

ಖಾಸಗಿ ಆಸ್ಪತ್ರೆಗಳಲ್ಲಿನ ಚಿಕಿತ್ಸಾ ವೆಚ್ಚಗಳು ಸಾರ್ವಜನಿಕ ಆಸ್ಪತ್ರೆಗಳಿಗಿಂತ 20 ಪಟ್ಟು ಹೆಚ್ಚು ದುಬಾರಿಯಾಗಿದೆ. ಸಾರ್ವಜನಿಕ ಆಸ್ಪತ್ರೆಯಲ್ಲಿ ಐಸಿಯುನಲ್ಲಿ ಒಂದು ದಿನದ ವಾಸ್ತವ್ಯಕ್ಕೆ 1,500 ರೂ. ವೆಚ್ಚವಾಗುತ್ತದೆ, ಆದರೆ ಖಾಸಗಿ ಆಸ್ಪತ್ರೆಯಲ್ಲಿ ಅದೇ ವಾಸ್ತವ್ಯಕ್ಕೆ 30,000 ರೂ. ವೆಚ್ಚವಾಗುತ್ತದೆ. ಖಾಸಗಿ ಆಸ್ಪತ್ರೆಯಲ್ಲಿ ತೆರೆದ ಹೃದಯ ಶಸ್ತ್ರಚಿಕಿತ್ಸೆಗೆ ಸುಮಾರು 2.8 ಲಕ್ಷ ರೂ. ವೆಚ್ಚವಾದರೆ, ಸಾರ್ವಜನಿಕ ಆಸ್ಪತ್ರೆಯಲ್ಲಿ 95,000 ರೂ.ಗಳಷ್ಟು ವೆಚ್ಚವಾಗಲಿದೆ.

ಅದೇ ರೀತಿ, ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಯಲ್ಲಿ 65,000 ರೂ. ವೆಚ್ಚವಾದರೆ ಖಾಸಗಿ ಆಸ್ಪತ್ರೆಯಲ್ಲಿ ನಿಖರವಾಗಿ ನಾಲ್ಕರಿಂದ ಐದು ಪಟ್ಟು ಹೆಚ್ಚು ವೆಚ್ಚವಾಗುತ್ತದೆ. ವೈದ್ಯಕೀಯ ಚಿಕಿತ್ಸೆಗಳು ಮತ್ತು ಹಾಸಿಗೆ ವೆಚ್ಚವನ್ನು ಹೊರತುಪಡಿಸಿ, ರೋಗ ನಿರ್ಣಯ ಪರೀಕ್ಷೆಗಳು, ವೈದ್ಯರ ಶುಲ್ಕಗಳು, ಪ್ಯಾಕೇಜ್ ಘಟಕಗಳು, ಔಷಧಿಗಳು ಇತ್ಯಾದಿಗಳಂತಹ ಅಂಶಗಳ ಹೆಸರಿನಲ್ಲಿ ಖಾಸಗಿ ಆಸ್ಪತ್ರೆಗಳು ಬಿಲ್ ಮಾಡುತ್ತವೆ.

ಹತ್ತರಿಂದ ನೂರು ಪಟ್ಟು ಹೆಚ್ಚಿಗೆ ಬಿಲ್ ಪಡೆಯುವ ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸಲು ಸರ್ಕಾರ ಮುಂದಾಗಬೇಕಿದೆ. ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳ ಮೇಲೆ ವಿಧಿಸುವ ಮಿತಿ ಮೀರಿದ ಶುಲ್ಕ ಮತ್ತು ಶೋಷಣೆ ತಡೆಗೆ ನೀತಿರೂಪಿಸುವಂತೆ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ತಿಳಿಸಿದೆ. ಸುಪ್ರೀಂ ಕೋರ್ಟ್ ಆದೇಶ ಜಾರಿಗೆ ಬರಬೇಕಿದೆ.

ಅತ್ಯುತ್ತಮವಾದ ಸಾರ್ವಜನಿಕ ಆರೋಗ್ಯ ರಕ್ಷಣಾ ವ್ಯವಸ್ಥೆ ಹೊಂದಿರುವ ಕೇರಳ

ಭಾರತದ ಇತರ ರಾಜ್ಯಗಳು ಮತ್ತು ಇದೇ ರೀತಿಯ ಆರ್ಥಿಕ ಪರಿಸ್ಥಿತಿಗಳನ್ನು ಹೊಂದಿರುವ ದೇಶಗಳಿಗೆ ಹೋಲಿಸಿದರೆ ಕೇರಳದ ಸಾರ್ವಜನಿಕ ಆರೋಗ್ಯವು ಸುಧಾರಿಸಿದೆ. ಇದು ಯಶಸ್ವಿ ಆರೋಗ್ಯ–ಕೇಂದ್ರಿತ ನೀತಿಗಳ ದೀರ್ಘ ಇತಿಹಾಸವನ್ನು ಆಧರಿಸಿದೆ. ಕೇರಳದಲ್ಲಿ ಅಧಿಕಾರ ನಡೆಸುತ್ತಿರುವ ಎಡರಂಗ ಸರ್ಕಾರ ಸಾರ್ವಜನಿಕ ರಂಗವನ್ನು ಬಲಿಷ್ಠವಾಗಿ ಕಟ್ಟುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ.

ನಾವು ಅಭಿವೃದ್ಧಿಯ ಬಗ್ಗೆ ಯೋಚಿಸುವಾಗ, ನಾವು ಹೆಚ್ಚಾಗಿ ರಸ್ತೆಗಳು, ಕಟ್ಟಡಗಳು, ಮಾಲ್‌ಗಳು, ಐಟಿ ಕಂಪನಿಗಳು ಮತ್ತು ಕಾರ್ಖಾನೆಗಳನ್ನು ಚಿತ್ರಿಸಿಕೊಳ್ಳುತ್ತೇವೆ. ಆದಾಗ್ಯೂ, ಸಾಮಾಜಿಕ ಪ್ರಗತಿ, ಮಾನವ ಅಭಿವೃದ್ಧಿ ಅಥವಾ ಸಾಮಾಜಿಕ ಸಮಾನತೆಯ ಮೇಲಿನ ಚರ್ಚೆಗಳನ್ನು ವಿರಳವಾಗಿ ಕೇಂದ್ರೀಕರಿಸುತ್ತೇವೆ.


ಪುಟ 15 ಕ್ಕೆ

ವ್ಯವಸ್ಥೆ	ಹುದ್ದೆ	ಮಂಜೂರಾದ	ನಿಯುಕ್ತಿ ಯಾಗಿರುವ	ಖಾಲಿ	ಶೇ.
ಪ್ರಾ. ಆ. ಕೇಂ	ವೈದ್ಯ/ವೈದ್ಯಾಧಿಕಾರಿ	2392	2052	340	14%
ಸ. ಆ. ಕೇಂ.	ವಿಶೇಷ ತಜ್ಞರು	451 (728)	273	178	39%
PHC/CHC	ಫಾರ್ಮಾಸಿಸ್ಟ್	2273 (2314)	1504	769	33.8%
PHC/CHC	ನರ್ಸ್	5249	5617	-	-
ಸ. ಆ. ಕೇಂ.	ಸರ್ಜನ್	45(182)	16	29	64%

24 ನೇ ಸಿಪಿಐ(ಎಂ) ಮಹಾಧಿವೇಶನದತ್ತ

ಸಿಪಿಐ(ಎಂ)ನ 24 ನೇ ಮಹಾಧಿವೇಶನ ತಮಿಳುನಾಡಿನ ಮಧುರೈನಲ್ಲಿ ಎಪ್ರಿಲ್ 2ರಿಂದ 6ರ ವರೆಗೆ ನಡೆಯಲಿದೆ. ಇದಕ್ಕೆ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಈ ಸಂದರ್ಭದಲ್ಲಿ ಸಿಪಿಐ(ಎಂ)ನ ಇದುವರೆಗಿನ ಮಹಾಧಿವೇಶನಗಳ ಒಂದು ಹಿನ್ನೋಟದಲ್ಲಿ ಹಿಂದಿನ ಸಂಚಿಕೆಯಲ್ಲಿ ಸಿಪಿಐ(ಎಂ) ರಚನೆಗೊಂಡ 7ನೇ ಮಹಾಧಿವೇಶನದಿಂದ 14 ನೇ ಮಹಾಧಿವೇಶನದ ಕುರಿತು ಓದಿರುವಿರಿ.





15ನೇ ಮಹಾಧಿವೇಶನ, ಎಪ್ರಿಲ್ 3ರಿಂದ 8,1995, ಚಂಡೀಗಡ

ಸೋವಿಯೆತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದದ ಪತನದ ನಂತರದ ಜಾಗತಿಕ ಪರಿಸ್ಥಿತಿಯ ಬಗ್ಗೆ ಸಿಪಿಐ(ಎಂ) ನಡೆಸಿದ ವಿಶ್ಲೇಷಣೆಯು ಸರಿಯೆಂದು ಸಾಬೀತಾಗಿದೆ. ಏಕೆಂದರೆ ಬಂಡವಾಳಶಾಹಿ ಮತ್ತು ಮಾರುಕಟ್ಟೆ ಅರ್ಥವ್ಯವಸ್ಥೆಯು ಜನರನ್ನು ಸಂಪೂರ್ಣವಾಗಿ ವಿಫಲಗೊಳಿಸಿದೆ.

ಹಿಂದಿನ ಅವಧಿಯಲ್ಲಿ, ಮುತ್ತಿಗೆಗೊಳಗಾದ ಕ್ಯೂಬಾಗೆ ಸಿಪಿಐ(ಎಂ) 12,000 ಟನ್ ಆಹಾರ ಧಾನ್ಯಗಳು ಮತ್ತು ಔಷಧಿಗಳನ್ನು ಕಳುಹಿಸಿತ್ತು. ಸಮಾಜವಾದಿ ದೇಶಗಳು ಮತ್ತು ಮೂರನೇ ಜಗತ್ತಿನ ದೇಶಗಳ ಜನರೊಂದಿಗೆ ನಿಲ್ಲುವ ಅಗತ್ಯವನ್ನು ಪಕ್ಷದ ಮಹಾಧಿವೇಶನ ಒತ್ತಿಹೇಳಿತು.

ಆಂತರಿಕವಾಗಿ, ಕೋಮುವಾದದ ಬೆಳವಣಿಗೆಯೇ ದೊಡ್ಡ ಸವಾಲಾಗಿತ್ತು, ಇದಕ್ಕೆ ಬಾಬರಿ ಮಸೀದಿಯ ಧ್ವಂಸವೇ ಸಾಕ್ಷಿಯಾಗಿತ್ತು. ಸಿಪಿಐ(ಎಂ) ಈ ಶಕ್ತಿಗಳ ವಿರುದ್ಧ ದೀರ್ಘಕಾಲ ಹೋರಾಡಿ ಎಚ್ಚರಿಕೆ ನೀಡಿತ್ತು ಮತ್ತು ಕಾಂಗ್ರೆಸ್(ಐ)ನ ರಾಜಿ ಮನೋಭಾವವನ್ನು ಕಟುವಾಗಿ ಟೀಕಿಸಿತು.

ನರಸಿಂಹರಾವ್ ಸರ್ಕಾರದ ಆರ್ಥಿಕ ನೀತಿಗಳನ್ನು ಮಹಾಧಿವೇಶನ ತಿರಸ್ಕರಿಸಿತು, ಸಾರ್ವಭೌಮತ್ವದ ರಕ್ಷಣೆಯೊಂದಿಗೆ ಕಾರ್ಪೊರೇಟ್ ತೆರಿಗೆ ಏರಿಕೆ, ಭೂ ಸುಧಾರಣೆಗಳು ಮತ್ತು ಕೃಷಿಯಲ್ಲಿ ಹೆಚ್ಚಿನ ಹೂಡಿಕೆಯಂತಹ ಕ್ರಮಗಳ ಮೂಲಕ ಸರ್ವತೋಮುಖ ಅಭಿವೃದ್ಧಿಯನ್ನು ಉತ್ತೇಜಿಸುವ ಪರ್ಯಾಯವನ್ನು ಮುಂದಿಟ್ಟಿತು.

ವಿರೋಧ ಪಕ್ಷಗಳ ಸಮಯಸಾಧಕತೆಯನ್ನು, ವಿಶೇಷವಾಗಿ ಕೋಮುವಾದದ ವಿಷಯದಲ್ಲಿ ಗಮನಿಸುತ್ತಲೇ, ಬಿಜೆಪಿ ಮತ್ತು ಕಾಂಗ್ರೆಸ್(ಐ) ಅನ್ನು ಸೋಲಿಸಲು ಜಾತ್ಯತೀತ ಪಕ್ಷಗಳೊಂದಿಗೆ ತಿಳುವಳಿಕೆಯನ್ನು ಕಟ್ಟುವ ಅಗತ್ಯವನ್ನು ಮಹಾಧಿವೇಶನ ಒತ್ತಿಹೇಳಿತು.

ಮಹಾಧಿವೇಶನ 71 ಸದಸ್ಯರಿದ್ದ ಕೇಂದ್ರ ಸಮಿತಿಯನ್ನು ಆಯ್ಕೆಮಾಡಿತು, ಅದು 15 ಸದಸ್ಯರಿದ್ದ ಪೊಲಿಟ್‌ಬ್ಯೂರೋವನ್ನು ಆಯ್ಕೆ ಮಾಡಿತು ಮತ್ತು ಕಾಮ್ರೇಡ್ ಹರ್ಕಿಶನ್ ಸಿಂಗ್ ಸುರ್ಜೀತ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆಮಾಡಿತು.



16ನೇ ಮಹಾಧಿವೇಶನ, ಅಕ್ಟೋಬರ್ 11–18, 1998, ಕೊಲ್ಕತ

1998ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಸ್ವಲ್ಪ ಸಮಯದ ನಂತರ 16ನೇ ಮಹಾಧಿವೇಶನ ನಡೆಯಿತು. ಬಿಜೆಪಿಯ ಹಿಂದೆ ದೇಶದ ಮೇಲೆ ಒಂದು ಮತೀಯ ಪ್ರಭುತ್ವವನ್ನು ಹೇರಬಯಸುವ ಕೋಮುವಾದಿ–ಫ್ಯಾಸಿಸ್ಟ್ ಆರೆಸ್ಸೆಸ್ ನಿಂತಿದೆ,

ಪ್ರಭುತ್ವ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸುವ ಆರೆಸ್ಸೆಸ್ ನಡೆಗಳು ಮತ್ತು ದೇಶಾದ್ಯಂತ ಅಲ್ಪಸಂಖ್ಯಾತರ ಮೇಲೆ ದಾಳಿಗಳು, ಹಾಗೆಯೇ ಭಾರತದ ಪಾರಂಪರಿಕ ಅಲಿಪ್ತ ನೀತಿಯನ್ನು ಕಳಚಿ ಹಾಕುವುದು ಮತ್ತು ಪರಮಾಣು ಕುರುಡು ದೇಶಭಕ್ತಿಯನ್ನು ಆಶ್ರಯಿಸುವುದನ್ನು ಮಹಾಧಿವೇಶನ ಗಮನಿಸಿತು.

1996ರ ಚುನಾವಣೆಗಳ ನಂತರ ಸಂಯುಕ್ತರಂಗ ಸರ್ಕಾರದ ರಚನೆಯ ಸುತ್ತಲಿನ ರಾಜಕೀಯ ಬೆಳವಣಿಗೆಗಳನ್ನು ಮಹಾಧಿವೇಶನ ವಿಶ್ಲೇಷಿಸಿತು. ತನ್ನ ಸ್ವತಂತ್ರ ಚಟುವಟಿಕೆಯನ್ನು ಹೆಚ್ಚಿಸಬೇಕೆಂದು ನಿರ್ಧರಿಸುತ್ತಲೇ, ಜನಗಳಲ್ಲಿ ಬೆಳೆಯುತ್ತಿದ್ದ ಅಸಂತೃಪ್ತಿಯನ್ನು ಪ್ರಜಾಸತ್ತಾತ್ಮಕ ಮಾರ್ಗಗಳಲ್ಲಿ ಸಜ್ಜುಗೊಳಿಸಲು, ಸರ್ಕಾರವನ್ನು ಹೊರಗಿನಿಂದ ಸಿಪಿಐ(ಎಂ) ಬೆಂಬಲಿಸಿತ್ತು.

ಸರ್ಕಾರಗಳಲ್ಲಿ, ವಿಶೇಷವಾಗಿ ಕೇಂದ್ರದಲ್ಲಿ ಭಾಗವಹಿಸುವಿಕೆಯ ಪ್ರಶ್ನೆಯನ್ನು ಮಹಾಧಿವೇಶನ ಚರ್ಚಿಸಿತು ಮತ್ತು ಎಡಪಂಥೀಯರು ಸರ್ಕಾರದ ನೀತಿಗಳ ಮೇಲೆ ಪ್ರಭಾವ ಬೀರಲು ಸಾಕಷ್ಟು ಬಲವನ್ನು ಹೊಂದಿರದ ಪರಿಸ್ಥಿತಿಯಲ್ಲಿ ಭಾಗವಹಿಸಬಾರದು ಎಂಬ ನಿಲುವನ್ನು ಅನುಮೋದಿಸಿತು. ಕಾಂಗ್ರೆಸ್(ಐ) ಮತ್ತು ಬಿಜೆಪಿಗೆ ಮೂರನೇ ಪರ್ಯಾಯವನ್ನು ಬಿಂಬಿಸುವ ಅಗತ್ಯವನ್ನು ಕೂಡ ಅದು ಒತ್ತಿಹೇಳಿತು.

ಮಹಾಧಿವೇಶನ 67 ಸದಸ್ಯರಿದ್ದ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿತು, ಇದು 13 ಸದಸ್ಯರ ಪೊಲಿಟ್ ಬ್ಯೂರೋ ಮತ್ತು ಕಾಮ್ರೇಡ್ ಹರ್ಕಿಶನ್ ಸಿಂಗ್ ಸುರ್ಜೀತ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿತು.



17ನೇ ಮಹಾಧಿವೇಶನ, ಮಾರ್ಚ್ 19–24,2002, ಹೈದರಾಬಾದ್

ಸೆಪ್ಟೆಂಬರ್ 11, 2001ರ ದಾಳಿಗಳು ಮತ್ತು 'ಭಯೋತ್ಪಾದನೆಯ ವಿರುದ್ಧದ ಜಾಗತಿಕ ಯುದ್ಧ'ದ ಭಾಗವಾಗಿ ಅಫ್ಘಾನಿಸ್ತಾನದಲ್ಲಿ ಅಮೆರಿಕ ನಡೆಸಿದ ಅತಿಕ್ರಮಣದ ನಂತರದ ಅವಧಿಯಲ್ಲಿ 17ನೇ ಮಹಾಧಿವೇಶನ ನಡೆಯಿತು. ಬಿಜೆಪಿ ಸರ್ಕಾರವು ಅಮೆರಿಕದೊಂದಿಗೆ ಉತ್ಸಾಹದಿಂದ ಸಹಕರಿಸಿತ್ತು.


ಇದರ ಹಿಂದಿನ ವರ್ಷಗಳಲ್ಲಿ ಅಲ್ಪಸಂಖ್ಯಾತರ ಮೇಲೆ ಅಭೂತಪೂರ್ವ ದಾಳಿ ನಡೆದಿತ್ತು, ಅದರಲ್ಲಿ ಗುಜರಾತ್ ಗಲಭೆಗಳು ಪ್ರಭುತ್ವ ಯಂತ್ರದ ಸಹಾಯ ಮತ್ತು ಪ್ರೋತ್ಸಾಹ ಪಡೆದವು. ಸರ್ಕಾರದಲ್ಲಿರುವ ಬಿಜೆಪಿಯ ಸಹಾಯದಿಂದ ಆರ್‌ಎಸ್‌ಎಸ್ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಭುತ್ವ ವ್ಯವಸ್ಥೆಯನ್ನು ನುಸುಳಿತ್ತು.

ಬಿಜೆಪಿ ಸರ್ಕಾರವು ದೇಶವನ್ನು ವಿದೇಶಿ ಬಂಡವಾಳಕ್ಕೆ ವಿವೇಚನೆಯಿಲ್ಲದೆ ತೆರೆದಿಟ್ಟಿತು, ಇದು ಕಾರ್ಮಿಕ ವರ್ಗದ ಮೇಲೆ ತೀವ್ರ ದಾಳಿಗಳಿಗೆ ಕಾರಣವಾಯಿತು. ದಲಿತರು ಮತ್ತು ಆದಿವಾಸಿಗಳ ಸ್ಥಿತಿ ಹದಗೆಟ್ಟಿತು.

ಮಹಾಧಿವೇಶನ ಎಲ್ಲಾ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಬಿಜೆಪಿ–ಆರ್‌ಎಸ್‌ಎಸ್ ಕೂಟವನ್ನು ಪರಿಣಾಮಕಾರಿಯಾಗಿ ಎದುರಿಸಲು ಅನುವು ಮಾಡಲು ನಿರ್ಧರಿಸಿತು. ಬಿಜೆಪಿಯೇತರ, ಕಾಂಗ್ರೆಸ್ಸೇತರ ಶಕ್ತಿಗಳನ್ನು ಒಳಗೊಂಡ 'ಜನತಾರಂಗ' ರಚನೆಯನ್ನು ಅದು ಅನುಮೋದಿಸಿತು.

ಮಹಾಧಿವೇಶನ ಮೂರು ನಿರ್ಣಾಯಕ ಕಾರ್ಯಭಾರಗಳನ್ನು ನಿಗದಿಪಡಿಸಿತು – ಬಿಜೆಪಿ ನೇತೃತ್ವದ ಕೋಮುವಾದಿ ಕೂಟವನ್ನು ಪರಾಭವಗೊಳಿಸುವುದು, ಕೇಂದ್ರದಲ್ಲಿ ಜಾತ್ಯತೀತ ಸರ್ಕಾರದ ರಚನೆಯಾಗುವಂತೆ ನೋಡಿಕೊಳ್ಳುವುದು ಮತ್ತು ಲೋಕಸಭೆಯಲ್ಲಿ ಎಡಪಂಥದ ಬಲವನ್ನು ಹೆಚ್ಚಿಸುವುದು.

ಕಾಂಗ್ರೆಸ್ 79 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿತು. ಹೊಸ ಕೇಂದ್ರ ಸಮಿತಿಯು ಕಾಮ್ರೇಡ್ ಹರ್ಕಿಶನ್ ಸಿಂಗ್ ಸುರ್ಜೀತ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗುಳ್ಳ 17 ಸದಸ್ಯರ ಪೊಲಿಟ್ ಬ್ಯೂರೋವನ್ನು ಆಯ್ಕೆ ಮಾಡಿತು.



18ನೇ ಮಹಾಧಿವೇಶನ, ಎಪ್ರಿಲ್ 6–11, 2005, ನವದೆಹಲಿ

18ನೇ ಮಹಾಧಿವೇಶನ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ತೆಗೆದುಹಾಕಿದ ನಂತರ ನಡೆಯಿತು; ಹೀಗೆ ತೆಗೆದುಹಾಕುವಲ್ಲಿ ಪಕ್ಷ ಮತ್ತು ಎಡಪಕ್ಷಗಳು ರಾಷ್ಟ್ರೀಯವಾಗಿ ಪ್ರಮುಖ ಪಾತ್ರ ವಹಿಸಿದವು. 17ನೇ ಮಹಾಧಿವೇಶನ ತನ್ನ ಮೂರು ಕಾರ್ಯಭಾರಗಳನ್ನು ಸಾಧಿಸಿತು: ಬಿಜೆಪಿ ನೇತೃತ್ವದ ಕೋಮುವಾದಿ ಕೂಟವನ್ನು ಸೋಲಿಸುವುದು, ಕೇಂದ್ರದಲ್ಲಿ ಒಂದು ಜಾತ್ಯತೀತ ಸರ್ಕಾರವನ್ನು ಸ್ಥಾಪಿಸುವುದು ಮತ್ತು ⇨


⇨⇨ಲೋಕಸಭೆಯಲ್ಲಿ ಎಡಪಕ್ಷಗಳ ಬಲವನ್ನು ಹೆಚ್ಚಿಸುವುದು. ಎಡಪಕ್ಷಗಳು ಲೋಕಸಭೆಯಲ್ಲಿ ತಮ್ಮ ಅತ್ಯುನ್ನತ ಪ್ರಾತಿನಿಧ್ಯವನ್ನು ತಲುಪಿದವು ಮತ್ತು ಲಂಗುಲಗಾಮಿಲ್ಲದ ನವ ಉದಾರವಾದ ಮತ್ತು ಬಿಜೆಪಿ ಅಧಿಕಾರಕ್ಕೆ ಮರಳುವುದು ಇವೆರಡನ್ನೂ ವಿರೋಧಿಸುತ್ತಲೇ, ನೀತಿಗಳ ಮೇಲೆ ಎಚ್ಚರಿಕೆಯಿಂದ ಪ್ರಭಾವ ಬೀರುವ ಗುರಿಯನ್ನು ಹೊಂದಿದ್ದವು. ಇದರಿಂದಾಗಿ, ಸಿಪಿಐ(ಎಂ) ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವನ್ನು ಬೆಂಬಲಿಸಲು ನಿರ್ಧರಿಸಿತು.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಬೆಂಬಲಿಸಿದರೂ, ವಿವಿಧ ವಲಯಗಳಲ್ಲಿ ಖಾಸಗೀಕರಣ ಮತ್ತು ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಜಾರಿಗೆ ತರಲು ನಿರಾಕರಿಸುವಂತಹ ವಿಷಯಗಳ ಬಗ್ಗೆ ಅವರು ಭಿನ್ನಾಭಿಪ್ರಾಯ ಹೊಂದಿದ್ದವು.

ಮಹಾಧಿವೇಶನ ಮೂರನೇ ಪರ್ಯಾಯವನ್ನು ಸಾಕಾರಗೊಳಿಸಲು ಕರೆ ನೀಡಿತು, ಅದು ಎಡಪಕ್ಷಗಳು ರಾಷ್ಟ್ರೀಯವಾಗಿ ಬಲವನ್ನು ಪಡೆದಾಗ ಮಾತ್ರ ಕಾರ್ಯರೂಪಕ್ಕೆ ಬರುತ್ತದೆ ಎನ್ನುತ್ತ ಜಾತಿ ದಬ್ಬಾಳಿಕೆಯ ವಿರುದ್ಧ ಹೋರಾಟಗಳನ್ನು ಸಂಘಟಿಸಲು, ಲಿಂಗ ನ್ಯಾಯವನ್ನು ಪ್ರತಿಪಾದಿಸಲು, ಆದಿವಾಸಿಗಳ ಹಕ್ಕುಗಳನ್ನು ಬೆಂಬಲಿಸಲು ಮತ್ತು ಅಸ್ಪೃಶ್ಯತೆ, ಸಾಮಾಜಿಕವಾಗಿ ಪ್ರತಿಗಾಮಿ ಪದ್ಧತಿಗಳು ಮತ್ತು ಪಿತೃಪ್ರಾಧಾನ್ಯ ಮತ್ತು ಊಳಿಗಮಾನ್ಯ ಪದ್ಧತಿಗಳನ್ನು ಎದುರಿಸಲು ತನ್ನ ಎಲ್ಲಾ ಘಟಕಗಳಿಗೆ ನಿರ್ದೇಶನ ನೀಡಿತು.

ಪಕ್ಷದ ವಿವಿಧ ಹಂತಗಳಲ್ಲಿ ಪಕ್ಷದ ಮೇಲೆ ಪರಿಣಾಮ ಬೀರುವ ಅನ್ಯ ವರ್ಗ ಪ್ರವೃತ್ತಿಗಳನ್ನು ಎದುರಿಸಲು ಒಂದು ಸರಿಪಡಿಕೆ ಅಭಿಯಾನವನ್ನು ನಡೆಸಲು ಮಹಾಧಿವೇಶನ ನಿರ್ಧರಿಸಿತು.

'ಪಕ್ಷದ ಇತಿಹಾಸ'ದ ಮೊದಲ ಸಂಪುಟವನ್ನು ಮಹಾಧಿವೇಶನದಲ್ಲಿ ಬಿಡುಗಡೆ ಮಾಡಲಾಯಿತು, 85 ಸದಸ್ಯರ ಕೇಂದ್ರ ಸಮಿತಿಯನ್ನು ಮಹಾಧಿವೇಶನ ಆಯ್ಕೆ ಮಾಡಿತು, ಇದು 17 ಸದಸ್ಯರ ಪೊಲಿಟ್‌ಬ್ಯೂರೋವನ್ನು ಆಯ್ಕೆ ಮಾಡಿತು, ಕಾಮ್ರೇಡ್ ಪ್ರಕಾಶ್ ಕಾರಟ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿತು.



19ನೇ ಮಹಾಧಿವೇಶನ, ಮಾ.29-ಏಪ್ರಿಲ್2, 2008, ಕೊಯಮತ್ತೂರು

2008ರ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ 19ನೇ ಮಹಾಧಿವೇಶನ ನಡೆಯಿತು. ಅಮೆರಿಕ ತನ್ನ ಆರ್ಥಿಕ ಮತ್ತು ಮಿಲಿಟರಿ ಪ್ರಾಬಲ್ಯವನ್ನು ವಿಸ್ತರಿಸಲು ಪ್ರಯತ್ನಿಸುತ್ತಿದ್ದಂತೆ, ಪ್ರಪಂಚದಾದ್ಯಂತ ಪ್ರತಿರೋಧ ಹೆಚ್ಚಾಯಿತು. ಲ್ಯಾಟಿನ್ ಅಮೆರಿಕ ಈ ಹೋರಾಟಗಳಲ್ಲಿ ಮುಂಚೂಣಿಯಲ್ಲಿತ್ತು.

ಭಾರತದಲ್ಲಿ, ಸಿಪಿಐ(ಎಂ) ಮತ್ತು ಎಡಪಕ್ಷಗಳು ಅಮೆರಿಕದೊಂದಿಗೆ ಮೂಡಿಬರುತ್ತಿದ್ದ ಮೈತ್ರಿಯ, ವಿಶೇಷವಾಗಿ ಪರಮಾಣು ಒಪ್ಪಂದದ ವಿರುದ್ಧ ಹೋರಾಡಿದವು.

19ನೇ ಮಹಾಧಿವೇಶನ ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತಿರುವ ನವ ಉದಾರವಾದಿ ನೀತಿಗಳ ವಿರುದ್ಧದ ಹೋರಾಟಗಳನ್ನು ಚರ್ಚಿಸಿತು ಮತ್ತು ಈ ನೀತಿಗಳನ್ನು ಬದಲಾಯಿಸುವವರೆಗೆ ಕೃಷಿ ಬಿಕ್ಕಟ್ಟು, ಬೆಲೆ ಏರಿಕೆ ಮತ್ತು ನಿರುದ್ಯೋಗಕ್ಕೆ ಯಾವುದೇ ಪರಿಹಾರವಿಲ್ಲ ಎಂದು ಪ್ರತಿಪಾದಿಸಿತು. ಬಿಜೆಪಿ-ಆರ್‌ಎಸ್‌ಎಸ್ ಕೂಟದ ವಿರುದ್ಧ ಅವಿರತ ಹೋರಾಟಕ್ಕೆ ಅದು ಕರೆ ನೀಡಿತು.

ಪಕ್ಷದ ಸ್ವತಂತ್ರ ಬಲವನ್ನು ಹೆಚ್ಚಿಸುವ ಮತ್ತು ಎಡ ಐಕ್ಯತೆಯನ್ನು ಕಟ್ಟುವ ಕಾರ್ಯಭಾರದ ಮಹತ್ವವನ್ನು ಒತ್ತಿ ಹೇಳಿತು. ಅದು (ಕಾಂಗ್ರೆಸ್ ಮತ್ತು ಬಿಜೆಪಿಗೆ) ಮೂರನೇ ಪರ್ಯಾಯಕ್ಕಾಗಿ ಒಂದು ವೇದಿಕೆಯನ್ನು ಸಹ ಹಾಕಿಕೊಟ್ಟಿತು. ಈ ವೇದಿಕೆಯು ಜನಪರ ಆರ್ಥಿಕ ಕ್ರಮಗಳು, ಸಾಮಾಜಿಕ ಕಲ್ಯಾಣ ಕ್ರಮಗಳು ಮತ್ತು ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಒಳಗೊಂಡಿತ್ತು. ಈ ವೇದಿಕೆಯು ಯಾವುದೇ ರೀತಿಯ ರಾಜಿಯಿಲ್ಲದೆ ಕೋಮುವಾದಿ-ವಿರೋಧಿಯಾಗಿರುತ್ತದೆ ಎಂದು ಒತ್ತಿ ಹೇಳಲಾಯಿತು.

19ನೇ ಮಹಾಧಿವೇಶನವು 87 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿತು, ಅದು 15 ಸದಸ್ಯರ ಪೊಲಿಟ್‌ಬ್ಯೂರೋವನ್ನು ಆಯ್ಕೆ ಮಾಡಿತು. ಕಾಮ್ರೇಡ್ ಜ್ಯೋತಿ ಬಸು ಅವರ ಕೋರಿಕೆಯ ಮೇರೆಗೆ ಅವರನ್ನು ಬಿಡುಗಡೆ ಮಾಡಲಾಯಿತು ಮತ್ತು ಪೊಲಿಟ್‌ಬ್ಯೂರೋಗೆ ವಿಶೇಷ ಆಹ್ವಾನಿತರನ್ನಾಗಿ ಮಾಡಲಾಯಿತು. ಕಾಮ್ರೇಡ್ ಹರಿಕಿಶನ್ ಸಿಂಗ್ ಸುರ್ಜೀತ್ ಅವರನ್ನು ಸಹ ಬಿಡುಗಡೆ ಮಾಡಿ ಕೇಂದ್ರ ಸಮಿತಿಗೆ ವಿಶೇಷ ಆಹ್ವಾನಿತರನ್ನಾಗಿ ಮಾಡಲಾಯಿತು. ಕಾಮ್ರೇಡ್ ಪ್ರಕಾಶ ಕಾರಟ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಲಾಯಿತು.

20ನೇ ಮಹಾಧಿವೇಶನ, ಎಪ್ರಿಲ್ 4-9, 2012, ಕೊಹಿಕೋಡ್

20ನೇ ಮಹಾಧಿವೇಶನದ ಹಿಂದಿನ ವರ್ಷಗಳಲ್ಲಿ ಬಂಡವಾಳಶಾಹಿ ದೇಶಗಳು ಬಿಕ್ಕಟ್ಟನ್ನು ಎದುರಿಸುತ್ತಿದ್ದವು. ಪ್ರಪಂಚದಾದ್ಯಂತ ಜನರು ತಮ್ಮ ಹಕ್ಕುಗಳು ಮತ್ತು ಜೀವನೋಪಾಯಗಳನ್ನು ರಕ್ಷಿಸಿಕೊಳ್ಳಲು ಹೆಣಗಾಡುತ್ತಿದ್ದರು. ಟುನೀಶಿಯಾ ಮತ್ತು ಈಜಿಪ್ಟ್‌ನಲ್ಲಿನ ದಂಗೆಗಳು ಯುಎಸ್ ಪರವಾಗಿದ್ದ ಸರ್ವಾಧಿಕಾರಿ ಆಡಳಿತಗಳನ್ನು ಉರುಳಿಸಿದವು. ಆದಾಗ್ಯೂ, ಯುಎಸ್ ಮತ್ತು ಅದರ ಮಿತ್ರಪಕ್ಷಗಳು ಈ ದಂಗೆಗಳನ್ನು ಬೇರೆಡೆಗೆ ತಿರುಗಿಸಲು ಮತ್ತು ಅಪಹರಿಸಲು ತಂತ್ರಗಳನ್ನು ರೂಪಿಸಿದವು. ಲ್ಯಾಟಿನ್ ಅಮೆರಿಕಾದಲ್ಲಿ ಎಡಪಂಥೀಯರ ಮುನ್ನಡೆ ಮುಂದುವರಿಯುತ್ತಿತ್ತು.

ಭಾರತದಲ್ಲಿ, ಭಾರತ-ಯುಎಸ್ ಪರಮಾಣು ಒಪ್ಪಂದಕ್ಕೆ ಸಂಬಂಧಿಸಿದಂತೆ ಯುಪಿಎಗೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿತು. ಆದರೆ ಸರ್ಕಾರವು ಲಂಚ ಮತ್ತು ಪಕ್ಷಾಂತರಗಳನ್ನು



ಪ್ರೇರೇಪಿಸುವ ಮೂಲಕ ಬದುಕುಳಿಯಿತು. 2009ರ ಚುನಾವಣೆಯ ನಂತರ, ಉನ್ನತ ಮಟ್ಟದ ಭ್ರಷ್ಟಾಚಾರವು ಪ್ರವರ್ಧಮಾನಕ್ಕೆ ಬಂದಿದ್ದರೂ ಸಹ, ಯುಪಿಎ-2 ಸರ್ಕಾರವು ಹೂಡಿಕೆ ಹಿಂತೆಗೆತ ಮತ್ತು ಖಾಸಗೀಕರಣವನ್ನು ಮುಂದೊತ್ತಿತು. ಸರ್ಕಾರವು ಯುಎಸ್‌ನೊಂದಿಗೆ ನಿಕಟ ಸಂಬಂಧವನ್ನು ಏರ್ಪಡಿಸಿಕೊಂಡಿತು.

ಪಶ್ಚಿಮ ಬಂಗಾಳದಲ್ಲಿ 34 ವರ್ಷಗಳ ಅಧಿಕಾರದ ನಂತರ ಎಡರಂಗದ ಸರಕಾರಕ್ಕೆ ಸೋಲಾಯಿತು ಮತ್ತು ಪಕ್ಷವು ತೀವ್ರ ದಾಳಿಗೆ ಒಳಗಾಯಿತು, ಪಕ್ಷದ 570 ಸದಸ್ಯರು ಮತ್ತು ಬೆಂಬಲಿಗರ ಕೊಲೆಯಾಯಿತು.

ನವ-ಉದಾರವಾದಿ ನೀತಿಗಳು ಮತ್ತು ಕೋಮುವಾದದ ವಿರುದ್ಧ ಹೋರಾಡುತ್ತಾ ಪಕ್ಷದ ಸ್ವತಂತ್ರ ಪಾತ್ರ ಮತ್ತು ಚಟುವಟಿಕೆಗಳನ್ನು ಹೇಗೆ ಹೆಚ್ಚಿಸುವುದು ಎಂಬುದರ ಕುರಿತು ಮಹಾಧಿವೇಶನ ಚರ್ಚಿಸಿತು. ಕಾಂಗ್ರೆಸ್ ಮತ್ತು ಯುಪಿಎ ಸರ್ಕಾರವನ್ನು ಸೋಲಿಸಲು ಮತ್ತು ಬಿಜೆಪಿಯನ್ನು ಏಕಾಂಗಿಯಾಗಿಸಲು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯಕ್ಕೆ ಅದು ಕರೆ ನೀಡಿತು.

ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಕುರಿತು ನಿರ್ಣಯವನ್ನು ಮಹಾಧಿವೇಶನವು ಚರ್ಚಿಸಿತು. ಇದರಲ್ಲಿ ಸಮಾಜವಾದದ ಕಡೆಗೆ ಪರಿವರ್ತನೆಯಲ್ಲಿ ಕಮ್ಯುನಿಸ್ಟರು ಮತ್ತು ಕಾರ್ಮಿಕ ವರ್ಗದ ಕಾರ್ಯಭಾರವನ್ನು ಎತ್ತಿ ತೋರಲಾಯಿತು.

ಪಕ್ಷದ ಸಂವಿಧಾನವನ್ನು ತಿದ್ದುಪಡಿ ಮಾಡಿ, ಪ್ರಧಾನ ಕಾರ್ಯದರ್ಶಿ ಮತ್ತು ಸ್ಥಳೀಯ ಸಮಿತಿ ಮಟ್ಟದವರೆಗೆ ಕಾರ್ಯದರ್ಶಿಗಳ ಅವಧಿಯನ್ನು ಮೂರು ಅವಧಿಗಳಿಗೆ ಸೀಮಿತಗೊಳಿಸಲಾಯಿತು.

89 ಸದಸ್ಯರನ್ನು ಒಳಗೊಂಡ ಹೊಸ ಕೇಂದ್ರ ಸಮಿತಿಯನ್ನು (ಎರಡು ಖಾಲಿ ಹುದ್ದೆಗಳೊಂದಿಗೆ) ಆಯ್ಕೆ ಮಾಡಲಾಯಿತು ಮತ್ತು ಕಾಮ್ರೇಡ್ ಪ್ರಕಾಶ್ ಕಾರಟ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಮರು ಆಯ್ಕೆ ಮಾಡಲಾಯಿತು. ಹೊಸ ಕೇಂದ್ರ ಸಮಿತಿ 15 ಸದಸ್ಯರ ಪೊಲಿಟ್‌ಬ್ಯೂರೋವನ್ನು ಆಯ್ಕೆ ಮಾಡಿತು.



21ನೇ ಮಹಾಧಿವೇಶನ, ಎಪ್ರಿಲ್ 14-19,2015, ವಿಶಾಖಪಟ್ಟಣಂ

ದೇಶದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಸವಾಲುಗಳನ್ನು ಎದುರಿಸುತ್ತಿದ್ದಾಗ 21 ನೇ ಮಹಾಧಿವೇಶನ ನಡೆಯಿತು. 2014ರ ಲೋಕಸಭಾ ಚುನಾವಣೆಯಲ್ಲಿ, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಬಹುಮತವನ್ನು ಗಳಿಸಿತು. ಇದು ನವ-ಉದಾರವಾದಿ ದಾಳಿಯನ್ನು ಪ್ರಾರಂಭಿಸಿತು, ಅದು ಸಂಪನ್ಮೂಲಗಳನ್ನು ದೊಡ್ಡ ಕಾರ್ಪೋರೇಟ್‌ಗಳು ಮತ್ತು ವಿದೇಶಿ ಬಂಡವಾಳದತ್ತ ಆಕ್ರಮಣಕಾರಿಯಾಗಿ ತಿರುಗಿಸಿತು. ಅಲ್ಲದೆ, ಅದು ಕಾರ್ಮಿಕ ವರ್ಗ ಮತ್ತು ಅವರ ಹಕ್ಕುಗಳ ಮೇಲೆ ಕ್ರೂರ ದಾಳಿಯನ್ನು ಪ್ರಾರಂಭಿಸಿತು ಮತ್ತು ಹಿಂದುತ್ವ ಶಕ್ತಿಗಳು ತಮ್ಮ ಕೋಮುವಾದಿ ಕಾರ್ಯಸೂಚಿಯನ್ನು ಉತ್ತೇಜಿಸಲು ದಾರಿ ಮಾಡಿಕೊಟ್ಟಿತು. ಬಿಜೆಪಿ ಅಮೆರಿಕದ ಸಾಮ್ರಾಜ್ಯಶಾಹಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಗುರಿಯನ್ನು ಕೂಡ ಹೊಂದಿತ್ತು.

2014 ರ ಲೋಕಸಭಾ ಚುನಾವಣೆಗಳಲ್ಲಿ, ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ, ಸಿಪಿಐ(ಎಂ) ಮತ್ತು ಎಡಪಕ್ಷಗಳು ಹಿನ್ನಡೆಯನ್ನು ಅನುಭವಿಸಿದವು, ಅಲ್ಲಿ ಪಕ್ಷ ಮತ್ತು ಎಡಪಕ್ಷಗಳು ದಾಳಿಗಳನ್ನು ಎದುರಿಸಿದವು.

ಮಹಾಧಿವೇಶನ ಎರಡು ಪ್ರಮುಖ ನಿರ್ಣಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅಂಗೀಕರಿಸಿತು: ರಾಜಕೀಯ-ಕಾರ್ಯತಂತ್ರಾತ್ಮಕ ಮಾರ್ಗದ ವಿಮರ್ಶೆ ಮತ್ತು ರಾಜಕೀಯ ನಿರ್ಣಯ. ಮೊದಲನೆಯದು ಎಡ ಶಕ್ತಿಗಳು ತಮ್ಮ ಹೋರಾಟಗಳಲ್ಲಿ ಐಕ್ಯತೆಯನ್ನು ಬಲಪಡಿಸುವ ಮೂಲಕ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವನ್ನು ರಚಿಸುವ ಅಗತ್ಯವನ್ನು ಮತ್ತು ಇದನ್ನು ಚುನಾವಣಾ ತಂತ್ರಗಳ ಮೂಲಕ ಮಾತ್ರ ಸಾಧಿಸಲು ಸಾಧ್ಯವಿಲ್ಲ ಎಂದು ಒತ್ತಿ ಹೇಳಿತು, ಬದಲಾಗಿ, ಇದು ಸಿಪಿಐ(ಎಂ) ನ ಸ್ವತಂತ್ರ ಶಕ್ತಿ ಮತ್ತು ಹಸ್ತಕ್ಷೇಪ ಸಾಮರ್ಥ್ಯಗಳನ್ನು ಕ್ರೋಢೀಕರಿಸುವ ಅಗತ್ಯವಿದೆ ಎಂದು ಹೇಳಿತು.

ಇದಕ್ಕೆ ಅನುಗುಣವಾಗಿ,ಸ್ವಲ್ಪ ಸಮಯದ ನಂತರ ಕೋಲ್ಕತ್ತಾದಲ್ಲಿ ಒಂದು ಸಂಘಟನಾ ಪ್ಲೀನಮ್ ಅನ್ನು ಕರೆಯಲಾಯಿತು, ಅಲ್ಲಿ ಸಿಪಿಐ(ಎಂ) ಅನ್ನು ಸಾಮೂಹಿಕ ಮಾರ್ಗದ ಕ್ರಾಂತಿಕಾರಿ ಪಕ್ಷವಾಗಿ ಬಲಪಡಿಸಲು ನಿರ್ಧರಿಸಲಾಯಿತು.

ಮಹಾಧಿವೇಶನ ಭಾರತೀಯ ರಾಷ್ಟ್ರ ಮತ್ತು ಅದರ ಜನರ ಮೇಲಿನ 'ತ್ರಿಮೂರ್ತಿ' ದಾಳಿಗೆ, ಅಂದರೆ ನವ ಉದಾರವಾದಿ ನೀತಿಗಳು, ಕೋಮುವಾದಿ ದಾಳಿಗಳು ಮತ್ತು ಸಾಮಾಜಿಕ ದಬ್ಬಾಳಿಕೆಗೆ ತನ್ನ ಅಚಲ ವಿರೋಧವನ್ನು ಸಾರಿತು.

91 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತು, ಇದು 13 ಸದಸ್ಯರ ಪೊಲಿಟ್‌ಬ್ಯೂರೋ ಮತ್ತು ಸೀತಾರಾಮ್ ಯೆಚೂರಿ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿತು.

ಅಮೇರಿಕಾ ಸಾಮ್ರಾಜ್ಯ ಉಳಿಸಲು ಟ್ರಂಪ್–ಟೆಕ್ ದೈತ್ಯರ ಹೊಸ ಫಾರ್ಮುಲಾ...... ಪುಟ 16 ರಿಂದ


ಬುದ್ಧಿಮತ್ತೆ) ಮೂಲಕ ನಿಯಂತ್ರಿಸಿದ ಅಗ್ಗದ ಡ್ರೋನ್‌ಗಳು ಬಾಂಬರುಗಳನ್ನು ಮತ್ತು ದುಬಾರಿ ವಿಮಾನ–ವಿರೋಧಿ ಕ್ಷಿಪಣಿಗಳ ವಿರುದ್ಧ ಹೆಚ್ಚು ಪರಿಣಾಮಕಾರಿಯಾಗಿದ್ದವು. ಉಕ್ರೇನಿನ ಭೂಮಿ ಆಧಾರಿತ ಕೇಬಲ್/ಫೈಬರ್ ಮತ್ತು ವೈರ್‌ಲೆಸ್ ಸಂಪರ್ಕ ವ್ಯವಸ್ಥೆ ರಶ್ಯಾದ ದಾಳಿಯಲ್ಲಿ ಕುಸಿದು ಬಿದ್ದು, ಮಸ್ಕ್‌ನ ಬಾಹ್ಯಾಕಾಶ ಆಧಾರಿತ ಸಂಪರ್ಕ ವ್ಯವಸ್ಥೆಯನ್ನು ಸ್ಟಾರ್‌ಲಿಂಕ್ ಒದಗಿಸಿತು. ಉಪಗ್ರಹದಿಂದ ಪಡೆದ ಸ್ಥಳದ ಚಿತ್ರ, ಸ್ಥಳದ ಬಗ್ಗೆ ಇರುವ ಇತರ ಮುಕ್ತ ಮಾಹಿತಿ, ಡ್ರೋನ್ ಕಳಿಸಿದ ವಿಡಿಯೊ, ಯುದ್ಧಕ್ಷೇತ್ರದಿಂದ ಬಂದ ವರದಿಗಳು – ಇವೆಲ್ಲ ಮಾಹಿತಿ ಸಮಗ್ರೀಕರಿಸಿ ವಿಶ್ಲೇಷಿಸಿ ಡ್ರೋನ್ ದಾಳಿಯನ್ನು ಎತ್ತ ಕೇಂದ್ರೀಕರಿಸಬೇಕೆಂದು ಎಐ ಬಳಸಿ ಪಲಂಟಿರ್ (ಪೀಟರ್ ಥೀಲ್ ಕಂಪನಿ ತಯಾರಿಸಿದ ಸಾಫ್ಟ್‌ವೇರ್) ಟ್ಯಾಂಕ್–ವಿರೋಧಿ ಕ್ಷಿಪಣಿಗಳು, ತೋಪು ಮುಂತಾದ ಅಸ್ತ್ರಗಳನ್ನು ಗುರಿ ಇಟ್ಟದ್ದರಿಂದ ಉಕ್ರೇನ್ ಇಷ್ಟಾದರೂ ಪ್ರತಿರೋಧ ಒಡ್ಡಲು ಸಾಧ್ಯವಾಯಿತು ಎಂಬುದು ಮಸ್ಕ್ ಮತ್ತು ಇತರ ಟೆಕ್ ದೈತ್ಯರ ವಾದ. ಯು.ಎಸ್.ನ ಯಾವುದೇ ರಾಡಾರ್ ತಪ್ಪಿಸಿ ದಾಳಿಮಾಡಬಲ್ಲ ಎಫ್–35 ಫೈಟರ್ ಜೆಟ್ ಒಂದು ಅನಗತ್ಯ ದುಬಾರಿ ಕಳಪೆ ಬಿಳಿ ಆನೆ. ಅದರ ಉತ್ಪಾದನೆ ನಿಲ್ಲಿಸಬೇಕು ಎಂಬ ಮಸ್ಕ್ ಹೇಳಿಕೆ ಭಾರೀ ವಿವಾದಕ್ಕೆ ಕಾರಣವಾಯಿತು.

ಹೊಸ ಫಾರ್ಮುಲಾದ ಮುಖ್ಯ ಅಂಶಗಳು

ಭವಿಷ್ಯದ ಯುದ್ಧಗಳನ್ನು ಎಐ ನಿರ್ದೇಶಿತ (ಸೈನಿಕ ರಹಿತ) ಡ್ರೋನ್ ಸೈನ್ಯದ ಸ್ವಯಂ–ಚಾಲಿತ ಯುದ್ಧಗಳಾಗಿರುತ್ತವೆ. ಎಐ ಮತ್ತು ಡ್ರೋನ್ ತಂತ್ರಜ್ಞಾನಗಳಲ್ಲಿ ಪಾರಮ್ಯ ಪಡೆಯುವಲ್ಲಿ ಗಮನ ಕೇಂದ್ರೀಕರಿಸಬೇಕು. ಹಳೆಯ ಬಿಳಿ ಆನೆಗಳನ್ನು ತ್ಯಜಿಸಬೇಕು ಎಂಬುದು ಟೆಕ್ ದೈತ್ಯರ ವಾದ. ಈ ವಾದದಲ್ಲಿ ಕೆಲವು ಸತ್ಯಾಂಶಗಳಿವೆ ನಿಜ. ಆದರೆ ಜತೆಗೆ ತಮ್ಮ ಕ್ಷೇತ್ರದ ತಂತ್ರಜ್ಞಾನ ಬಳಸುವ ರಕ್ಷಣಾ ವ್ಯವಸ್ಥೆ ರೂಪಿಸಿ ತಮ್ಮ ವಹಿವಾಟು ಮತ್ತು ಲಾಭ ಹೆಚ್ಚಿಸುವ ತಂತ್ರವೂ ಅಡಗಿದೆ ಎಂಬುದೂ ಅಷ್ಟೇ ನಿಜ. ಉಕ್ರೇನ್ ಯುದ್ಧದಲ್ಲಿ ಡ್ರೋನ್‌ನ ವ್ಯಾಪಕ ಬಳಕೆ ಜತೆಗೆ ಸಾಂಪ್ರದಾಯಿಕ (ಉದಾ: ಸೂಪರ್ ಸಾನಿಕ್ ಯುದ್ಧ ವಿಮಾನಗಳು, ಕ್ಷಿಪಣಿಗಳು) ಯುದ್ಧೋಪಕರಣಗಳಲ್ಲಿ ಸಹ ರಶ್ಯಾದ ಪಾರಮ್ಯ ಕಂಡು ಬಂತು. ಅದೂ ಉಕ್ರೇನಿನ ಮತ್ತು ಅದರ ಹಿಂದಿದ್ದ ನಾಟೋ ಸೋಲಿಗೆ ಕಾರಣವಾಯಿತು ಎಂಬುದೂ ಅಷ್ಟೇ ನಿಜ. ಅದು ಏನೇ ಇದ್ದರೂ ಟ್ರಂಪ್ ಆಡಳಿತದ ಭವಿಷ್ಯದ ಯುದ್ಧದ ಕಾಣ್ಕೆ ಟೆಕ್ ದೈತ್ಯರ ಸಲಹೆಯಂತೆ ಇರಲಿದೆ ಮತ್ತು ಸಾಂಪ್ರದಾಯಿಕ ರಕ್ಷಣಾ ಉಪಕರಣಗಳಲ್ಲಿ ಕಡಿತ ಮಾಡಬಹುದು ಎನ್ನಲಾಗಿದೆ. ಅಥವಾ ಕನಿಷ್ಠ ಟೆಕ್ ದೈತ್ಯರಿಗೆ ರಕ್ಷಣಾ ಬಜೆಟ್‌ನ ದೊಡ್ಡ ಪಾಲಂತೂ ಸಿಗಲಿದೆ.

ಟ್ರಂಪ್ ಅವರ ರಶ್ಯಾದ ಜತೆ ಸಮಜಾಯಿಷಿ ಮಾಡುವ ನೀತಿ ಕೂಡಾ ಚೀನಾವನ್ನು ಮುಖ್ಯ ವಿರೋಧಿಯಾಗಿ ಕಾಣುವ ಮತ್ತು ಅದರ ಪ್ರಾಬಲ್ಯವನ್ನು ಅಡಗಿಸುವ ಟೆಕ್ ದೈತ್ಯರ ಆಧ್ಯತೆಯಿಂದ ಹೊರಡುವಂತೆ ಕಾಣುತ್ತದೆ. ಈ ಟೆಕ್ ದೈತ್ಯರ ಕ್ಷೇತ್ರವಾದ ಕ್ವಾಂಟಮ್ ಮುಂತಾದ ಹೊಸ ಕಂಪ್ಯೂಟರ್ ತಂತ್ರಜ್ಞಾನಗಳು, ವಿದ್ಯುತ್ ವಾಹನಗಳಿಗೆ ಸಂಬಂಧಿಸಿದ ಬ್ಯಾಟರಿ ಮುಂತಾದ ತಂತ್ರಜ್ಞಾನಗಳು ಮತ್ತು ಅದಕ್ಕೆ ಬೇಕಾದ ಅಪರೂಪದ ಲೋಹಗಳು (ಲೀಥಿಯಂ ಇತ್ಯಾದಿ), ಅತಿ ಸೂಕ್ಷ್ಮ ಸೆಮಿಕಂಡಕ್ಟರ್, 5ಜಿ, ಕೃತಕ ಬುದ್ಧಿಮತ್ತೆ ಮುಂತಾದ ಮುಂಚೂಣಿ ತಂತ್ರಜ್ಞಾನಗಳಲ್ಲಿ ಚೀನಾ ತೀವ್ರ ಮುನ್ನಡೆ ಸಾಧಿಸಿದ್ದು ಅದಕ್ಕೆ ಅಡೆತಡೆ ಒಡ್ಡುವ ಕ್ರಮಗಳನ್ನು ಟ್ರಂಪ್ ಆದ್ಯತೆಯದ್ದಾಗಿ ಕಾಣುವುದು ಸಹ ಇವರ ಪ್ರಭಾವದಿಂದಲೇ ಎಂಬಂತೆ ಕಾಣುತ್ತಿದೆ.

ಬಿಡೆನ್ ಅಧ್ಯಕ್ಷಗಿರಿಯಲ್ಲಿ ಸಹ ಚೀನಾಕ್ಕೆ ಅತಿ ಸೂಕ್ಷ್ಮ ಸೆಮಿಕಂಡಕ್ಟರ್ ತಂತ್ರಜ್ಞಾನಗಳ ರಫ್ತಿನ ಮೇಲೆ ಕಟುವಾದ ನಿರ್ಬಂಧ ಹೇರಲಾಗಿತ್ತು. ವ್ಯೂಹಾತ್ಮಕ ಆದ್ಯತೆಯ ಅತಿ ಸೂಕ್ಷ್ಮ ಸೆಮಿಕಂಡಕ್ಟರ್ ಉತ್ಪಾದನೆಯನ್ನು ಯು.ಎಸ್.ಗೆ ವಾಪಸು ತರಲು 52 ಶತಕೋಟಿ ಡಾಲರು ಪ್ರೋತ್ಸಾಹಧನ ಮತ್ತು



ಚಿಪ್ಸ್ ಕಾನೂನು ತರಲಾಗಿತ್ತು. ಆದಾಗ್ಯೂ ಚೀನಾದ ಮುನ್ನಡೆಗೆ ತಡೆ ಮತ್ತು ಉತ್ಪಾದನೆಯನ್ನುಯು.ಎಸ್ ಗೆ ವಾಪಸು ತರುವ ಗುರಿ ಸಾಧಿಸಲು ಸಾಧ್ಯವಾಗಿಲ್ಲ. ಹುವಾವೇ 7 ನ್ಯಾನೋ ಮೀಟರ್ ಚಿಪ್ ಬಳಸಿದ ಮೊಬೈಲ್ ಬಿಡುಗಡೆ ಮಾಡಿದೆ. ಎಐ ಗೆ ಬೇಕಾದ ಕ್ಷಮತೆಯ ಕಂಪ್ಯೂಟರ್ ಚಿಪ್ ಮೇಲೆ ನಿರ್ಬಂಧಿಸುವ ಮೂಲಕ ಚೀನಾದ ಎಐ ಕ್ಷೇತ್ರದ ಮುನ್ನಡೆ ತಡೆಯಬಹುದು ಎಂಬ ನಿರೀಕ್ಷೆಗೂ ಅತ್ಯಂತ ದಕ್ಷ, ಕಡಿಮೆ ಕ್ಷಮತೆಯ ಚಿಪ್ ಬಳಸುವ ಆದರೆ ಅಷ್ಟೇ ಪರಿಣಾಮಕಾರಿಯಾದ "ಡೀಪ್‌ಸೀಕ್"" ಬಿಡುಗಡೆಯ ಘೋಷಣೆ ತಣ್ಣೀರೆರಚಿದೆ.

ಈಗ ಟ್ರಂಪ್ ಆಡಳಿತ ಆಮದು ಸುಂಕದ ಬೆದರಿಕೆ ಮತ್ತು ಕಾರ್ಪೊರೆಟ್ ನಿಯಂತ್ರಣ ಬಳಸಿ ತೈವಾನ್‌ನ ಅತಿ ದೊಡ್ಡ ಮತ್ತು ಅತ್ಯಾಧುನಿಕ ಸೆಮಿಕಂಡಕ್ಟರ್ ಉತ್ಪಾದಕ ಟಿ.ಎಸ್.ಎಂ.ಸಿ ಯನ್ನು ಯು.ಎಸ್.ನಲ್ಲಿ ಫ್ಯಾಕ್ಟರಿ ಸ್ಥಾಪಿಸುವಂತೆ ಬಲವಂತ ಮಾಡುವ ಪ್ರಯತ್ನದಲ್ಲಿದೆ. ಎಐ ನಲ್ಲಿ ಅಗಾಧ ಬೆಳವಣಿಗೆ, ಡಾಟಾ ಸೆಂಟರ್ ಹಾರ್ಡ್‌ವೇರ್ ಮತ್ತು ಅವುಗಳಿಗೆ ಅಗ್ಗದ ವಿದ್ಯುತ್ ಪೂರೈಕೆಯ ಆಧಾರದಲ್ಲಿ ಯು.ಎಸ್. ಮತ್ತೆ ತಂತ್ರಜ್ಞಾನದ ಪ್ರಾಬಲ್ಯ ಸ್ಥಾಪಿಸಲು ಸಾಧ್ಯ. ಇದಕ್ಕೆ ಎಐ ಸುರಕ್ಷಿತತೆ, ನೈತಿಕತೆ, ಪರಿಸರ ಕಾಳಜಿಯ ಆಧಾರದ ಮೇಲೆ ಯಾವುದೇ ನಿರ್ಬಂಧಗಳಿರಬಾರದು. (ಇಂತಹ ನಿರ್ಬಂಧಗಳಲ್ಲಿ ಟ್ರಂಪ್‌ಗೆ ಮೊದಲೇ ನಂಬಿಕೆಯಿಲ್ಲ) ಎಂದು ಟೆಕ್ ದೈತ್ಯರು ಟ್ರಂಪ್ ಆಡಳಿತವನ್ನು ಒಪ್ಪಿಸಿದ್ದಾರೆ.

ಸರಕಾರದ ನಿರ್ವಹಣೆಯಲ್ಲೂ ಟೆಕ್ ಶತಕೋಟ್ಯಾಧಿಪತಿಗಳ "ಕಾರ್ಪೊರೆಟ್ ಮ್ಯಾನೇಜ್ ಮೆಂಟ್" ಹೈರ್–ಫೈರ್ ವಿಧಾನಗಳನ್ನು, ಎಐ ಬಳಕೆಯ ಮೂಲಕ ಭಾರಿ ದಕ್ಷತೆಯ ಹೆಚ್ಚಳ (ಅಂದರೆ ಸಿಬ್ಬಂದಿ ಕಡಿತ), "ಹಣ ಪೋಲು ಮಾಡುವ" ಶಿಕ್ಷಣ, ಆರೋಗ್ಯ ಮತ್ತಿತರ ಸಾಮಾಜಿಕ ಕಲ್ಯಾಣ ಸೇವೆಗಳ ಕಡಿತಕ್ಕೆ ಮುಂದಾಗಿದೆ. ಇದನ್ನು ಈ ದೈತ್ಯರಲ್ಲೊಬ್ಬರಾದ ಮಸ್ಕ್‌ನ ನೇರ ನಿಯಂತ್ರಣದಲ್ಲಿ ಮಾಡಲಾಗುತ್ತಿದೆ.

ರಶ್ಯಾ ಮುಂಚೂಣಿಯಲ್ಲಿರುವ ಕ್ಷೇತ್ರಗಳು ಇವರಿಗೆ ಆದ್ಯತೆಯವು ಅಲ್ಲ ಮಾತ್ರವಲ್ಲ, ರಶ್ಯಾದ ಜತೆ ಸಮಜಾಯಿಷಿ ನೀತಿಯ ಮೂಲಕ ಚೀನಾ–ರಶ್ಯಾ ವ್ಯೂಹಾತ್ಮಕ ನಿಕಟ ಸಂಬಂಧ ಕಡಿತ ಸಾಧಿಸಿ ಚೀನಾವನ್ನು ದುರ್ಬಲಗೊಳಿಸಿ ಹಣಿಯಬಹುದು ಎಂಬ ಲೆಕ್ಕಾಚಾರವಿದೆ. ಇದಕ್ಕಾಗಿ ಯುರೋ ಕೂಟದ ಜತೆ ಮೈತ್ರಿ ಕಡಿತಕ್ಕೂ ತಯಾರಾಗುವ ನೀತಿ ಇವರದು. ಮಾತ್ರವಲ್ಲ ಏಕಸ್ವಾಮ್ಯ ಕಾನೂನು ಮತ್ತು ನೀತಿ ಉಲ್ಲಂಘಿಸಿರುವ ಆರೋಪದ ಮೇಲೆ ಈ ಟೆಕ್ ದೈತ್ಯರ ಮೇಲೆ ಯೂರೋ ಕೂಟ ವಿಧಿಸಿರುವ ಭಾರೀ ದಂಡ ಮತ್ತು ನಿರ್ಬಂಧಗಳ ಕಾರಣದಿಂದಲೂ ಯುರೋ ಕೂಟದ ಮೇಲೆ ಇವು ಆಕ್ರಾಮಕ ನೀತಿಗೆ ಉತ್ತೇಜನ ನೀಡುತ್ತಿವೆ.

ಟ್ರಂಪ್ ಆಡಳಿತದ "ಕ್ರಿಪ್ಟೊ ಕರೆನ್ಸಿ ಸೊವೆರಿನ್ ಫಂಡ್" ಘೋಷಣೆಯ ಹಿಂದೆನೂ ಟೆಕ್ ದೈತ್ಯರ ಕುಮ್ಮಕ್ಕು ಇದ್ದಂತಿದೆ. ಈ ಟೆಕ್ ದೈತ್ಯ ಶತಕೋಟ್ಯಾಧಿಪತಿಗಳಲ್ಲಿ ಹೆಚ್ಚಿನವರು ತಮ್ಮ ಆದಾಯದ ದೊಡ್ಡ ಭಾಗವನ್ನು ಕ್ರಿಪ್ಟೊ ಕರೆನ್ಸಿಯಲ್ಲಿ ಇಟ್ಟಿದ್ದಾರೆ.

ಇದರರ್ಥ ಟೆಕ್ ದೈತ್ಯ ಬಿಟ್ಟರೆ ಇತರ ವಿಭಾಗಗಳ ಅಥವಾ ಅಂಶಗಳ ಪಾತ್ರ ಟ್ರಂಪ್ ಹೊಸ ಫಾರ್ಮುಲಾದಲ್ಲಿ ಇಲ್ಲವೆಂದಲ್ಲ. ಟೆಕ್ ದೈತ್ಯರು ನಿರ್ದೇಶಿಸುತ್ತಿದ್ದಾರೆ ಅಥವಾ ಕನಿಷ್ಠ ಪ್ರಧಾನ ಪಾತ್ರ ವಹಿಸುತ್ತಿರುವಂತೆ ಕಾಣುತ್ತಿದೆ.

ಹೊಸ ಫಾರ್ಮುಲಾ ಗೆಲ್ಲಬಹುದೇ?

ಟ್ರಂಪ್ ಆಡಳಿತ, 1990ರ ದಶಕದಲ್ಲಿ ಆರಂಭವಾದ ಯು.ಎಸ್. ಸಾಮ್ರಾಜ್ಯದ ಏಕಧ್ರುವೀಯ ಯುಗ ಮುಗಿದಿದೆ ಎಂದು ಹಿಂದಿನ ಯಾವ ಆಡಳಿತಕ್ಕೆ ಹೋಲಿಸಿದರೂ ಸ್ಪಷ್ಟವಾಗಿ ಗುರುತಿಸಿದೆ. ಹೊಸ ಬಹುಧ್ರುವೀಯ ಜಗತ್ತನ್ನು ಒಪ್ಪಿಕೊಳ್ಳಲು ತಯಾರಿಲ್ಲದ ಅದು, ಬರಿಯ ಮಿಲಿಟರಿ ಬಲದಿಂದ ತನ್ನ ಅಧಿಪತ್ಯ ಉಳಿಸಿಕೊಳ್ಳಲು ಸಾಧ್ಯವಿಲ್ಲವೆಂದೂ ಗುರುತಿಸಿದ ಅದು, ತನ್ನ ಆರ್ಥಿಕ ಮತ್ತು ತಂತ್ರಜ್ಞಾನದ ಪ್ರಾಬಲ್ಯವನ್ನು ಮತ್ತೆ ಪಡೆಯಲು ಹತಾಶ ಪ್ರಯತ್ನ ನಡೆಸಿದೆ. ಮಿಲಿಟರಿ ಬಲದ ಬದಲು ಆಮದು ಸುಂಕ ಮತ್ತಿತರ 'ಆರ್ಥಿಕ ಯುದ್ಧ'ದ ತಂತ್ರ ಬಳಸಲು ಬಯಸಿದೆ. ಇಡೀ ಜಗತ್ತಿನ ಮೇಲೆ ಪ್ರಾಬಲ್ಯವನ್ನು ಸಾಧಿಸುವ ಬದಲು ಪಶ್ಚಿಮ ಗೋಳಾರ್ಧದ ಮೇಲೆ ಒತ್ತು ಕೊಡಬೇಕೆಂದಿದೆ. ಚೀನಾವನ್ನು ರಶ್ಯಾ ಮತ್ತು ಇತರ ದೇಶಗಳಿಂದ ಪ್ರತ್ಯೇಕಿಸಿ ಅದರ ವಿರುದ್ಧ ತೀವ್ರ ಶೀತ ಸಮರ ನಡೆಸಬೇಕೆಂದಿದೆ. ಇದಕ್ಕಾಗಿ ಹಿಂದಿನ ನೀತಿ–ಧೋರಣೆಗಳು ಮತ್ತು ತಾನೇ ಹುಟ್ಟಿಹಾಕಿದ ಜಾಗತಿಕ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹಿಂದೆ ಮುಂದೆ ನೋಡುತ್ತಿಲ್ಲ. ಇದಕ್ಕೆ ಬೇಕಾದ ಹೊಸ ಫಾರ್ಮುಲಾವನ್ನು ಟೆಕ್ ದೈತ್ಯರಿಂದ ಪಡೆಯುತ್ತಿರುವಂತೆ ಕಾಣುತ್ತಿದೆ.

ಈ ಹೊಸ ಟ್ರಂಪ್ ಫಾರ್ಮುಲಾ ಕೆಲಸ ಮಾಡಬಹುದೇ? ಆಮದು ಸುಂಕ ಮುಂತಾದ ಆರ್ಥಿಕ ಯುದ್ಧದ ನೀತಿಗಳ ಮತ್ತು ಒತ್ತಡಗಳ ಮೂಲಕ ಕೈಗಾರಿಕಾ ಉತ್ಪಾದನೆಯನ್ನು ಯು.ಎಸ್.ಗೆ ವಾಪಸು ತರುವುದು ಸುಲಭದ ಕೆಲಸವಲ್ಲ. ಇದಕ್ಕೆ ಬೇಕಾದ ಮೂಲಸೌಕರ್ಯ, ಮಾನವ ಸಂಪನ್ಮೂಲ ಸೇರಿದಂತೆ ಎಲ್ಲ ಸಂಪನ್ಮೂಲಗಳನ್ನು ಒದಗಿಸುವುದು ಸಾಕಷ್ಟು ದೀರ್ಘ ಸಮಯ ಮತ್ತು ತಾಳ್ಮೆಯ ಕೆಲಸ ಬೇಡುತ್ತದೆ. ಟೆಕ್ ದೈತ್ಯರ "ಹೊಸ ಸೇವೆ"ಯ ಉದ್ಯಮಗಳಲ್ಲಿ ಹೂಡಿದ ಬಂಡವಾಳಕ್ಕೆ ಸೂಪರ್ ಲಾಭ ಬರುತ್ತಿರುವಾಗ ಮತ್ತು ಶೇರುಗಳ ಮಾರುಕಟ್ಟೆ ಮೌಲ್ಯ ಭಾರೀ ಪ್ರಮಾಣದಲ್ಲಿ ಏರುತ್ತಿರುವಾಗ, ಬಂಡವಾಳಶಾಹಿ (ಎಷ್ಟೇ ಉತ್ತೇಜನ, ಒತ್ತಡವಿದ್ದರೂ) ಕಡಿಮೆ ಲಾಭದ ಕೈಗಾರಿಕಾ ಉತ್ಪಾದನೆಯಲ್ಲಿ ಹೂಡಿಕೆ ಮಾಡುತ್ತಾರೆ ಎಂದು ನಿರೀಕ್ಷಿಸುವುದೇ ಅವಾಸ್ತವ. ಹೀಗೆ ಕಾರ್ಮಿಕ ವರ್ಗಕ್ಕೆ "ಉತ್ತಮ ಕೈಗಾರಿಕಾ ಉದ್ಯೋಗ"ಗಳ ಭರವಸೆ ಹುಸಿಯಾಗಬಹುದು. ವಲಸಿಗರ ಕಾನೂನುಗಳಲ್ಲಿ ಮಾಡುತ್ತಿರುವ ಕಟು ಅರಾಜಕ ಬದಲಾವಣೆಗಳು ಅಗತ್ಯ ಕೌಶಲ್ಯ, ಪರಿಣತಿಯ ಕಾರ್ಮಿಕರ ತಂತ್ರಜ್ಞರ ಲಭ್ಯತೆಗೆ ತೊಡಕಾಗಬಹುದು. ಈಗಾಗಲೇ ಸರಕಾರಿ ನೌಕರರನ್ನು ಮಸ್ಕ್ ಅವರ ಡಿಒಜಿಇ ಹಿಗ್ಗಾಮುಗ್ಗಾ ವಜಾ ಮಾಡುತ್ತಿರುವುದರ ವಿರುದ್ಧ ತೀವ್ರ ಪ್ರತಿಭಟನೆಗಳು ನಡೆದಿವೆ. ಟೆಸ್ಲಾ ಕಾರುಗಳಿಗೆ ಬಹಿಷ್ಕಾರ, ಬೆಂಕಿಯ ಪ್ರಕರಣಗಳೂ ನಡೆದಿವೆ.

ಈ ನಡುವೆ ಟ್ರಂಪ್ ಆಮದು ಸುಂಕ ಯುದ್ಧಕ್ಕೆ ಉತ್ತರವಾಗಿ ಇತರ ದೊಡ್ಡ ದೇಶಗಳು, ಕೂಟಗಳು (ಕೆನಡಾ, ಚೀನಾ, ಯುರೋ ಕೂಟ, ಮೆಕ್ಸಿಕೊ) ಸಹ ಯು.ಎಸ್. ಮೇಲೆ ಆಮದು ಸುಂಕ ಅಸ್ತ್ರವನ್ನು ಬಳಸಿದರೆ ಒಂದು ಕಡೆ ಯು.ಎಸ್. ಜನತೆಗೆ ಎಲ್ಲ ಜೀವನಾವಶ್ಯಕ ವಸ್ತುಗಳ ಕೊರತೆ, ವಿಪರೀತ ಬೆಲೆ ಏರಿಕೆ ಆಗಬಹುದು. ಮುಂದುವರೆಯುತ್ತಿರುವ ನಿರುದ್ಯೋಗ, ಬೆಲೆಏರಿಕೆ ಸಾಮಾಜಿಕ ಆಸ್ಫೋಟಕ್ಕೆ ಕಾರಣವಾಗಬಹುದು. ಆಮದು ಸುಂಕ ಯುದ್ಧಕ್ಕೆ ಗುರಿಯಾದ ದೇಶಗಳಲ್ಲಿ ಯು.ಎಸ್. ಸರಕುಗಳ ಬಹಿಷ್ಕಾರ ಮುಂತಾದ ವಿದ್ಯಮಾನಗಳೂ ಕಂಡು ಬಂದಿವೆ. ರಶ್ಯಾ–ಚೀನಾ ನಿಕಟ ಸಂಬಂಧ ಒಡೆಯುವ ಟ್ರಂಪ್ ಕನಸು ನನಸಾಗುವ ಸಾಧ್ಯತೆ ಸಹ ಕಡಿಮೆ, ರಶ್ಯಾ–ಚೀನಾ ಆರ್ಥಿಕ–ಕೈಗಾರಿಕಾ–ಮಿಲಿಟರಿ ಶಕ್ತಿಗಳು ಪರಸ್ಪರ ಪೂರಕವಾಗಿದ್ದು ಮತ್ತು ಈಗಾಗಲೇ ಬೇರೂರಿದ್ದು ಟ್ರಂಪ್ ತಂತ್ರಗಳಿಗೆ ಪುಟಿನ್ ಮಾರು ಹೋಗಲಿಕ್ಕಿಲ್ಲ. ಟೆಕ್ ದೈತ್ಯರು ತಮಗೆ ಹೆಚ್ಚು ಪ್ರಯೋಜನಕಾರಿಯಾದ ಈ ಹೊಸ ಫಾರ್ಮುಲಾವನ್ನು ಉತ್ತೇಜಿಸುತ್ತಿದ್ದರೂ ಇದರಲ್ಲಿ ಸಾಕಷ್ಟು ವೈರುಧ್ಯಗಳು ಮತ್ತು ಕುರುಡು ನಂಬಿಕೆಗಳು ಇವೆ. ಆಳುವ ವರ್ಗದ ಇತರ ವಿಭಾಗಗಳು ಈ ಫಾರ್ಮುಲಾವನ್ನು ವಿರೋಧಿಸಬಹುದು. ಇದರಲ್ಲಿ ಯು.ಎಸ್. ಜನತೆಗೂ ಆಳುವ ವರ್ಗಕ್ಕೂ ತೀವ್ರ ಅಪಾಯ ಮತ್ತು ಅನಿಶ್ಚಿತ ಭವಿಷ್ಯದ ಸಾಧ್ಯತೆಯಿದೆ. ಮಾತ್ರವಲ್ಲ ಜಾಗತಿಕ ಆರ್ಥಿಕ ಕುಸಿತ, ಅರಾಜಕತೆಗಳ ತೀವ್ರ ಅಪಾಯವೂ ಇದೆ. ಯು.ಎಸ್. ಒಳಗೂ ಜಾಗತಿಕವಾಗಿಯೂ ಹೊಸ ಫಾರ್ಮುಲಾಗೆ ತೀವ್ರ ಪ್ರತಿರೋಧ ಕಂಡು ಬಂದಿದೆ.

ಸಿಪಿಐ(ಎಂ) ಅಖಿಲ ಭಾರತ 24ನೇ ಮಹಾಧಿವೇಶನ.... ಪುಟ 9 ರಿಂದ

ಐತಿಹಾಸಿಕ ಸಮ್ಮೇಳನ!

ಏಪ್ರಿಲ್ 2ರಂದು ಧ್ವಜಾರೋಹಣ ಸಮಾರಂಭದೊಂದಿಗೆ ಸಮ್ಮೇಳನವು ಅದ್ಧೂರಿಯಾಗಿ ಪ್ರಾರಂಭವಾಗುತ್ತದೆ. ಮಧ್ಯಾಹ್ನದವರೆಗೆ ಸಾರ್ವಜನಿಕ ಸಮಾವೇಶ ನಡೆಯಲಿದೆ. ಏಪ್ರಿಲ್ 3 ರಂದು ಸಂಜೆ ತಮುಕ್ಕಂನಲ್ಲಿ ಭವ್ಯ ಸೆಮಿನಾರ್ ಕಾರ್ಯಕ್ರಮ ನಡೆಯಲಿದ್ದು, ಕೇರಳ ಮತ್ತು ತಮಿಳುನಾಡು ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ. ಪ್ರದರ್ಶನಗಳು ಮತ್ತು ಕಲಾ ಪ್ರದರ್ಶನಗಳನ್ನು ತಮುಕ್ಕಂನಲ್ಲಿ 5 ದಿನಗಳವರೆಗೆ ಪ್ರದರ್ಶಿಸಲಾಗುತ್ತದೆ. ಏಪ್ರಿಲ್ 6ರಂದು, ಮಧುರೈನಲ್ಲಿ ಬೃಹತ್ ಕೆಂಪು ಸೇನೆಯ ರ್ಯಾಲಿಯನ್ನು ಸಿದ್ಧಪಡಿಸಲಾಗಿದೆ. ಅದೇ ದಿನ ಸಂಜೆ, ಮಸ್ತಾನಪಟ್ಟಿ ಬಳಿಯ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಲಿದ್ದು, ಲಕ್ಷಾಂತರ ಜನರು ಭಾಗವಹಿಸಲಿದ್ದಾರೆ. ತಮಿಳುನಾಡು ಮತ್ತು ದಕ್ಷಿಣ ರಾಜ್ಯಗಳ ಎಲ್ಲಾ ಜಿಲ್ಲೆಗಳಿಂದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕಾರ್ಯಕರ್ತರು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳು ಮತ್ತು ಮಕ್ಕಳು ಭಾಗವಹಿಸಲಿದ್ದಾರೆ.

ಜನ ಕ್ರಾಂತಿಯ ಘೋಷಣೆ!

ಮಧುರೈನಲ್ಲಿ ನಡೆಯಲಿರುವ 24ನೇ ಅಖಿಲ ಭಾರತ ಸಮ್ಮೇಳನವು ಜನರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ, ಕಾರ್ಮಿಕ ವರ್ಗ ಮತ್ತು ರೈತರ ಕ್ರಾಂತಿಕಾರಿ ಹೋರಾಟದ ಶಕ್ತಿಯನ್ನು ಜನರ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮುನ್ನಡೆಸಲು ಸಜ್ಜುಗೊಳಿಸುವ ಸಮ್ಮೇಳನವಾಗಲಿದೆ.

–ಸಿಚಿ

ಸಿಪಿಐ(ಎಂ): ಹಂತ ಹಂತವಾಗಿ ಉದ್ಭವಿಸಿದ ಸಮಸ್ಯೆಗಳು ಮತ್ತು ಪರಿಹಾರಗಳು

1977–80ರ ಜನತಾ ಆಡಳಿತದ ಅವಧಿಯಲ್ಲಿ, ಜನಸಂಘದ ಸದಸ್ಯರು ತಮ್ಮ ಆರ್‌ಎಸ್‌ಎಸ್ ಸದಸ್ಯತ್ವವನ್ನು ತ್ಯಜಿಸಲು ನಿರಾಕರಿಸಿದಾಗ ವಿವಾದಗಳು ಹುಟ್ಟಿಕೊಂಡವು. ಚರಣ್ ಸಿಂಗ್ ನೇತೃತ್ವದ ಗುಂಪು ದ್ವಿಸದಸ್ಯತ್ವ ಸ್ಥಾನಮಾನಕ್ಕೆ ಅವಕಾಶ ನೀಡಬಾರದು ಎಂದು ಒತ್ತಾಯಿಸಿತು. ಇದಕ್ಕೆ ಸಿಪಿಐ(ಎಂ) ಹೊರಗಿನಿಂದ ಬೆಂಬಲ ನೀಡಿತು. ದ್ವಿಸದಸ್ಯತ್ವದ ಸಮಸ್ಯೆಯನ್ನು ಬಗೆಹರಿಸದೆ ಜನತಾದಳ(ಸಂಯುಕ್ತ) ವಿಭಜನೆಯಾಯಿತು. ಕಾಂಗ್ರೆಸ್ ಚರಣ್ ಸಿಂಗ್ ನೇತೃತ್ವದ ಬಣವನ್ನು ಬೆಂಬಲಿಸಿತು. ಆದರೆ ಚರಣ್ ಸಿಂಗ್ ಸರ್ಕಾರ ವಿಶ್ವಾಸ ಮತ ಚಲಾಯಿಸಿ ಸೋತ ನಂತರ ರಾಷ್ಟ್ರೀಯ ಸಭೆಯನ್ನು ವಿಸರ್ಜಿಸಲಾಯಿತು. 1980ರ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದಿತು.

ಇಂದಿರಾ ಹತ್ಯೆ ಮತ್ತು ಸಹಾನುಭೂತಿಯ ಅಲೆ

ಕಾಂಗ್ರೆಸ್ಸಿನ ಆರ್ಥಿಕ ನೀತಿಗಳಿಂದ ಜನರು ಅತೃಪ್ತರಾಗಿದ್ದರು. ಪ್ರಧಾನಿ ಇಂದಿರಾ ಗಾಂಧಿಯವರು ಅಕ್ಟೋಬರ್ 31, 1984ರಂದು ಸಿಖ್ ಭಯೋತ್ಪಾದಕರಿಂದ ಹತ್ಯೆಗೀಡಾದರು. ಸಿಪಿಐ(ಎಂ) ಈ ಹತ್ಯಾಕಾಂಡವನ್ನು ಬಲವಾಗಿ ಖಂಡಿಸಿತು, ಸಿಖ್ ಉಗ್ರಗಾಮಿಗಳ ಪ್ರತ್ಯೇಕತಾವಾದಿ ಘೋಷಣೆಗಳನ್ನು ತಿರಸ್ಕರಿಸಿತು ಮತ್ತು ರಾಷ್ಟ್ರೀಯ ಏಕತೆಯನ್ನು ರಕ್ಷಿಸುವ ಅಗತ್ಯವನ್ನು ಒತ್ತಿ ಹೇಳಿತು. ಇಂದಿರಾ ಹತ್ಯೆಯು ದೇಶಾದ್ಯಂತ ಕಾಂಗ್ರೆಸ್ ಬಗ್ಗೆ ಸಹಾನುಭೂತಿಯ ಅಲೆಗಳನ್ನು ಸೃಷ್ಟಿಸಿತು. ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ರಾಜೀವ್ ಗಾಂಧಿ ಚುನಾವಣೆ ಘೋಷಿಸಿದರು. ಸಹಾನುಭೂತಿಯ ಅಲೆಯ ಮೇಲೆ ಕಾಂಗ್ರೆಸ್ ಬಹುಮತದಿಂದ ಗೆದ್ದಿತು. ರಾಜೀವ್ ಗಾಂಧಿ 1984–89 ರವರೆಗೆ ಆಳಿದರು.

ವಿ.ಪಿ.ಸಿಂಗ್ ಸರ್ಕಾರ ಮತ್ತು ಮಂಡಲ್ ಆಯೋಗ

1989ರ ಚುನಾವಣೆಯಲ್ಲಿ ಜನತಾದಳ ನಾಯಕ ವಿ.ಪಿ.ಸಿಂಗ್ ನೇತೃತ್ವದಲ್ಲಿ ಅಲ್ಪಸಂಖ್ಯಾತ ಸರ್ಕಾರ ರಚನೆಯಾಯಿತು. ಸರ್ಕಾರ ಉಳಿಯಲು ಒಂದೆಡೆ ಸಿಪಿಐ(ಎಂ) ಮತ್ತು ಮತ್ತೊಂದೆಡೆ ಬಿಜೆಪಿಯ ಬೆಂಬಲದ ಅಗತ್ಯವಿತ್ತು. ಸಿಪಿಐ(ಎಂ) ಒಂದು ಷರತ್ತನ್ನು ವಿಧಿಸಿತು – ಬಿಜೆಪಿ ಕೇಂದ್ರ ಸರ್ಕಾರದಲ್ಲಿ ಭಾಗವಹಿಸಬಾರದು, ಆದರೆ ಹೊರಗಿನಿಂದ ಬೆಂಬಲ ನೀಡಬಹುದು. ವಿ.ಪಿ.ಸಿಂಗ್ ಅವರು ಇತರ ಹಿಂದುಳಿದ ವರ್ಗಗಳಿಗೆ ಶೇ. 27ರಷ್ಟು ಮೀಸಲಾತಿ ನೀಡುವ ಮಂಡಲ್ ಆಯೋಗದ ಶಿಫಾರಸನ್ನು ಜಾರಿಗೆ ತಂದರು. ಇದನ್ನು ಪ್ರಜಾಸತ್ತಾತ್ಮಕ, ಜಾತ್ಯತೀತ, ಸಾಮಾಜಿಕ ನ್ಯಾಯ ಶಕ್ತಿಗಳು ಸ್ವೀಕರಿಸಿದವು. ಸಿಪಿಐ(ಎಂ) ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿತು.

ರಥಯಾತ್ರೆ ಮತ್ತು ವಿ.ಪಿ.ಸಿಂಗ್ ಸರ್ಕಾರದ ಪತನ

ಬಿಜೆಪಿಯ ಮೀಸಲಾತಿಯನ್ನು ಬಲವಾಗಿ ವಿರೋಧಿಸಿದ ಬಿಜೆಪಿ ಮೇಲ್ಜಾತಿ ಸಮುದಾಯವನ್ನು ಗಲಭೆಗೆ ಪ್ರಚೋದಿಸಿತು. ಗಲಭೆಯಲ್ಲಿ ನೂರಾರು ಜನರು ಸಾವನ್ನಪ್ಪಿದರು. ಈ ಪರಿಸ್ಥಿತಿಯನ್ನು ಬಳಸಿಕೊಳ್ಳಲು ಬಿಜೆಪಿ, ಅಡ್ವಾಣಿ ನೇತೃತ್ವದಲ್ಲಿ ಅಯೋಧ್ಯೆ ರಾಮಮಂದಿರ ವಿಷಯವನ್ನು ಎತ್ತಿ ತೋರಿಸಿ ರಥಯಾತ್ರೆ ನಡೆಸಿತು. ಅವರು ಹೋದಲ್ಲೆಲ್ಲಾ ಧಾರ್ಮಿಕ ಗಲಭೆಗಳು ಭುಗಿಲೆದ್ದವು. ಲಾಲು ಪ್ರಸಾದ್ ಯಾದವ್ ನೇತೃತ್ವದ ಬಿಹಾರ ಸರ್ಕಾರ ಅಡ್ವಾಣಿ ಅವರನ್ನು ಬಂಧಿಸಿ ಜೈಲಿನಲ್ಲಿಟ್ಟಿತು. ಇದಾದ ನಂತರ, ಬಿಜೆಪಿ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿತು. ನಂತರ ವಿ.ಪಿ.ಸಿಂಗ್ ಸರ್ಕಾರ ರಾಜೀನಾಮೆ ನೀಡಬೇಕಾಯಿತು.

ಅತ್ಯಂತ ಹಿಂದುಳಿದ ವರ್ಗಗಳಿಗೆ ಆಂತರಿಕ ಮೀಸಲಾತಿ

ಭಾರತೀಯ ಇತಿಹಾಸದಲ್ಲಿಯೇ ವಿ.ಪಿ.ಸಿಂಗ್ ಸರ್ಕಾರವು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದ ಮೇಲೆ ಭಾರಿ ಪರಿಣಾಮ ಬೀರಿತು. ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಬಹುದಿನಗಳ ಕನಸು ನನಸಾಯಿತು. ನಂತರ, ತಮಿಳುನಾಡು ಸೇರಿದಂತೆ ಕೆಲವು ರಾಜ್ಯಗಳಲ್ಲಿ, ಅತ್ಯಂತ ಹಿಂದುಳಿದ ವರ್ಗಗಳಿಗೆ ಆಂತರಿಕ ಮೀಸಲಾತಿಯಾಗಿ ಪ್ರತ್ಯೇಕ ಮೀಸಲಾತಿಗಳನ್ನು ನೀಡಲಾಯಿತು. ಸಿಪಿಐ(ಎಂ) ಕೂಡ ಈ ಆಂತರಿಕ ಕೋಟಾವನ್ನು ಸ್ವಾಗತಿಸಿತು.

ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ

1991ರ ಚುನಾವಣೆಯಲ್ಲಿ, ಕಾಂಗ್ರೆಸ್ ಪಕ್ಷವು ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು, ಆದರೆ ಬಹುಮತವನ್ನು ಗಳಿಸಲಿಲ್ಲ. ನರಸಿಂಹರಾವ್ ನೇತೃತ್ವದಲ್ಲಿ ಅಲ್ಪಸಂಖ್ಯಾತ ಸರ್ಕಾರ ರಚನೆಯಾಯಿತು. ಇದು 5 ವರ್ಷಗಳ ಕಾಲ ನಡೆದ ಒಂದು ಅದ್ಭುತ ವಿದ್ಯಮಾನವಾಗಿದೆ. ಈ ಸರ್ಕಾರವನ್ನು ಉರುಳಿಸುವ ಉತ್ಸಾಹದಿಂದ ಬಿಜೆಪಿ ವರ್ತಿಸಿತು. ಇದನ್ನು ತಡೆಯಲು ಬಯಸಿದ ಸಿಪಿಐ(ಎಂ) ಬಿಜೆಪಿಯ ನಿಲುವಿನ ವಿರುದ್ಧ ನಿಲುವು ತಳೆದಿತು. ಬಿಜೆಪಿ ಅವಿಶ್ವಾಸ ನಿರ್ಣಯ ಮಂಡಿಸುವಾಗ ಸಿಪಿಐ(ಎಂ) ಸದಸ್ಯರು ಲೋಕಸಭೆಯಲ್ಲಿ ಇರುತ್ತಿರಲಿಲ್ಲ. ಇದು ಕಾಂಗ್ರೆಸ್ ಸರ್ಕಾರವನ್ನು ಉಳಿಸಿತು.

ಉದಾರವಾದಿ ಆರ್ಥಿಕ ನೀತಿಗಳಿಗೆ ವಿರೋಧ

ಈ ಅವಧಿಯು ಸಿಪಿಐ(ಎಂ) ಸೇರಿದಂತೆ ಎಡಪಂಥೀಯ ಚಳುವಳಿಗಳಿಗೆ ಸವಾಲಿನದ್ದಾಗಿತ್ತು. ಹಣಕಾಸು ಸಚಿವ ಮನಮೋಹನ್ ಸಿಂಗ್ ಪರಿಚಯಿಸಿದ ಉದಾರವಾದಿ ನೀತಿಗಳ ವಿರುದ್ಧ ಎಡಪಂಥೀಯ ಚಳುವಳಿಗಳು ಬೃಹತ್ ಮುಷ್ಕರಗಳನ್ನು ಪ್ರಾರಂಭಿಸಿದವು. ಕೇಂದ್ರ ಸರ್ಕಾರದ ಉದಾರವಾದಿ ಆರ್ಥಿಕ ನೀತಿಗಳನ್ನು ವಿರೋಧಿಸುತ್ತಲೇ ಅಧಿಕಾರ ಹಿಡಿಯುವ ಬಿಜೆಪಿಯ ಪ್ರಯತ್ನಗಳನ್ನು ಇದು ವಿಫಲಗೊಳಿಸಿತು.

ಸಂಯುಕ್ತ ರಂಗ ಸರ್ಕಾರ

1996ರ ಚುನಾವಣೆಯಲ್ಲಿ ಮೊದಲ ಅತಿದೊಡ್ಡ ಪಕ್ಷವಾಗಿ ಸರ್ಕಾರ ರಚಿಸಲು ಬಿಜೆಪಿ ಪ್ರಯತ್ನಿಸಿತು, ಆದರೆ 13 ದಿನಗಳಲ್ಲಿ ರಾಜೀನಾಮೆ ನೀಡಿತು. ನಂತರ, ಜಾತ್ಯತೀತ ಪ್ರಜಾಸತ್ತಾತ್ಮಕ ಪಕ್ಷಗಳು ಒಗ್ಗಟ್ಟಿನ ರಂಗವನ್ನು ರಚಿಸಿ ಕಾಂಗ್ರೆಸ್ ಬೆಂಬಲದೊಂದಿಗೆ ಸರ್ಕಾರವನ್ನು ರಚಿಸಿದವು. ಜ್ಯೋತಿ ಬಸು ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಪ್ರಸ್ತಾಪಿಸಿದಾಗ, ಕಮ್ಯುನಿಸ್ಟ್–ಮಾರ್ಕ್ಸ್‌ವಾದಿ ಪ್ರಧಾನಿಯೊಬ್ಬರು ಬಹುಪಾಲು ಬಂಡವಾಳಶಾಹಿ ಪಕ್ಷಗಳೊಂದಿಗೆ ಕೆಲಸ ಮಾಡುವುದು ಅಸಾಧ್ಯವೆಂದು ಸಿಪಿಐ(ಎಂ) ನಿರಾಕರಿಸಿತು. ಇದು ವಿವಿಧ ರಾಜಕೀಯ ವಲಯಗಳಲ್ಲಿ ಅಚ್ಚರಿಗೆ ಕಾರಣವಾಯಿತು. ನಂತರ ದೇವೇಗೌಡ, ಆ ನಂತರ ಐ.ಕೆ. ಗುಜರಾಲ್ ಅಲ್ಪಾವಧಿಗೆ ಪ್ರಧಾನ ಮಂತ್ರಿಗಳಾಗಿದ್ದರು.

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಸರ್ಕಾರ

1998ರಲ್ಲಿ, ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು ಗೆದ್ದಿತು. ಆದರೆ ಸಮ್ಮಿಶ್ರ ಪಕ್ಷಗಳಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು. ಎಐಎಡಿಎಂಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡ ನಂತರ, ಡಿಎಂಕೆ ಮೈತ್ರಿಕೂಟವನ್ನು ಸೇರಿಕೊಂಡಿತು. ವಾಜಪೇಯಿ ಸರ್ಕಾರವು ಒಂದು ಮತದ ಅಂತರದಿಂದ ವಿಶ್ವಾಸ ಮತವನ್ನು ಕಳೆದುಕೊಂಡಿತು. ಆ ಸರ್ಕಾರ 13 ತಿಂಗಳಲ್ಲಿ ಪತನಗೊಂಡಿತು.

ಗುಜರಾತ್ ಗಲಭೆಗಳು ಮತ್ತು ಹಿಂದುತ್ವದ ಉದಯ

1999ರ ಚುನಾವಣೆಗಳಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು ಮತ್ತೊಮ್ಮೆ ಗೆದ್ದು ವಾಜಪೇಯಿಯವರ ನೇತೃತ್ವದಲ್ಲಿ 5 ವರ್ಷಗಳ ಕಾಲ ಆಳ್ವಿಕೆ ನಡೆಸಿತು. ಭಾರತದ ಸ್ವಾತಂತ್ರ್ಯದ ನಂತರ ಕೋಮುವಾದಿ ಬಿಜೆಪಿ ನೇತೃತ್ವದ ಒಕ್ಕೂಟವು ಅಧಿಕಾರವನ್ನು ವಶಪಡಿಸಿಕೊಂಡಿದ್ದು ಇದೇ ಮೊದಲು. ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ, ಅಲ್ಪಸಂಖ್ಯಾತರ ಮೇಲೆ ಕ್ರೂರ ದಾಳಿಗಳು ನಡೆದವು. ಹಿಂದುತ್ವ–ಆರ್‌ಎಸ್‌ಎಸ್ ಗ್ಯಾಂಗ್ ತಮ್ಮ ಸಿದ್ಧಾಂತವನ್ನು ಬಲಪಡಿಸಲು ದೇಶಾದ್ಯಂತ ಪ್ರಚಾರ ಮಾಡಿತು. ಇದೇ ಅವಧಿಯಲ್ಲಿ, ನವ ಉದಾರವಾದಿ ಆರ್ಥಿಕ ನೀತಿಗಳನ್ನು ತೀವ್ರವಾಗಿ ಜಾರಿಗೆ ತರಲಾಯಿತು. ಕಾರ್ಮಿಕ ವರ್ಗದ ಹಕ್ಕುಗಳು ಮತ್ತು ಬಡವರು ಮತ್ತು ಸರಳ ಜನರ ಜೀವನೋಪಾಯವನ್ನು ಕಸಿದುಕೊಳ್ಳಲಾಯಿತು.

ಸಂಯುಕ್ತ ಪ್ರಗತಿಶೀಲ ಒಕ್ಕೂಟ ಸರ್ಕಾರ

2004ರ ಚುನಾವಣೆಯಲ್ಲಿ, ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ ಗಮನಾರ್ಹ ಸ್ಥಾನಗಳನ್ನು ಗೆದ್ದಿತು, ಆದರೆ ಬಹುಮತ ಪಡೆಯುವಲ್ಲಿ ವಿಫಲವಾಯಿತು. ಸಿಪಿಐ(ಎಂ) ಸೇರಿದಂತೆ ಎಡಪಕ್ಷಗಳು ದಾಖಲೆಯ 60 ಸ್ಥಾನಗಳನ್ನು ಗೆದ್ದವು. ಸಿಪಿಐ(ಎಂ) ಮಾತ್ರ 43 ಸ್ಥಾನಗಳನ್ನು ಗೆದ್ದಿತು. ಎಡಪಂಥೀಯ ಪಕ್ಷಗಳ ಬೆಂಬಲದಿಂದ ಮಾತ್ರ ಸರ್ಕಾರ ಸ್ಥಾಪಿಸಲು ಸಾಧ್ಯ ಎಂಬ ಪರಿಸ್ಥಿತಿ ಉದ್ಭವಿಸಿತು. ಈ ಅವಕಾಶವನ್ನು ಬಳಸಿಕೊಂಡು ಜಾತ್ಯತೀತತೆಯನ್ನು ರಕ್ಷಿಸಲು ಮತ್ತು ದುಡಿಯುವ ಜನರ ಕಲ್ಯಾಣವನ್ನು ಸುಧಾರಿಸಲು ಸಿಪಿಐ(ಎಂ) ಮತ್ತು ಎಡಪಂಥೀಯ ಚಳುವಳಿಗಳು ಸೂಕ್ತ ಕಾರ್ಯತಂತ್ರವನ್ನು ರೂಪಿಸಿದವು.

ಕರ್ನಾಟಕ: ಸೊರಗುತ್ತಿರುವ ಸಾರ್ವಜನಿಕ ಆರೋಗ್ಯ... ಪುಟ 11 ರಿಂದ

ಅಭಿವೃದ್ಧಿಯನ್ನು ನಗರೀಕರಣದೊಂದಿಗೆ ಸಮೀಕರಿಸಲು ನಾವು ಷರತ್ತು ಬದ್ಧರಾಗಿದ್ದೇವೆ. ಭಾರತೀಯ ಸನ್ನಿವೇಶದಲ್ಲಿ, ನಿರ್ಮಿಸಲಾದ ರಸ್ತೆಗಳ ಸಂಖ್ಯೆ ಮತ್ತು ಆಕರ್ಷಿಸಲ್ಪಟ್ಟ ಕಂಪನಿಗಳ ಸಂಖ್ಯೆಯನ್ನು ಅನೇಕ ರಾಜಕೀಯ ಪಕ್ಷಗಳು ಎತ್ತಿತೋರಿಸುತ್ತವೆ. ಆದರೂ, ಸಮಾಜಕ್ಕೆ ಅಗತ್ಯವಿರುವ ಅಗತ್ಯ ಸೌಲಭ್ಯಗಳನ್ನು ಹೊಂದಿರುವ ಹಳ್ಳಿಗಳ ಬಗ್ಗೆ ಕೆಲವರು ಮಾತ್ರ ಮಾತನಾಡುತ್ತಾರೆ.

ಕೇರಳವು ಎದ್ದು ಕಾಣುವುದು ಇಲ್ಲಿಯೇ. ಕೇರಳವು ಅತ್ಯುತ್ತಮವಾದ ಸಾರ್ವಜನಿಕ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಹೊಂದಿದೆ ಎಂದು ನಿರಂತರವಾಗಿ ಪ್ರದರ್ಶಿಸಿದೆ. ಕೇಂದ್ರ–ರಾಜ್ಯ ಸಂಬಂಧಗಳಲ್ಲಿನ ಸವಾಲುಗಳ ಹೊರತಾಗಿಯೂ, 'ನಿಪಾ'ದಂತಹ ಮಾರಕ ರೋಗಗಳ ಏಕಾಏಕಿ ನಿರ್ವಹಣೆ ಮತ್ತು ಕೋವಿಡ್ –19 ಸಾಂಕ್ರಾಮಿಕ ರೋಗವನ್ನು ನಿಭಾಯಿಸಲು ಈ ವ್ಯವಸ್ಥೆಯು ಕೇರಳಕ್ಕೆ ಸಹಾಯ ಮಾಡಿದೆ. ವ್ಯಾಪಕವಾದ ಸಾರ್ವಜನಿಕ ಆರೋಗ್ಯ ರಕ್ಷಣಾ ಜಾಲ ಮತ್ತು ಬಲವಾದ, ಉತ್ತಮ ತರಬೇತಿ ಪಡೆದ ವೈದ್ಯಕೀಯ ವೃತ್ತಿಪರರ ಗುಂಪು ಈ ಪ್ರಯತ್ನಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ.

ರಾಜ್ಯದ ಸಾರ್ವಜನಿಕ ಆರೋಗ್ಯ ಸೌಲಭ್ಯಗಳ ವ್ಯಾಪಕ ಜಾಲವು ಶಿಶುಮರಣ ಪ್ರಮಾಣವನ್ನು ಕಡಿಮೆ ಮಾಡಲು ಮತ್ತು ಜೀವಿತಾವಧಿಯನ್ನು ಹೆಚ್ಚಿಸಲು ಗಮನಾರ್ಹವಾಗಿ ಕೊಡುಗೆ ನೀಡಿದೆ. ಕೇರಳವು ಅತಿ ಹೆಚ್ಚು ಸಾಂಸ್ಥಿಕ ಜನನಗಳಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ ಮತ್ತು ಯಾವುದೇ ಮಗು ಅಪೌಷ್ಟಿಕತೆಯಿಂದ ಬಳಲುತ್ತಿಲ್ಲ. ಇಲ್ಲಿನ ಆರೋಗ್ಯ ವ್ಯವಸ್ಥೆಯು ರಾಜ್ಯದ ಅಭಿವೃದ್ಧಿಯ ಮೂಲಾಧಾರವಾಗಿದೆ.

ರಾಜ್ಯ ಸರ್ಕಾರದ ಮುಂದಿರುವ ತುರ್ತು

ಕರ್ನಾಟಕ ರಾಜ್ಯ ಸರ್ಕಾರವು ಸಾರ್ವಜನಿಕ ಆರೋಗ್ಯವ್ಯವಸ್ಥೆಯನ್ನು ತುರ್ತಾಗಿ ಬಲಪಡಿಸಬೇಕಿದೆ. 'ಪ್ರಪಂಚದ ಯಾವ ರಾಷ್ಟ್ರ ತನ್ನ ಜನರನ್ನು ಆರೋಗ್ಯದ ಮಾರ್ಗದಲ್ಲಿ ಕೊಂಡೊಯ್ದಿದೆಯೋ, ಅವುಗಳು ಸದೃಢ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಬಲದಿಂದಲೇ ವಿನಃ, ಖಾಸಗೀಕೃತ ವ್ಯವಸ್ಥೆಯಿಂದಲ್ಲ' ಎಂಬ ಅಂಶ ಸರ್ಕಾರದ ತಲೆಗೆ ಹೋಗಬೇಕು.

ಸರ್ಕಾರವು ವಿಷನ್ ಸಮಿತಿ ಶಿಫಾರಸ್ಸು ಮಾಡಿರುವ ಹಾಗೆ ಹಣ ಹೂಡಿಕೆಯನ್ನು ಸದ್ಯ ಇರುವ ಜಿಡಿಪಿಯಲ್ಲಿನ ಶೇ. 0.8 ರಷ್ಟಿರುವುದನ್ನು ಶೇ. 2.5ಕ್ಕೆ ಏರಿಸಬೇಕು. ಸಿಬ್ಬಂದಿ ಕೊರತೆಯನ್ನು ಅದರಲ್ಲೂ ವಿಶೇಷಜ್ಞರ ಕೊರತೆಯನ್ನು ಒಡನೆಯೇ ನೀಗಿಸುವ ದಿಕ್ಕಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸಾರ್ವತ್ರಿಕ ಆರೋಗ್ಯ ಆಂದೋಲನ ಕರ್ನಾಟಕದ ಪ್ರಸನ್ನ ಸಾಲಿಗ್ರಾಮ ಆಗ್ರಹಿಸಿದ್ದಾರೆ.

ವೈದ್ಯರ ನೇಮಕಾತಿ ಅಗತ್ಯ

ರಾಜ್ಯದಲ್ಲಿ ವೈದ್ಯಕೀಯ ಪದವಿಯನ್ನು ಮುಗಿಸಿ ಬರುವವರ ಸಂಖ್ಯೆ ಹೆಚ್ಚುತ್ತಲೆ ಇದೆ. ನಮಗೂ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಬೇಕೆಂಬ ಮಹದಾಸೆ ಇರುತ್ತದೆ. ಆದರೆ ನೇಮಕಾತಿ ನಡೆಯದೆ ಇದ್ದಲ್ಲಿ ನಾವು ಸ್ವಂತ ಕ್ಲಿನಿಕ್ ಇಲ್ಲವೆ ಯಾವುದಾದರೂ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುವಂತಾಗುತ್ತದೆ. ಸರ್ಕಾರಿ ಆಸ್ಪತ್ರೆಗಳು ಬಲಗೊಳ್ಳಬೇಕಾದರೆ ವೈದ್ಯರ ನೇಮಕಾತಿ ಅಗತ್ಯ ಎಂದೆನ್ನುತ್ತಾರೆ ಉನ್ನತ ವೈದ್ಯಕೀಯ ಶಿಕ್ಷಣದ ವಿದ್ಯಾರ್ಥಿ ಅಶ್ವಿನಿ ನಿಪ್ಪಾಣಿ.

ಉಚಿತ ಔಷಧಿಗಳ ಲಭ್ಯತೆ

ಉಚಿತ ಔಷಧಿಗಳ ಲಭ್ಯತೆಯನ್ನು ಸುನಿಶ್ಚಿತಗೊಳಿಸಬೇಕು, ಆಗ ತಂತಾನೇ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಜನರು ಹೆಚ್ಚಾಗಿ ಉಪಯೋಗಿಸಲು ಶುರುಮಾಡುತ್ತಾರೆ ಎಂದೆನ್ನುತ್ತಾರೆ ಯಲಬುರ್ಗಾದ ರೈತ ಸಕ್ಕರಗೌಡ ಅಡವಿಗೌಡರ.

ತನ್ನ ಹೊಣೆಗಾರಿಕೆಯನ್ನು ನಿಭಾಯಿಸಲು ಮುಂದಾಗಬೇಕಿದೆ

ಎಲ್ಲರನ್ನೂ/ಎಲ್ಲವನ್ನೂ ಒಂದು ಸಾರ್ವತ್ರಿಕ ಆರೋಗ್ಯ ವ್ಯವಸ್ಥೆಯ ಛತ್ರಿಯಡಿ ತರಬೇಕು. ಈಗ ಇರುವಂತೆ ಶ್ರೀಮಂತರಿಗೆ ಒಂದು ವ್ಯವಸ್ಥೆ, ಬಡವರಿಗೆ ಒಂದು ವ್ಯವಸ್ಥೆ ಎಂಬುದು ಬದಲಾಗಬೇಕು. ಸಾರ್ವತ್ರಿಕ ಅರೋಗ್ಯ ವ್ಯವಸ್ಥೆಯಡಿಯಲ್ಲಿ ಸಮುದಾಯಗಳ ಭಾಗವಹಿಸುವಿಕೆಗೆ ಸೃಷ್ಟಿಸಿರುವ ಗ್ರಾಮ ಅರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು, ಅರೋಗ್ಯ ರಕ್ಷಾ ಸಮಿತಿಗಳು, ಮಹಿಳಾ ಅರೋಗ್ಯ ಸಮಿತಿಗಳು ಇತ್ಯಾದಿಯನ್ನು ಬಲಗೊಳಿಸಬೇಕು. ಆ ಮೂಲಕ ವ್ಯವಸ್ಥೆಯನ್ನು ಸಮುದಾಯಗಳ ಅವಶ್ಯತೆಗಳಿಗೆ ಸ್ಪಂದಿಸಲು ಸಾಧ್ಯವಾಗುತ್ತದೆ. ಸರ್ಕಾರ ತನ್ನ ಹೊಣೆಗಾರಿಕೆಯನ್ನು ನಿಭಾಯಿಸಲು ಮುಂದಾಗಬೇಕಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE March 31-April 6, 2025 Price: Rs. 10/- Date of Publication: 28 March 2025 RNI No. KARKAN /2006/17926 Posted on 2-04-2025
Posted at BG PSO, BG - 560026 **Posted at Periodical Rate -** Rs. 2

ಅಮೇರಿಕಾ ಸಾಮ್ರಾಜ್ಯ ಉಳಿಸಲು ಟ್ರಂಪ್–ಟೆಕ್ ದೈತ್ಯರ ಹೊಸ ಫಾರ್ಮುಲಾ?

ವಸಂತರಾಜ ಎನ್.ಕೆ.

ಟ್ರಂಪ್ ತಮ್ಮ ಎರಡನೆಯ ಅವಧಿಯ ಮೊದಲ ಎರಡು ತಿಂಗಳಲ್ಲಿ ಹೊರಡಿಸಿದ ಸುಗ್ರೀವಾಜ್ಞೆಗಳು ಮತ್ತು ಹಲವು ಕ್ಷಿಪ್ರ ಕ್ರಮಗಳು ಅವರ ಬೆಂಬಲಿಗರು ಮತ್ತು ಟೀಕಾಕಾರರಲ್ಲೂ ಆಶ್ಚರ್ಯ, ಆಕ್ರೋಶ, ಆತಂಕಗಳಿಗೆ ಕಾರಣವಾಗಿದೆ. ಆದರೆ ಈ ಬದಲಾವಣೆಗಳು ಹಲವರು ತಿಳಿದಿರುವಂತೆ ಟ್ರಂಪ್ ಅವರ ವೈಯಕ್ತಿಕ ತಿಕ್ಕಲುತನ, ತೆವಲು, ಮರ್ಜಿಗಳಿಂದ ಮಾತ್ರ ಆಗುತ್ತಿಲ್ಲ. ಬದಲಿಗೆ ಯು.ಎಸ್. ನ ಪ್ರಭುತ್ವ, ರಾಜಕಾರಣ, ಮಿಲಿಟರಿ, ದೇಶೀಯ ಮತ್ತು ವಿದೇಶಿ ನೀತಿಗಳಲ್ಲಿ ಹಳೆಯದನ್ನು ನಾಶ ಮಾಡಿ, ಆಮೂಲಾಗ್ರವಾಗಿ ಹೊಸದಾಗಿ ಮತ್ತೆ ಕಟ್ಟುವ ಯು.ಎಸ್. ನ ಆಳುವ ವರ್ಗದ ಒಂದು ವಿಭಾಗದ ಗಂಭೀರ ಪ್ರಯತ್ನದ ಭಾಗವಾಗಿ ಇದು ನಡೆಯುತ್ತಿದೆ. ಟೆಸ್ಲಾದ ಮಸ್ಕ್ ಮಾತ್ರವಲ್ಲದೆ ಟೆಕ್ ದೈತ್ಯರು ಎನ್ನಲಾದ ಗೂಗಲ್, ಪೇಸ್‌ಬುಕ್–ಮೆಟಾ, ಅಮೆಝೂನ್, ಆಪಲ್‌ಗಳ ಬಿಲಿಯಾಧಿಪತಿ ಒಡೆಯರ ಕೂಟ ಇದನ್ನು ನಿರ್ದೇಶಿಸುವಂತೆ ಅಥವಾ ಇದರಲ್ಲಿ ಕನಿಷ್ಠ ಪ್ರಧಾನ ಪಾತ್ರ ವಹಿಸುತ್ತಿರುವಂತೆ ಕಾಣುತ್ತಿದೆ. ಹೀಗೆ ಯಾವ ಆಧಾರದ ಮೇಲೆ ಹೇಳುವುದು? ಇದು ಗೆಲ್ಲಬಹುದೋ? ಇದರ ಪರಿಣಾಮ ಯು.ಎಸ್. ಮತ್ತು ಜಗತ್ತಿನ ಜನರ ಮೇಲೆ ಏನಾಗಬಹುದು–ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಇಲ್ಲಿದೆ.

ಟ್ರಂಪ್ ತಮ್ಮ ಎರಡನೆಯ ಅವಧಿಯ ಮೊದಲ ಎರಡು ತಿಂಗಳಲ್ಲಿ ಹೊರಡಿಸಿದ ಸುಗ್ರೀವಾಜ್ಞೆಗಳು ಮತ್ತು ವಿವಿಧ ನೀತಿ ಹೇಳಿಕೆಗಳ ಮೂಲಕ ಯು.ಎಸ್.ನೊಳಗೂ ಜಾಗತಿಕವಾಗಿಯೂ ಕೋಲಾಹಲ ಎಬ್ಬಿಸಿದ್ದಾರೆ. ಎದುರಾಳಿ ಚೀನಾ ಮಾತ್ರವಲ್ಲ, ಕೆನಡಾ, ಮೆಕ್ಸಿಕೊ, ಯುರೋ ಕೂಟಗಳಂತಹ 'ಮಿತ್ರ ದೇಶ'ಗಳ ಮೇಲೆ ಸಹ, ಆಮದು ಸುಂಕಗಳ ಸರಣಿ ಘೋಷಣೆ, ಭಾರತ ಸೇರಿದಂತೆ ಹಲವು ದೇಶಗಳ "ಕಾನೂನುಬಾಹಿರ" ವಲಸಿಗರನ್ನು ಕೈ ಕಾಲುಗಳನ್ನು ಸರಪಣಿಯಲ್ಲಿ ಬಂಧಿಸಿ ಮಿಲಿಟರಿ ಸಾಗಾಣಿಕೆ ವಿಮಾನದಲ್ಲಿ ವಾಪಸು ಕಳಿಸಿದ್ದು, ಉಕ್ರೇನ್ ಯುದ್ಧ ನಿಲುಗಡೆಗೆ ಉಕ್ರೇನ್ ಅಥವಾ ಯುರೋ ಕೂಟವನ್ನು ದೂರವಿಟ್ಟು ರಶ್ಯಾದ ಜತೆ ನೇರ ಮಾತುಕತೆ, –ಮುಂತಾದ ಹಲವು ಕ್ಷಿಪ್ರ ಕ್ರಮಗಳು ಅವರ ಬೆಂಬಲಿಗರು ಮತ್ತು ಟೀಕಾಕಾರರಲ್ಲೂ ಆಶ್ಚರ್ಯ, ಆಕ್ರೋಶ, ಆತಂಕಗಳಿಗೆ ಕಾರಣವಾಗಿದೆ. ಕೆನಡಾ ಯು.ಎಸ್.ನ 51ನೆಯ ರಾಜ್ಯ ಆಗಬೇಕು, ಪನಾಮಾ ಕಾಲುವೆ ಮತ್ತು ಗ್ರೀನ್ ಲ್ಯಾಂಡ್ ಯು.ಎಸ್.ಗೆ ಸೇರಬೇಕು ಎಂಬ ಹೇಳಿಕೆಗಳೂ ಅಷ್ಟೇ,

ಇವೆಲ್ಲದರಿಂದ ಟ್ರಂಪ್‌ರ ಮುಂದಿನ ನಿರೀಕ್ಷಿಸಬಹುದಾದ ಹೇಳಿಕೆ, ಅಥವಾ ಕ್ರಮ ಪೂರ್ಣವಾಗಿ ಅನಿರೀಕ್ಷಿತವಾಗಿರುತ್ತದೆ ಎಂದಷ್ಟೇ ಗ್ಯಾರಂಟಿಯಾಗಿ ಹೇಳಬಹುದು ಎಂಬ ವಿಡಂಬನೆಗೆ ಅವರು ಗುರಿಯಾಗಿದ್ದಾರೆ. ಕೆಲವರು ಟ್ರಂಪ್ ಅವರನ್ನು ತಿಕ್ಕಲು, ಅರಾಜಕ, ಕುಳಿತ ಮರದ ಗೆಲ್ಲು ಕಡಿಯುವ ದಡ್ಡ; ಮತ್ತು ಅವರ ಹಲವು ಹೇಳಿಕೆ ನೀತಿಗಳ ನಡುವೆ ಯಾವುದೇ ತರ್ಕ, ತಾಳಮೇಳ ಹುಡುಕುವುದೇ ಮೂರ್ಖತನ ಎಂದು ವೈಯಕ್ತಿಕ ನಿಂದನೆ ಮಾಡಿದ್ದಾರೆ. ಇನ್ನೊಂದು ಕಡೆ ಟ್ರಂಪ್ ಉಕ್ರೇನ್ ಮತ್ತು ಗಾಜಾದಲ್ಲಿ ಶಾಂತಿ ಸ್ಥಾಪಿಸಲು ಹೊರಟಿದ್ದಾರೆ. ಜಾಗತಿಕವಾಗಿ ಮಿಲಿಟರಿ ಸಂಘರ್ಷಕ್ಕೆ ಕಡಿವಾಣ ಹಾಕುವ ಮೂಲಕ ಮಿಲಿಟರಿ ಖರ್ಚನ್ನು ಕಡಿಮೆ ಮಾಡಲಿದ್ದಾರೆ. ಆಮದು ಸುಂಕ ಹೇರುವ ನೀತಿ ಯು.ಎಸ್. ಅನ್ನು ಮತ್ತೆ ಕೈಗಾರಿಕಾ ಉತ್ಪಾದನಾ ಕೇಂದ್ರವನ್ನಾಗಿಸಿ ಮತ್ತು ದೇಶಕ್ಕೆ ಅಗತ್ಯವಾದ ಕಾನೂನುಬದ್ಧ ವಲಸೆ ಮಾತ್ರ ಉತ್ತೇಜಿಸಿ ನಿರುದ್ಯೋಗ ನಿರ್ಮೂಲನೆ ಮಾಡಲಿದೆ ಎಂದು ಅವರ ಬೆಂಬಲಿಗರು ಮಾತ್ರವಲ್ಲ ಇತರ ಜನವಿಭಾಗಗಳೂ ನಂಬಿವೆ. ಇವೆಲ್ಲದರಲ್ಲಿ ಸ್ವಲ್ಪವೂ ಸತ್ಯಾಂಶವಿಲ್ಲವೆಂದಲ್ಲ. ಆದರೆ ಬಹುಪಾಲು ಇದು ಸಂಕೀರ್ಣವಾದ ವಿದ್ಯಮಾನವನ್ನು ಅತಿಯಾಗಿ ಸರಳೀಕರಿಸಿ ಕೆಲವು ಆಯಾಮಗಳನ್ನು ಮಾತ್ರ ನೋಡುವುದರಿಂದ ಹುಟ್ಟಿದ ತಪ್ಪು ಕಲ್ಪನೆಗಳು.



ಟ್ರಂಪ್ ತಿಕ್ಕಲುತನವಲ್ಲ, ಹೊಸ ಫಾರ್ಮುಲಾ

ಆದರೆ ಈ ಬದಲಾವಣೆಗಳು ಟ್ರಂಪ್ ಅವರ ವೈಯಕ್ತಿಕ ತಿಕ್ಕಲುತನ, ತೆವಲು, ಮರ್ಜಿಗಳಿಂದ ಮಾತ್ರ ಆಗುತ್ತಿಲ್ಲ. ಬದಲಿಗೆ ಯು.ಎಸ್.ನ ಪ್ರಭುತ್ವ, ರಾಜಕಾರಣ, ಮಿಲಿಟರಿ, ದೇಶೀಯ ಮತ್ತು ವಿದೇಶಿ ನೀತಿಗಳಲ್ಲಿ ಹಳೆಯದನ್ನು ನಾಶ ಮಾಡಿ, ಆಮೂಲಾಗ್ರವಾಗಿ ಹೊಸದಾಗಿ ಮತ್ತೆ ಕಟ್ಟುವ ಯು.ಎಸ್.ನ ಆಳುವ ವರ್ಗದ ಒಂದು ವಿಭಾಗದ ಗಂಭೀರ ಪ್ರಯತ್ನದ ಭಾಗವಾಗಿ ಇದು ನಡೆಯುತ್ತಿದೆ. ಟ್ರಂಪ್ ಅದರ ಸಾಧನ ಎಂಬಂತೆ ಕಾಣುತ್ತದೆ. ಹೀಗೆ ಯಾವ ಆಧಾರದ ಮೇಲೆ ಹೇಳುವುದು? ಆಳುವ ವರ್ಗದ ಯಾವ ವಿಭಾಗ ಇದರ ಹಿಂದಿದೆ? ಇದರ ಪರಿಣಾಮವೇನು? ಇದು ಗೆಲ್ಲಬಹುದೋ? ಇದರ ಪರಿಣಾಮ ಯು.ಎಸ್. ಮತ್ತು ಜಗತ್ತಿನ ಜನರ ಮೇಲೆ ಏನಾಗಬಹುದು ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಇಲ್ಲಿದೆ.



ಸೋವಿಯೆಟ್ ಒಕ್ಕೂಟದ ಪತನದ ನಂತರ ಯು.ಎಸ್. ಹೊಂದಿದ್ದ ಸಂಪೂರ್ಣ ಜಾಗತಿಕ ಅಧಿಪತ್ಯದ ಅವನತಿಯ ಬಿಕ್ಕಟ್ಟಿನ ಸಂದರ್ಭದಲ್ಲಿ, ತನ್ನ ಜಾಗತಿಕ ಅಧಿಪತ್ಯವನ್ನು ಉಳಿಸಿಕೊಳ್ಳಲು ಈ ಹೊಸ ವ್ಯೂಹದ ಹುಡುಕಾಟ ನಡೆದಿದೆ ಎಂಬುದನ್ನು ಮೊದಲಿಗೆ ಗಮನಿಸಬೇಕು. 2008ರ ಜಾಗತಿಕ ಬಂಡವಾಳಶಾಹಿಯ ಮಹಾ ಬಿಕ್ಕಟ್ಟು, ಚೀನಾ ಯು.ಎಸ್.ಗಿಂತ ಉತ್ಪಾದನಾ ಸಾಮರ್ಥ್ಯ ಅದರಲ್ಲೂ ಕೈಗಾರಿಕಾ ಉತ್ಪಾದನೆಯಲ್ಲಿ ಮತ್ತು ಹೊಸ ಮುಂಚೂಣಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿರುವುದು, ಮಿಲಿಟರಿ ತಂತ್ರಜ್ಞಾನದಲ್ಲೂ ಹಲವು ಕ್ಷೇತ್ರಗಳಲ್ಲಿ ಸಮಬಲ ಮತ್ತು ಕೆಲವು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿರುವುದು, ಬ್ರಿಕ್ಸ್, ಶಾಂಘೈ ಸಹಕಾರ ಸಂಘಟನೆ ಮುಂತಾದ ಸಂಘಟನೆಗಳ ಬಲ ಹೆಚ್ಚಿ ಬಹು–ಧ್ರುವೀಯ ಜಗತ್ತಿನತ್ತ ಅಪ–ಡಾಲರೀಕರಣದತ್ತ ಚಲನೆ, –ಈ ಹಿನ್ನೆಲೆಯಲ್ಲಿ ಈ ಯು.ಎಸ್. ಸಾಮ್ರಾಜ್ಯಶಾಹಿ ಅಧಿಪತ್ಯದ ಅವನತಿಯ ಬಿಕ್ಕಟ್ಟನ್ನು ನೋಡಬೇಕು. ಈ ಹಿನ್ನೆಲೆಯಲ್ಲಿ ಯು.ಎಸ್. ರೂಪಿಸಿದ್ದ ಜಾಗತಿಕ ಆರ್ಥಿಕ ರಾಜಕೀಯ ಮತ್ತು ಮಿಲಿಟರಿ ವ್ಯವಸ್ಥೆಯನ್ನು ಹಾಗೆ ಮುಂದುವರೆಸುವುದು ಸಾಧ್ಯವಿಲ್ಲ. ಯು.ಎಸ್. ಸಾಮ್ರಾಜ್ಯಶಾಹಿ ಅಧಿಪತ್ಯದ ಅವನತಿಯನ್ನು ತಡೆದು ಅದನ್ನು ಮುಂದುವರೆಸಬೇಕಾದರೆ ಅದರ ನೀತಿ–ಧೋರಣೆಗಳಲ್ಲಿ ಮತ್ತು ಜಾಗತಿಕ ವ್ಯವಸ್ಥೆಯಲ್ಲಿ ಭಾರೀ ಬದಲಾವಣೆ ಬೇಕು ಎಂದು ಯು.ಎಸ್.ನ ಆಳುವ ವರ್ಗದ ಒಂದು ವಿಭಾಗಕ್ಕೆ ಅನಿಸಿದೆ.

ಉಕ್ರೇನ್ ಯುದ್ಧ, ಮತ್ತು ಅದರ ಭಾಗವಾಗಿ–ರಶ್ಯಾದ ಮೇಲೆ ಯು.ಎಸ್.–ಯುರೋ ಕೂಟ ಹೊರಿಸಿದ ಅಭೂತಪೂರ್ವ ಆರ್ಥಿಕ ದಿಗ್ಬಂಧನಗಳು, ಈ ಆರ್ಥಿಕ ದಿಗ್ಬಂಧನವನ್ನು ಯು.ಎಸ್.ನ ಭಾರತದಂತಹ 'ಮಿತ್ರರಾಷ್ಟ್ರ'ಗಳು ಸೇರಿದಂತೆ ಜಾಗತಿಕ ದಕ್ಷಿಣದ ದೇಶಗಳು ನಿರ್ಲಕ್ಷಿಸಿದ್ದು, ಈ ಆರ್ಥಿಕ ದಿಗ್ಬಂಧನವನ್ನು ಧಿಕ್ಕರಿಸಿ ರಶ್ಯಾ ಆರ್ಥಿಕತೆ ಬೆಳೆದದ್ದು, ಬದಲಿಗೆ ಯುರೋ ಕೂಟದ ದೇಶಗಳ ಆರ್ಥಿಕಕ್ಕೆ ಅದು ಬ್ಯೂಮರಾಂಗ್ ಆದದ್ದು, ಬ್ರಿಕ್ಸ್, ಶಾಂಘೈ ಸಹಕಾರ ಸಂಘಟನೆ ಮುಂತಾದ ಸಂಘಟನೆಗಳ ವಿಸ್ತರಣೆಯ ಮತ್ತು ಅಪ–ಡಾಲರೀಕರಣದ ವೇಗ ಹೆಚ್ಚಿದ್ದು, ಉಕ್ರೇನಿನಲ್ಲಿ ಮಿಲಿಟರಿಯಾಗಿ ಸೋತಿದ್ದು ನಾಟೋ ಕೂಟದ ಮಿಲಿಟರಿ ಪ್ರಾಬಲ್ಯ ಮತ್ತು ಮಿಲಿಟರಿ ತಂತ್ರಜ್ಞಾನದ ಶ್ರೇಷ್ಠತೆಯ ಮುಂದೆ ಪ್ರಶ್ನೆ ಚಿಹ್ನೆ ಬಿದ್ದಿರುವುದು–ಇವೆಲ್ಲ ಬೆಳವಣಿಗೆಗಳು ಯು.ಎಸ್. ಸಾಮ್ರಾಜ್ಯಶಾಹಿ ಅಧಿಪತ್ಯದ ಅವನತಿಯ ವೇಗವನ್ನು ಹೆಚ್ಚಿಸಿದ್ದಲ್ಲದೆ ಅದು ಢಾಳಾಗಿ ಎಲ್ಲರಿಗೂ ಗೋಚರಿಸುವಂತೆ ಮಾಡಿದೆ. ಈ ಹಿನ್ನೆಲೆಯಲ್ಲಿ ಟ್ರಂಪ್ ಆಡಳಿತದ ಈ ನೀತಿ–ಧೋರಣೆ ಮತ್ತು ಮಿಂಚಿನ ಕ್ರಮಗಳನ್ನು ನೋಡಬೇಕು.

ಟೆಕ್ ದೈತ್ಯರ ಗಮನಾರ್ಹ ಪಾತ್ರ

ಟ್ರಂಪ್‌ನ ಚುನಾವಣಾ ಪ್ರಚಾರದಲ್ಲಿ ಮತ್ತು ಅಧ್ಯಕ್ಷೀಯ ಪದಗ್ರಹಣ ಸಂದರ್ಭದಲ್ಲಿ ಟೆಸ್ಲಾ ವಿದ್ಯುತ್ ಕಾರು ಮತ್ತು ಸ್ಪೇಸ್–ಎಕ್ಸ್ ಖ್ಯಾತಿಯ ಇಲೊನ್ ಮಸ್ಕ್ ಅವರ ಪ್ರಭಾವ ಕಣ್ಣಿಗೆ ರಾಚುವಂತಿತ್ತು. ಮಸ್ಕ್ ಮಾತ್ರವಲ್ಲ ಅಮೆಝೂನ್‌ನ ಜೆಫ್ ಬೆಝೋಸ್, ಫೇಸ್‌ಬುಕ್‌ನ ಮಾರ್ಕ್ ಝುಕರ್ ಬರ್ಗ್, ಗೂಗಲ್‌ನ ಸುಂದರ್ ಪಿಚೈ, ಆಪಲ್‌ನ ಟಿಮ್ ಕುಕ್ ಸಹ ಪದಗ್ರಹಣ ಸಂದರ್ಭದಲ್ಲಿ ಮೊದಲ ಸಾಲಿನಲ್ಲಿದ್ದರು ಮತ್ತು ಟ್ರಂಪ್ ಆಡಳಿತದ ನೀತಿ–ಧೋರಣೆಗಳು ಮತ್ತು ಕ್ರಮಗಳ ಮೇಲೆ ಹೆಚ್ಚಿನ ನಿಯಂತ್ರಣ ಹೊಂದಿದ್ದಾರೆ. ಈ ಕಂಪನಿಗಳು ಮತ್ತು ಅದರ ಡಾಲರ್ ಶತಕೋಟ್ಯಾಧಿಪತಿಗಳನ್ನು "ಟೆಕ್ ದೈತ್ಯರು" ಎಂದು ಕರೆಯಲಾಗಿದೆ. ಈ ಐದು ಕಂಪನಿಗಳು ತಮ್ಮ ಕ್ಷೇತ್ರಗಳಲ್ಲಿ ಭಾರೀ (ಜಾಗತಿಕವಾಗಿ ಅತಿ ದೊಡ್ಡ ಮಾರುಕಟ್ಟೆ ಪಾಲು ಮೂಲಕ) ಏಕಸ್ವಾಮ್ಯ ಹೊಂದಿವೆ ಮತ್ತು ಟೆಸ್ಲಾ ಬಿಟ್ಟರೆ ಉಳಿದ 4 ಕಂಪನಿಗಳು ಜಗತ್ತಿನ ಅತಿ ಹೆಚ್ಚು ಮಾರುಕಟ್ಟೆ ಮೌಲ್ಯ ಹೊಂದಿರುವ 10 ಕಂಪನಿಗಳ ಪಟ್ಟಿಯಲ್ಲಿ ಮೇಲೆ ಇವೆ. ಈ 5 ಟೆಕ್ ದೈತ್ಯರಲ್ಲದೆ ಟ್ರಂಪ್ ಆಡಳಿತದ ಹೊಸ ವ್ಯೂಹ ಮತ್ತು ನೀತಿಗಳ ಮೇಲೆ ಪೀಟರ್ ಥೀಲ್, ಡೇವಿಡ್ ಸ್ಯಾಕ್ಸ್ ಮತ್ತು ಮಾರ್ಕ್ ಆಂಡರ್ಸನ್ ಎಂಬ ಟೆಕ್ ಶತಕೋಟ್ಯಾಧಿಪತಿಗಳು ಸಹ ಪ್ರಭಾವ ಬೀರುತ್ತಿದ್ದಾರೆ. ಮಸ್ಕ್ ಅಂತೂ ಸರಕಾರದ ದಕ್ಷತೆ ಹೆಚ್ಚಿಸುವ ಇಲಾಖೆಯ (ಡಿಒಜಿಇ) ಮುಖ್ಯಸ್ಥನಾಗಿ ಮತ್ತು ಟ್ರಂಪ್‌ನ ಮುಖ್ಯ (ಆದರೆ ಅನಧಿಕೃತ)ನೀತಿ ಸಲಹಾಕಾರನಾಗಿ ಟ್ರಂಪ್ ಆಡಳಿತದ ಭಾಗವಾಗಿದ್ದಾನೆ ಮತ್ತು ಭಾರೀ ಪ್ರಭಾವ ಹೊಂದಿದ್ದಾನೆ.

ಉಕ್ರೇನ್ ಯುದ್ಧದಲ್ಲಿ ಭಾರೀ ಸೋಲಿನ ಹಿನ್ನೆಲೆಯಲ್ಲಿ ಮಸ್ಕ್ ಮತ್ತು ಈ ಟೆಕ್ ದೈತ್ಯರು ಯು.ಎಸ್.ನ ಮಿಲಿಟರಿ ತಂತ್ರಜ್ಞಾನದ ಪ್ರಸ್ತುತತೆಯನ್ನು ಪ್ರಶ್ನಿಸಿದ್ದಾರೆ. ಉಕ್ರೇನ್ ಯುದ್ಧದಲ್ಲಿ ಯು.ಎಸ್. ಮಿಲಿಟರಿಯ (ದುಬಾರಿ ಆದರೆ) ಶ್ರೇಷ್ಠ ಉಪಕರಣಗಳು ಎನ್ನಲಾದ ವಿಮಾನ ಹೊತ್ತ ಭಾರೀ ಯುದ್ಧನೌಕೆಗಳು, ಅಣು ಸಬ್ ಮರೀನ್‌ಗಳು, ಬಿ–52 ಬಾಂಬರುಗಳು, ಅಬ್ರಾಮ್ಸ್ ಟ್ಯಾಂಕುಗಳು, ಪೇಟ್ರಿಯಟ್ ವಿಮಾನ–ವಿರೋಧಿ ಕ್ಷಿಪಣಿಗಳು ಪರಿಣಾಕಾರಿಯಾಗಿರಲಿಲ್ಲ ಅಥವಾ ಅಪ್ರಯೋಜಕವಾಗಿದ್ದವು. ಎಐ (ಕೃತಕ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**